# ಅಧ್ಯಾಪಕ ಪತ್ರ

# TEACHER TEXT

## ಕನ್ನಡ

## KANNADA

### ತರಗತಿ

### IV

ಕೇರಳ ಸರಕಾರ
ಸಾರ್ವಜನಿಕ ಶಿಕ್ಷಣ ಇಲಾಖೆ

ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಸಮಿತಿ (SCERT) ಕೇರಳ
2015

*Prepared by* :

**State Council of Educational Research and Training (SCERT)**

Poojappura, Thiruvananthapuram 695 012, Kerala

*Website* : www.scertkerala.gov.in

*E-mail* : scertkerala@gmail.com

Phone : 0471-2341883, Fax : 0471-2341869

Typesetting and Layout : SCERT

Printed at : SCERT, Kerala

© Department of Education, Government of Kerala

# ಮುನ್ನುಡಿ

ಆತ್ಮೀಯ ಅಧ್ಯಾಪಕರೇ,

ಭಾಷಾ ತರಗತಿಯಲ್ಲಿ ಮಕ್ಕಳು ಬಹಳಷ್ಟು ಸಾಮರ್ಥ್ಯಗಳನ್ನು ಗಳಿಸಬೇಕಲ್ಲವೇ? ಈ ಉದ್ದೇಶಕ್ಕಾಗಿಯೇ ಪಠ್ಯಪುಸ್ತಕ, ಅಧ್ಯಾಪಕರ ಪಠ್ಯ ಹಾಗೂ ಧ್ವನಿ ಮುದ್ರಿಕೆಗಳನ್ನು ತಯಾರಿಸಲಾಗಿದೆ. ಪಠ್ಯಪುಸ್ತಕದಲ್ಲಿ ಸೂಚಿಸಿದಂತೆ ಭಾಷಾ ಸಾಮರ್ಥ್ಯಗಳನ್ನು ಬೆಳೆಸಿಕೊಳ್ಳಲು ಅನುಕೂಲವಾಗುವಂತೆ ಕನ್ನಡ ಪಠ್ಯಪುಸ್ತಕವನ್ನು ರಚಿಸಲಾಗಿದೆ. ಪಠ್ಯಪುಸ್ತಕದಲ್ಲಿ ಹೇಳಿದ ಕಲಿಕಾ ಸಾಧನೆಗಳನ್ನು ಪೂರೈಸಲು ಸಾಧ್ಯವಾಗುವಂತೆ ಮಕ್ಕಳಿಗೆ ನೆರವಾಗುವುದು ಅಧ್ಯಾಪಕರ ಜವಾಬ್ದಾರಿಯಲ್ಲವೇ? ಈ ನಿಟ್ಟಿನಲ್ಲಿ ಭಾಷಾ ಕಲಿಕೆಗೆ ಸಹಾಯವಾಗುವಂತೆ ಪ್ರಕೃತ ಕೈಪಿಡಿಯನ್ನು ರೂಪಿಸಲಾಗಿದೆ. ಇದರಲ್ಲಿ ನೀಡಿರುವ ನಿರ್ದೇಶಗಳು, ಸೂಚನೆಗಳು, ಚಟುವಟಿಕೆಗಳು, ಉದಾಹರಣೆಗಳು, ಮಾದರಿ ಎಲ್ಲವೂ ಅಧ್ಯಾಪಕರ ಸಹಾಯಕ್ಕಾಗಿ ರೂಪುಗೊಂಡವು ಎಂಬುದನ್ನು ಪರಿಗಣಿಸಿ ಬೋಧನ ಪ್ರಕ್ರಿಯೆಯನ್ನು ಫಲಪ್ರದವಾಗಿಸಲು ನೀವೆಲ್ಲರೂ ಶ್ರಮಿಸುವಿರೆಂದು ಭಾವಿಸುತ್ತೇನೆ. ನಿಮ್ಮ ಅಧ್ಯಾಪನ ಪ್ರಕ್ರಿಯೆಯಲ್ಲಿ ಮಕ್ಕಳು ಪರಿಪೂರ್ಣ ಜ್ಞಾನ ಸಂಪನ್ನರಾಗಲು ಈ ಕೈಪಿಡಿಯು ಸಹಕಾರಿಯಾಗಲಿ.

ಶುಭಾಶಯಗಳೊಂದಿಗೆ,

**ಡಾ। ಎಸ್. ರವೀಂದ್ರನ್ ನಾಯರ್**
ನಿರ್ದೇಶಕರು
ಎಸ್.ಸಿ.ಇ.ಆರ್.ಟಿ., ಕೇರಳ

## TEACHER TEXT DEVELOPMENT TEAM

# KANNADA
## STANDARD IV

### Participants

Kamalaksha Nayak K., LPSA, GWLPS, Kajampady.
Narasimha B., Rtd. HM, GLPS Pathoor
Saraswathi G., HSA, GHSS Paivalike
Shriharsha M.P., P.D. Teacher, GWLPS Kasaragod.
Shyamaprasada K., Asst.Teacher, MAUPS Kallakatta.
Vanishri C.H., LPSA, SSALPS, Marikkana

### Experts

Dr. Shrikrishna Bhat P., Professor(Rtd) Govt College Kasaragod
Shridhara N., Asst. Professor, Govt. College, Kasaragod

### Academic Co-ordinator

Dr. Faisal Mavulladathil, Reserch Officer, SCERT Thiruvanthapuram

ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಸಮಿತಿ (SCERT) ಕೇರಳ
ವಿದ್ಯಾಭವನ, ಪೂಜಪ್ಪುರ, ತಿರುವನಂತಪುರಂ 695012

# ಅನುಕ್ರಮಣಿಕೆ


| | | |
|---|---|---|
| | ಸಾಮಾನ್ಯ ಸಮೀಪನ | 7–31 |
| | ಮೌಲ್ಯನಿರ್ಣಯ ಸಮೀಪನ | 32–51 |
| | ಮಾತೃಭಾಷಾ ಕಲಿಕೆಯ ಸಮೀಪನ | 52–60 |
| 1. | ನೆಲದ ಋಣ | 61–82 |
| 2. | ನೆನೆಯುತ ನಲಿ | 83–96 |
| 3. | ನಗು ಮಗು | 97–110 |
| 4. | ಸತ್ಯವೇ ನಿತ್ಯ | 111–122 |
| 5. | ವ್ಯಕ್ತಿತ್ವ ವಿಕಾಸ | 123–140 |
| 6. | ನಾವು ಸಮಾನ | 141–152 |
| 7. | ಹೋಗೋಣ ಬಾರಾ | 153–162 |
| 8. | ಜ್ಞಾನ – ವಿಜ್ಞಾನ | 163–177 |

# ಭಾರತದ ಸಂವಿಧಾನ

## ಭಾಗ IV(ಕ)

## ಮೂಲಭೂತ ಕರ್ತವ್ಯಗಳು

**51ಕ. ಮೂಲಭೂತ ಕರ್ತವ್ಯಗಳು – ಈ ಕೆಳಗಿನವುಗಳು ಭಾರತದ ಪ್ರತಿಯೊಬ್ಬ ಪೌರನ ಕರ್ತವ್ಯಗಳಾಗಿವೆ.**

(ಕ) ಸಂವಿಧಾನವನ್ನು ಅನುಸರಿಸುವುದು, ಅದರ ಆದರ್ಶಗಳನ್ನು ಮತ್ತು ಸಂಸ್ಥೆಗಳನ್ನು, ರಾಷ್ಟ್ರಧ್ವಜ ಮತ್ತು ರಾಷ್ಟ್ರಗೀತೆಯನ್ನು ಗೌರವಿಸುವುದು.

(ಖ) ನಮ್ಮ ರಾಷ್ಟ್ರೀಯ ಸ್ವಾತಂತ್ರ್ಯ ಸಂಗ್ರಾಮಕ್ಕೆ ಸ್ಫೂರ್ತಿದಾಯಕವಾದ ಉದಾತ್ತ ಆದರ್ಶಗಳನ್ನು ಪೋಷಿಸುವುದು ಮತ್ತು ಅನುಸರಿಸುವುದು.

(ಗ) ಭಾರತದ ಸಾರ್ವಭೌಮತೆಯನ್ನು, ಏಕತೆಯನ್ನು ಮತ್ತು ಅಖಂಡತೆಯನ್ನು ಎತ್ತಿ ಹಿಡಿಯುವುದು ಹಾಗೂ ಸಂರಕ್ಷಿಸುವುದು.

(ಘ) ದೇಶವನ್ನು ರಕ್ಷಿಸಲು ಮತ್ತು ರಾಷ್ಟ್ರಕ್ಕೆ ಸೇವೆ ಸಲ್ಲಿಸಲು ಕರೆ ಬಂದಾಗ, ಹಾಗೆ ಮಾಡುವುದು.

(ಙ) ಧಾರ್ಮಿಕ, ಭಾಷಿಕ ಮತ್ತು ಪ್ರಾದೇಶಿಕ ಅಥವಾ ಜಾತಿ ಪಂಗಡಗಳ ಭಿನ್ನತೆಗಳಿಂದ ಅತೀತವಾಗಿ ಭಾರತದ ಎಲ್ಲ ಜನತೆಯಲ್ಲಿ ಸಾಮರಸ್ಯವನ್ನು ಮತ್ತು ಸಮಾನ ಭ್ರಾತೃತ್ವದ ಭಾವನೆಯನ್ನು ಬೆಳೆಸುವುದು, ಸ್ತ್ರೀಯರ ಗೌರವಕ್ಕೆ ಕುಂದುಂಟುಮಾಡುವ ಆಚರಣೆಯನ್ನು ಬಿಟ್ಟು ಬಿಡುವುದು.

(ಚ) ನಮ್ಮ ಸಮ್ಮಿಶ್ರ ಸಂಸ್ಕೃತಿಯ ಭವ್ಯ ಪರಂಪರೆಯನ್ನು ಗೌರವಿಸುವುದು ಹಾಗೂ ಕಾಪಾಡುವುದು.

(ಛ) ಅರಣ್ಯಗಳು, ಸರೋವರಗಳು, ನದಿಗಳು ಮತ್ತು ವನ್ಯಜೀವಿಗಳು ಸೇರಿದಂತೆ ನೈಸರ್ಗಿಕ ಪರಿಸರವನ್ನು ಸಂರಕ್ಷಿಸುವುದು ಹಾಗೂ ಅಭಿವೃದ್ಧಿ ಮಾಡುವುದು, ಪ್ರಾಣಿಗಳಿಗೆ ಅನುಕಂಪ ತೋರಿಸುವುದು.

(ಜ) ವೈಜ್ಞಾನಿಕ ಮನೋಭಾವ, ಮಾನವೀಯತೆ, ಜಿಜ್ಞಾಸೆ ಮತ್ತು ಸುಧಾರಣಾ ಪ್ರವೃತ್ತಿಯನ್ನು ಬೆಳೆಸುವುದು.

(ಝ) ಸಾರ್ವಜನಿಕ ಸೊತ್ತನ್ನು ರಕ್ಷಿಸುವುದು ಮತ್ತು ಹಿಂಸೆಯನ್ನು ತ್ಯಜಿಸುವುದು.

(ಞ) ರಾಷ್ಟ್ರವು ನಿರಂತರವಾಗಿ ಸಾಧನೆ ಮತ್ತು ಸಿದ್ಧಿಯ ಔನ್ನತ್ಯಕ್ಕೆ ತಲುಪಲು ವೈಯಕ್ತಿಕ ಹಾಗೂ ಸಾಮಾಜಿಕ ಚಟುವಟಿಕೆಯ ಎಲ್ಲ ಕಾರ್ಯಕ್ಷೇತ್ರಗಳಲ್ಲಿ ಸಮರ್ಪಕವಾಗಿ ಶ್ರಮಿಸುವುದು.

(ಟ) ಆರು ಮತ್ತು ಹದಿನಾಲ್ಕು ವರ್ಷಗಳ ನಡುವಣ ತನ್ನ ಮಕ್ಕಳಿಗೋ, ತನ್ನ ರಕ್ಷಣೆಯಲ್ಲಿರುವ ಬಾಲಕರಿಗೋ, ಆಯಾ ಸಂದರ್ಭಾನುಸಾರ ಹೆತ್ತವರೋ ರಕ್ಷಕರೋ ವಿದ್ಯಾಭ್ಯಾಸಕ್ಕಿರುವ ಅವಕಾಶವನ್ನು ಏರ್ಪಡಿಸುವುದು.

# 1. ನೆಲದ ಋಣ

ನೆಲಜಲವನ್ನು ಬಿಟ್ಟರೆ ಮಾನವ ಬದುಕಲಾರ ಹಾಗೆಂದು ನೆಲಜಲ ಮಾನವನ ಉಪಭೋಗಕ್ಕೆ ಮಾತ್ರ ಇರುವುದಲ್ಲ. ಅದರೊಂದಿಗೆ ಹೊಂದಿಕೊಂಡು ಬದುಕಬೇಕಾಗಿದೆ. ಪ್ರಕೃತಿಯನ್ನು ಉಳಿಸಿದರೆ ನಾವು ಉಳಿಯುತ್ತೇವೆ, ಕೆಡಿಸಿದರೆ ನಾವೂ ಕೆಟ್ಟು ನಾಶವಾಗುತ್ತೇವೆ. ಆದ್ದರಿಂದ ಪ್ರಕೃತಿ, ಪರಿಸರ ನಮಗೆ ಮುಖ್ಯ ಅದನ್ನು ಜತನದಿಂದ ಕಾಪಾಡಬೇಕು ಎಂಬುದನ್ನು ತಿಳಿಸುವುದಕ್ಕಾಗಿ ಗಾಳಿಮಳೆ (ಪದ್ಯ) ಪುನರುದ್ಧಾರ (ಕಥೆ) ಮತ್ತು ಗದ್ದೆಯ ಗಮ್ಮತ್ತು (ಲೇಖನ) ಎಂಬ ಮೂರು ಪಾಠಗಳನ್ನು ಕೊಡಲಾಗಿದೆ. ಮಕ್ಕಳು ಕಲಿಕೆಯಿಂದ ಆಶಯಗಳನ್ನು ತಿಳಿದುಕೊಳ್ಳುವಂತೆ, ಭಾಷಾ ಕೌಶಲಗಳನ್ನು ಗಳಿಸುವಂತೆ ಮಾಡುವುದು ನಮ್ಮ ಕರ್ತವ್ಯ.

## ಕಲಿಕಾ ಸಾಧನೆಗಳು

- ಹೊಸ ಪ್ರಯೋಗಗಳು, ಪದಗಳು, ಗಾದೆಗಳು, ನುಡಿಗಟ್ಟುಗಳು ಮೊದಲಾದುವುಗಳನ್ನು ಉಪಯೋಗಿಸಿಕೊಂಡು ಸಂದರ್ಭಾನುಸಾರ ಮಾತನಾಡುವುದು.
- ಕಥೆ, ಕವಿತೆ, ವಿವರಣೆ, ವರ್ಣನೆ ಮೊದಲಾದುವುಗಳನ್ನು ಆಲಿಸಿ ಮತ್ತು ಓದಿ ತನ್ನದೇ ಆದ ರೀತಿಯಲ್ಲಿ ಹೇಳುವುದು ಮತ್ತು ಬರೆಯುವುದು.
- ಕವಿತೆಯನ್ನು ಅರ್ಥೈಸಿಕೊಂಡು ರಾಗ, ತಾಳ, ಭಾವಗಳನ್ನು ಪರಿಗಣಿಸಿ ಹಾಡುವುದು.
- ಕವಿತೆಯ ಆಶಯವನ್ನು ಅರಿತು ಆಸ್ವಾದಿಸುವುದು ಮತ್ತು ಆಸ್ವಾದನ ಟಿಪ್ಪಣಿಯನ್ನು ಬರೆಯುವುದು.
- ವಿಶೇಷಣಗಳು, ವಿಶೇಷ ಪ್ರಯೋಗಗಳು ಮೊದಲಾದುವುಗಳನ್ನು ಸೂಕ್ತವಾಗಿ ಸೇರಿಸಿ ವಾಕ್ಯಗಳನ್ನು ಬರೆಯುವುದು.
- ಪಾಠಭಾಗವನ್ನು ವ್ಯವಹಾರ ರೂಪಕ್ಕೆ ತಕ್ಕಂತೆ ನಿರರ್ಗಳವಾಗಿ ಸ್ವರಭಾರ ಮತ್ತು ಉಚ್ಚಾರಸ್ಪಷ್ಟತೆಯೊಂದಿಗೆ ಓದುವುದು.
- ಪತ್ರಿಕಾವರದಿ ಮತ್ತು ವಾರ್ತೆಗಳನ್ನು ವಿಶ್ಲೇಷಿಸಿ (ಯಾರು, ಯಾರಿಗೆ, ಎಲ್ಲಿ, ಏನು, ಹೇಗೆ, ಯಾಕೆ) ಪತ್ರ, ಭಿತ್ತಿಪತ್ರ, ಕರಪತ್ರ ಮೊದಲಾದುವುಗಳನ್ನು ರಚಿಸುವುದು.
- ಕಥೆ, ಕವಿತೆ, ವಿವರಣೆ, ಭಿತ್ತಿಪತ್ರಿಕೆ ಮೊದಲಾದ ಸೃಜನಾತ್ಮಕ ರಚನೆಗಳಲ್ಲಿ ತೊಡಗುವುದು ಮತ್ತು ಅವುಗಳನ್ನು ಸಂಗ್ರಹಿಸಿ ಸಂಚಿಕೆ, ಹಸ್ತಪತ್ರಿಕೆ, ಭಿತ್ತಿಪತ್ರಿಕೆಗಳನ್ನು ತಯಾರಿಸುವುದು.
- ಕಥೆ ಮತ್ತು ಕವಿತೆಗಳ ಸಾಲುಗಳ ಅರ್ಥವನ್ನು ತಿಳಿದುಕೊಂಡು ಪದಸೌಂದರ್ಯವನ್ನು ಆಸ್ವಾದಿಸಿ ಆಶಯವನ್ನು ಹೇಳುವುದು ಮತ್ತು ಬರೆಯುವುದು.
- ಪದಪ್ರಯೋಗ, ಭಾಷಾ ಪ್ರಯೋಗ, ಆಶಯ ಮೊದಲಾದವುಗಳನ್ನು ತನ್ನ ರಚನೆಯಲ್ಲಿ ಬಳಸಿಕೊಳ್ಳುವುದು.
- ಕೃತಿರಚನೆಯಲ್ಲಿ ಇತರರು ಬಳಸಿದ ಆಶಯ, ಪ್ರಯೋಗ, ನುಡಿಗಟ್ಟು ಮೊದಲಾದುವುಗಳನ್ನು ಹೋಲಿಸಿ ತನ್ನ ರಚನೆಗಳನ್ನು ಉತ್ತಮಪಡಿಸುವುದು.
- ಬರವಣಿಗೆಯಲ್ಲಿ ಬಳಕೆಯಾಗುವ ಲೇಖನ ಚಿಹ್ನೆಗಳನ್ನು ಗುರುತಿಸಿಕೊಂಡು ಅವುಗಳನ್ನು ತನ್ನ ರಚನೆಯಲ್ಲಿ ಬಳಸುವುದು.
- ಪಾಠಭಾಗದಲ್ಲಿ ಬಳಕೆಯಾದ ಪದಗಳನ್ನು ವಿಂಗಡಿಸಿ ಬರೆಯುವುದು ಮತ್ತು ಸೇರಿಸಿ ಬರೆಯುವುದು.
- ಓದುವ ಮೂಲೆ, ವಾಚನಾಲಯ ಮತ್ತು ಇತರೆಡೆಗಳಿಂದ ಲಭಿಸುವ ಓದುವ ಸಾಮಗ್ರಿಗಳನ್ನು ಓದಿ ದೊರೆತ ಅನುಭವಗಳನ್ನು ವಿಭಿನ್ನ ರೀತಿಯಲ್ಲಿ ಹಂಚಿಕೊಳ್ಳುವುದು.
- ಓದಿದ, ಆಲಿಸಿದ ವ್ಯವಹಾರ ರೂಪದ ಆಶಯವನ್ನು ತಿಳಿದುಕೊಂಡು ಇನ್ನೊಂದು ವ್ಯವಹಾರ ರೂಪವಾಗಿ ಬದಲಾಯಿಸುವುದು.
- ಮಾಹಿತಿ ತಂತ್ರಜ್ಞಾನವನ್ನು (ICT) ಉಪಯೋಗಿಸಿ, ಕೇಳಿಯೂ ನೋಡಿಯೂ ಆಶಯವನ್ನು ತಿಳಿದುಕೊಂಡು ಸ್ವಂತ ರಚನೆ ಮಾಡುವುದು ಮತ್ತು ಮಂಡಿಸುವುದು.

## ಯೂನಿಟ್ ಗ್ರಿಡ್

**ಯೂನಿಟ್ 1 : ನೆಲದ ಋಣ** ಸಮಯ : 6+6 ಪೀರಿಯಡ್‌ಗಳು

| ಪಾಠದ ಹೆಸರು | ಆಶಯ/ ಉದ್ದೇಶಗಳು | ಪ್ರಕ್ರಿಯೆ | ಪೂರಕ ಸಾಮಗ್ರಿಗಳು | ಮೌಲ್ಯನಿರ್ಣಯ |
|---|---|---|---|---|
| 1. ಗಾಳಿಮಳೆ | • ಆಶಯವನ್ನು ಅರ್ಥೈಸಿಕೊಂಡು ರಾಗ, ತಾಳ ಭಾವಗಳಿಂದ ಹಾಡುವುದು.<br>• ಕವಿತೆಯ ಆಶಯವನ್ನು ತಿಳಿಯುವುದು.<br>• ಕವಿತೆ ಬರೆಯುವ ಕ್ರಮವನ್ನು ತಿಳಿಯುವುದು.<br>• ಗಾಳಿಮಳೆ ಬರುವಾಗ ಉಂಟಾಗುವ ಹಲವಾರು ತೊಂದರೆಗಳ ಕುರಿತು ತಿಳಿಯುವುದು. | • ಕವಿತೆಯನ್ನು ರಾಗವಾಗಿ ಹಾಡುವುದು<br>• ಕವಿತೆಯ ಸಾರಾಂಶವನ್ನು ಬರೆಯುವುದು.<br>• ಮಳೆಗೆ ಸಂಬಂಧಿಸಿದ ಕವಿತೆಗಳನ್ನು ಸಂಗ್ರಹಿಸುವುದು.<br>• ಕವಿತೆ ಮುಂದುವರಿಸಿ ಬರೆಯುವುದು.<br>• ಗಾಳಿ ಮಳೆಯಿಂದ ಉಂಟಾಗುವ ತೊಂದರೆಗಳಿಗೆ ಸಂಬಂಧಿಸಿದಂತೆ ಮನವಿಪತ್ರ, ಪತ್ರಿಕಾ ವರದಿಗಳನ್ನು ತಯಾರಿಸುವುದು. | • ದಾರಿದೀಪ C.D<br>• ಪತ್ರಿಕಾ ವರದಿಗಳು, ಚಿತ್ರಗಳು<br>• ಪಂಜೆಯವರ ಕೃತಿಗಳು<br>• ಶತಮಾನದ ಗಾನ ಇತ್ಯಾದಿ ಪುಸ್ತಕಗಳು | • ಕವಿತಾ ರಚನೆ<br>• ಮನವಿ ಪತ್ರ<br>• ವಿವರಣೆ<br>• ಪತ್ರಿಕಾ ವರದಿ<br>• ಚಿತ್ರ ರಚನೆ |
| 2. ಪುನರುದ್ಧಾರ | • ಕಾಡುಗಳು ಪ್ರಕೃತಿಯ ಸೌಂದರ್ಯವನ್ನು ಹೆಚ್ಚಿಸುತ್ತದೆ.<br>• ಕಾಡುಗಳು ಜೀವಿಗಳ ಬದುಕಿಗೆ ಆಧಾರವಾಗಿವೆ.<br>• ಕಾಡುಗಳನ್ನು ಸಂರಕ್ಷಿಸಬೇಕಾದುದು ಎಲ್ಲರ ಕರ್ತವ್ಯ ಎಂದು ತಿಳಿಯುವುದು.<br>• ಕಥೆಯನ್ನು ಸೂಕ್ತ ಸ್ವರಭಾರ ಹಾಗೂ ಉಚ್ಚಾರ ಸ್ಪಷ್ಟತೆಯೊಂದಿಗೆ ಓದುವುದು.<br>• ಕಥೆಯ ಆಶಯವನ್ನು ತಿಳಿಯುವುದು. | • ಕಥೆಯನ್ನು ಸೂಕ್ತ ಸ್ವರಭಾರದೊಂದಿಗೆ ಓದುವುದು.<br>• ಸೂಚನಾ ಫಲಕ ತಯಾರಿಸುವುದು.<br>• ವರ್ಣನೆ ಬರೆಯುವುದು.<br>• ಮನವಿ ಪತ್ರ ಬರೆಯುವುದು.<br>• ಪ್ರವಾಸಾನುಭವ ಬರೆಯುವುದು. | • ದಾರಿದೀಪ C.D<br>• ಸೂಚನಾ ಫಲಕ | • ವರ್ಣನೆ<br>• ಪ್ರವಾಸಾನುಭವ |

# ಯೂನಿಟ್ ಗ್ರಿಡ್

**ಯೂನಿಟ್ 1 : ನೆಲದ ಋಣ** ಸಮಯ : 6 ಪೀರಿಯಡ್‌ಗಳು

| ಪಾಠದ ಹೆಸರು | ಆಶಯ/ ಉದ್ದೇಶಗಳು | ಪ್ರಕ್ರಿಯೆ | ಪೂರಕ ಸಾಮಗ್ರಿಗಳು | ಮೌಲ್ಯನಿರ್ಣಯ |
|---|---|---|---|---|
| | • ಗಾದೆಗಳು ವಿಶಾಲವಾದ ಅರ್ಥವ್ಯಾಪ್ತಿಯನ್ನು ಹೊಂದಿವೆ.<br>• ದೈನಂದಿನ ಭಾಷಾ ಪ್ರಯೋಗದಲ್ಲಿ ಗಾದೆಗಳನ್ನು ಬಳಸುವುದು.<br>• ಶಬ್ದ ಭಂಡಾರವನ್ನು ಹೆಚ್ಚಿಸುವಲ್ಲಿ ಹಾಗೂ ಬುದ್ಧಿ ಶಕ್ತಿಯನ್ನು ಚುರುಕುಗೊಳಿಸುವಲ್ಲಿ ಭಾಷಾ ಆಟಗಳು ಸಹಕಾರಿಯಾಗಿವೆ. | • ಗಾದೆಗಳನ್ನು ಸಂಗ್ರಹಿಸುವುದು ಮತ್ತು ವಿವರಿಸುವುದು<br>• ಮರಗಳ ಹೆಸರುಗಳನ್ನು ಪತ್ತೆ ಹಚ್ಚಿ ಬರೆಯುವುದು | • ಗಾದೆಯ ಪುಸ್ತಕಗಳು | • ಗಾದೆಯ ಸಂಗ್ರಹ<br>• ಗಾದೆ ವಿವರಣೆ |
| 3. ಗದ್ದೆಯ ಗಮ್ಮತ್ತು | • ಕೃಷಿಯಿಂದ ನಮ್ಮ ಸಂಸ್ಕೃತಿಯು ಬೆಳೆದು ಬಂದಿದೆ.<br>• ಬೇಸಾಯ ಮತ್ತು ಬೇಸಾಯಕ್ಕೆ ಸಂಬಂಧಿಸಿದ ಆಚರಣೆಗಳ ಕುರಿತು ತಿಳಿಯುವುದು.<br>• ಪಾಠಭಾಗವನ್ನು ಸೂಕ್ತಭಾರದೊಂದಿಗೆ ಓದುವುದು. | • ಘೋಷಣ ವಾಕ್ಯ ಬರೆಯುವುದು.<br>• ಅನುಭವ ಬರೆಯುವುದು.<br>• ಕೃಷಿಗಾದೆಗಳ ಸಂಗ್ರಹ<br>• ಪ್ರಶ್ನಾವಳಿಗಳನ್ನು ತಯಾರಿಸುವುದು.<br>• ಸಂದರ್ಶನ ನಡೆಸುವುದು. | • ದಾರಿದೀಪ C.D<br>• ಘೋಷಣ ವಾಕ್ಯಗಳು<br>• ಕೃಷಿ ಗಾದೆಗಳು | • ಅನುಭವ ಟಿಪ್ಪಣಿ<br>• ಕೃಷಿ ಗಾದೆಗಳ ಸಂಗ್ರಹ<br>• ಸಂದರ್ಶನ ವರದಿ |

# 1. ಗಾಳಿಮಳೆ

## ಪಾಠಭಾಗದೆಡೆಗೆ

ಗಾಳಿಮಳೆಯ ಕುರಿತಾದ ಚರ್ಚೆಯ ಮೂಲಕ ಅಥವಾ ಗಾಳಿಮಳೆಗೆ ಸಂಬಂಧಿಸಿ ಈ ಹಿಂದೆ ಕಲಿತಿರುವ ಪದ್ಯದ ಮೂಲಕ ಅಥವಾ ಗಾಳಿಮಳೆಗೆ ಸಂಬಂಧಿಸಿದ ಚಿತ್ರಗಳು, ವಾರ್ತೆಗಳ ಮೂಲಕ ಪಾಠಭಾಗಕ್ಕೆ ಬರಬಹುದು.

## ಚಟುವಟಿಕೆಗಳು

### ಹಾಡುವ

"ಗಾಳಿಮಳೆ ಪದ್ಯವನ್ನು ಹಾಡುವುದಕ್ಕಿಂತ ಮೊದಲು ಗಾಳಿ ಮಳೆ ಬರುವ ಸಂದರ್ಭದಲ್ಲಿ ಕಂಡುಬರುವ ದೃಶ್ಯಗಳನ್ನು ನೆನಪಿಸುವುದು. ಈ ಕೆಳಗಿನ ಪ್ರಶ್ನೆಗಳನ್ನು ಕೇಳಿ ಮಕ್ಕಳ ಅನುಭವಗಳನ್ನು ತಿಳಿಯುವುದು.

- ನಮ್ಮ ಸುತ್ತುಮುತ್ತಲು ಯಾವ ಯಾವ ದೃಶ್ಯಗಳನ್ನು ಕಾಣಬಹುದು?
- ಆಕಾಶದಲ್ಲಿ ಏನೇನು ಕಾಣುತ್ತಿವೆ?
- ಮಳೆ ಬರುವಾಗ ಪ್ರಕೃತಿಯು ಹೇಗೆ ಕಾಣುತ್ತದೆ?
- ಮಳೆಯ ಜೊತೆಗೆ ಗಾಳಿ ಬೀಸಿದಾಗ ಹೇಗೆ ಕಾಣುತ್ತದೆ?

ಇತ್ಯಾದಿ ಪ್ರಶ್ನೆಗಳನ್ನು ಕೇಳಿ ಪದ್ಯವನ್ನು ಹಾಡಲು ಅವಕಾಶ ಕೊಡುವುದು. ಉತ್ತಮವಾಗಿ ಹಾಡುವ ಕೆಲವು ಮಕ್ಕಳಿಂದ ವೈಯಕ್ತಿಕವಾಗಿ ಗಟ್ಟಿಯಾಗಿ ಓದಲು ಹೇಳುವುದು. ವಿಭಿನ್ನ ಮಟ್ಟದ ಮಕ್ಕಳಿಂದ ಪದ್ಯದ ಒಂದೋ, ಎರಡೋ ಪಾರಾಗಳನ್ನು ಹಾಡಲು ಹೇಳುವುದು.

ಬಳಿಕ ಮಕ್ಕಳಿಂದ ಪದ್ಯದಲ್ಲಿ ಬಂದಿರುವ ಕೆಲವು ಪದಗಳನ್ನು ಹೇಳಿಸಿ, ಕರಿಹಲಗೆಯಲ್ಲಿ ಬರೆದು, ಅದರ ಆಧಾರದಲ್ಲಿ ವಿದ್ಯಾರ್ಥಿಗಳನ್ನು ಗುಂಪುಮಾಡುವುದು. ಗುಂಪಿನಲ್ಲಿ ಪದ್ಯಕ್ಕೆ ರಾಗ ಹಾಕಲು ಹೇಳುವುದು.

ಒಂದು ಗುಂಪಿನವರು ಹಾಡುವಾಗ, ಉಳಿದ ಗುಂಪಿನವರು ಮೌಲ್ಯಮಾಪನ ನಡೆಸುವುದು. ಉತ್ತಮವಾಗಿ ಹಾಡಿದ ಗುಂಪನ್ನು ಆರಿಸಿ ಅಭಿನಂದಿಸುವುದು.

ಈ ಸಂದರ್ಭದಲ್ಲಿ ಉತ್ತಮವಾದ ಹಾಡುವಿಕೆಯ ಮಾನದಂಡಗಳ ಬಗ್ಗೆ ಚರ್ಚಿಸಬೇಕು.

- ರಾಗ, ತಾಳ, ಭಾವ
- ಅಕ್ಷರ ಸ್ಫುಟತೆ
- ಸ್ವರಭಾರ
- ಎಲ್ಲರ ಭಾಗವಹಿಸುವಿಕೆ

### ಉತ್ತರ ಬರೆಯುವ

ಪದ್ಯದ ಆಶಯವನ್ನು ದೃಢಗೊಳಿಸಲಿರುವ ಒಂದು ಚಟುವಟಿಕೆಯಿದು. ವಿದ್ಯಾರ್ಥಿಗಳು ಒಮ್ಮೆ ಈ ಪದ್ಯವನ್ನು ಓದಲಿ. ಬಳಿಕ ಪ್ರಶ್ನೋತ್ತರ ಚಟುವಟಿಕೆಯನ್ನು ಮಾಡಲಿ. ವೈಯಕ್ತಿಕವಾಗಿ ಉತ್ತರವನ್ನು ಬರೆದ ನಂತರ ಗುಂಪಿನಲ್ಲಿ ಮಂಡಿಸಿ ಉತ್ತಮಪಡಿಸಲಿ. ಅಧ್ಯಾಪಕರು ಅಗತ್ಯವಿದ್ದಲ್ಲಿ ಸಹಾಯಮಾಡುವುದು.

**ಪದಗಳ ಅರ್ಥ ಕಂಡುಹಿಡಿಯುವ**

ಪದ್ಯದಲ್ಲಿರುವ ನವೀನ ಪದಗಳನ್ನು ಹುಡುಕಿ ಅವುಗಳ ಅರ್ಥವನ್ನು ಅರ್ಥಕೋಶದ ಸಹಾಯದಿಂದ ಕಂಡುಹಿಡಿದು ಬರೆಯುವುದು.

**ಪ್ರಾಸಪದ ಗುರುತಿಸುವ**

ಪದ್ಯದಲ್ಲಿರುವ ಪ್ರಾಸಪದಗಳನ್ನು ತಮ್ಮ ಅನುಭವದ ಆಧಾರದಲ್ಲಿ ಕಂಡುಹಿಡಿದು ಬರೆಯುವುದು. ಕೆಲವರಿಂದ ಓದಿಸುವುದು. ಬಳಿಕ ಉತ್ತಮಪಡಿಸಿ ಬರೆಯುವುದು.

ಮರಗಳು – ಗಿಡಗಳು
ತಪ್ಪಿಸು – ಎದುರಿಸು
ಮೋಡಗಳ್ – ಮಿಂಚುಗಳ್
ಓಡಿಸೆ – ಹರಿಯಿಸೆ
ಅರಳಿತು – ಸೇರಿತು

**ಪೂರ್ತಿಗೊಳಿಸುವ**

ಪದ್ಯದ ಸಾಲುಗಳ ಆಧಾರದಲ್ಲಿ ಖಾಲಿ ಬಿಟ್ಟ ಸ್ಥಳಗಳನ್ನು ಭರ್ತಿಗೊಳಿಸುವುದು.

ಸೋಗೆ, ಮುಸುಕಿತು, ಅಡಿಕೆ, ಭಾನುದೇವನ, ಮಲ್ಲಿಗೆ

**ಸಾರಾಂಶ ಬರೆಯುವ**

'ಗಾಳಿ ಮಳೆ' ಪದ್ಯವನ್ನು ವೈಯಕ್ತಿಕವಾಗಿ ಓದಲು ತಿಳಿಸುವುದು. ಬಳಿಕ ಅಧ್ಯಾಪಕರು ಆಶಯಗ್ರಹಣ ಪ್ರಶ್ನೆಗಳನ್ನು ಕೇಳುವುದು. ಮಕ್ಕಳು ಪದ್ಯದ ಆಶಯವನ್ನು ತಿಳಿದುಕೊಂಡು ಸ್ವಂತ ವಾಕ್ಯಗಳಲ್ಲಿ ಸಾರಾಂಶವನ್ನುಬರೆಯಲಿ. ನಂತರ ಗುಂಪಿನಲ್ಲಿ ಮಂಡಿಸಿ ಉತ್ತಮಪಡಿಸಲಿ. ಗುಂಪಿನ ಮಂಡನೆಯ ಬಳಿಕ ಅಧ್ಯಾಪಕರು ಬರೆದ ಸಾರಾಂಶವನ್ನು ಪ್ರದರ್ಶಿಸುವುದು. ಅದರ ಆಧಾರದಲ್ಲಿ ಮಕ್ಕಳು ಉತ್ತಮಪಡಿಸಲಿ.

**ಸಾರಾಂಶ**

'ಗಾಳಿಮಳೆ' ಪದ್ಯವನ್ನು ಅಬ್ದುಲ್‌ರಹಿಮಾನ್ ಬರೆದಿದ್ದಾರೆ. ಈ ಪದ್ಯದಲ್ಲಿ ಗಾಳಿಮಳೆ ಬರುವಾಗ ಏನೇನು ಆಗುವುದು ಎಂಬುದನ್ನು ವಿವರಿಸಿದ್ದಾರೆ. ಮಳೆ ಬರುವಾಗ ಮೋಡ ಮುಸುಕಿ ಕತ್ತಲಾಯಿತು. ಮಿಂಚು ಮಿಂಚಿ ಗುಡುಗು ಗುಡುಗಿ ಸಿಡಿಲು ಬಡಿಯಿತು. ಗಾಳಿಗೆ ಅಡಿಕೆ, ತೆಂಗಿನ ಮರಗಳು ಮುರಿದುವು. ದನಗಳು ಹಟ್ಟಿಗೆ ಓಡಿದುವು. ಗಾಳಿಯ ಶಕ್ತಿಗೆ ಇದಿರಿಲ್ಲ. ಗಾಳಿ ಸಿಡಿಲನ್ನು ಓಡಿಸಿತು. ನೀರು ಭೂಮಿಗೆ ಬಂತು. ಮತ್ತೆ ಬೆಳಕಾಯಿತು.

**ವಿವರಣೆ ಬರೆಯುವ**

ಈ ಚಟುವಟಿಕೆಯ ಮೊದಲು, ಗಾಳಿಮಳೆ ಬರುವಾಗ ಪ್ರಕೃತಿಯಲ್ಲಿ ಉಂಟಾಗುವ ಬದಲಾವಣೆಗಳು, ಅನಾಹುತಗಳು ಇತ್ಯಾದಿಗಳನ್ನು ಚರ್ಚಿಸಬೇಕು. ಚರ್ಚೆಯನ್ನು ನಡೆಸಿದ ಬಳಿಕ ವೈಯಕ್ತಿಕವಾಗಿ ವಿವರಣೆಯನ್ನು ಬರೆಯಲು ತಿಳಿಸುವುದು. ಮಕ್ಕಳನ್ನು ಗುಂಪುಗಳಾಗಿ ಮಾಡಿ, ಗುಂಪಿನಲ್ಲಿ ಮಂಡನೆ, ಉತ್ತಮಪಡಿಸಿ ಬರೆಯುವುದು. ಅಧ್ಯಾಪಕರು ಅಗತ್ಯವಿರುವ ಸಹಾಯವನ್ನು ನೀಡುವುದು.

## ಮನವಿ ಪತ್ರ ಬರೆಯುವ

ಗಾಳಿಮಳೆಯಿಂದ ಉಂಟಾಗುವ ಕಷ್ಟ – ನಷ್ಟಗಳು ಯಾವುವು?

ಮಕ್ಕಳಲ್ಲಿ ಪ್ರಶ್ನಿಸಿ ಒಬ್ಬೊಬ್ಬರಿಂದಲೂ ಹೇಳಿಸುವುದು. ಬಳಿಕ ಈ ಕಷ್ಟ ನಷ್ಟವು ನಮ್ಮ ಊರಿನ ಕೃಷಿಕರಿಗೆ ಆಗಿದೆ ಎಂದು ತಿಳಿಸುವುದು. ಇವುಗಳಲ್ಲಿ ಯಾವುದಾದರೂ ಒಂದನ್ನು ಆಯ್ದು ಕೊಂಡು ಪರಿಹಾರ ನೀಡಬೇಕು ಎಂದು ವಿನಂತಿಸಿ ಜಿಲ್ಲಾಧಿಕಾರಿಗಳಿಗೆ ಪತ್ರ ಬರೆಯಲು ತಿಳಿಸುವುದು.

ಪತ್ರ ಬರೆಯುವಾಗ ಏನೆಲ್ಲ ತಿಳಿದಿರಬೇಕು? ಮಕ್ಕಳಲ್ಲಿ ಚರ್ಚಿಸುವುದು.

ಯಾರು ಬರೆಯುವುದು? (ಇವರಿಂದ)

ಯಾರಿಗೆ ಬರೆಯುವುದು? (ಇವರಿಗೆ)

ಯಾಕೆ ಬರೆಯುವುದು? (ವಿಷಯ)

ಎಲ್ಲಿಂದ ಬರೆಯುವುದು? (ಸ್ಥಳ)

ಯಾವಾಗ ಬರೆಯುವುದು? (ತಾರೀಕು)

ಸಂಬೋಧನೆ ಹೇಗೆ? (ಮಾನ್ಯರೇ)

ಮುಕ್ತಾಯ ಹೇಗೆ? (ಇತೀ ನಿಮ್ಮ ವಿಶ್ವಾಸಿ)

ಅವರು ಈ ಮೊದಲು ಬರೆದ ಪತ್ರಗಳನ್ನು ನೆನಪಿಸಿಕೊಳ್ಳಲು ಹೇಳುವುದು. ಆ ಮೂಲಕ ವೈಯಕ್ತಿಕ ಪತ್ರ ಹಾಗೂ ಮನವಿ ಪತ್ರಗಳಿಗೆ ಇರುವ ವ್ಯತ್ಯಾಸವನ್ನು ತಿಳಿಸಿಕೊಡುವುದು. ವೈಯಕ್ತಿಕ ಮತ್ತು ಮನವಿ ಪತ್ರಗಳ ಮಾದರಿಯನ್ನು ತರಗತಿಯಲ್ಲಿ ಪ್ರದರ್ಶಿಸುವುದು.

### ಮನವಿ ಪತ್ರ

ಇವರಿಂದ,

ವೈಶಾಲಿ ಕೆ<br>
IV ನೆ ತರಗತಿ<br>
ಸರಕಾರಿ ಹಿರಿಯ ಪ್ರಾಥಮಿಕ ಶಾಲೆ, ಕಾಸರಗೋಡು

ಇವರಿಗೆ,

ಜಿಲ್ಲಾಧಿಕಾರಿಗಳು<br>
ಕಾಸರಗೋಡು ಜಿಲ್ಲೆ<br>
ಕಾಸರಗೋಡು

ಮಾನ್ಯರೇ,

ನಿನ್ನೆ ವಿಪರೀತ ಗಾಳಿ ಮಳೆ ಬಂದಿದೆ. ನಮ್ಮ ಊರಿನಲ್ಲಿ ತುಂಬ ನಾಶ ನಷ್ಟ ಉಂಟಾಗಿದೆ. ಕೃಷಿಕರು ಕಷ್ಟದಲ್ಲಿದ್ದಾರೆ. ತಾವು ಸ್ಥಳ ಪರಿಶೀಲನೆ ನಡೆಸಿ ಕೂಡಲೇ ನಷ್ಟ ಪರಿಹಾರವನ್ನು ಕೊಡಿಸಬೇಕಾಗಿ ವಿನಂತಿ.

ಕಾಸರಗೋಡು<br>
05.04.2015

ಇತಿ ನಿಮ್ಮ ವಿಶ್ವಾಸಿ<br>
**ವೈಶಾಲಿ ಕೆ.**

### ಪತ್ರಿಕಾ ವರದಿ ಬರೆಯುವ

ಗಾಳಿ ಮಳೆ ಬಂದಾಗ ಏನೇನು ನಾಶನಷ್ಟ ಗಳಾಗುತ್ತವೆ ಎಂದು ಈಗಾಗಲೇ ತಿಳಿದಿದ್ದೇವೆ. ಇದನ್ನು ಕಾಸರಗೋಡಿನ ಪತ್ರಿಕೆಗಳಲ್ಲಿ ಪ್ರಕಟಿಸುವುದು ಹೇಗೆ? ಎಂದು ಮಕ್ಕಳಲ್ಲಿ ಕೇಳುವುದು. ಮಕ್ಕಳು ತಮಗೆ ತಿಳಿದಂತೆ ಬರೆಯಲಿ. ಬಳಿಕ ಸಂಗ್ರಹಿಸಿದ ಪತ್ರಿಕಾ ವರದಿಯ ಮಾದರಿಗಳನ್ನು ಪ್ರದರ್ಶಿಸಿ ಓದಲು ಕೊಡುವುದು. ಮಕ್ಕಳು ಗುಂಪಿನಲ್ಲಿ ಕುಳಿತು ಈ ವರದಿಗಳನ್ನು ಓದಿ ಚರ್ಚಿಸಲಿ. ಬಳಿಕ ತಮ್ಮದೇ ಆದ ಪತ್ರಿಕಾ ವರದಿ ಬರೆಯಲಿ. ಗುಂಪಿನಲ್ಲಿ ಓದಿ ಉತ್ತಮಪಡಿಸಲಿ. ಅಧ್ಯಾಪಕರು ಸೂಕ್ತ ಸಮಯದಲ್ಲಿ ತಾವು ಸಿದ್ಧಪಡಿಸಿದ ವರದಿಯನ್ನು ಪ್ರದರ್ಶಿಸುವುದು.

**ಗಾಳಿಮಳೆಯ ಅಬ್ಬರ : ಅಪಾರ ನಾಶನಷ್ಟ**

**ಕಾಸರಗೋಡು ಜೂನ್ 5 :** ನಿನ್ನೆ ರಾತ್ರಿ ಸುರಿದ ಭೀಕರ ಗಾಳಿ ಮಳೆಯಿಂದ ಕಾಸರಗೋಡು ಜಿಲ್ಲೆಯಲ್ಲಿ ಹಲವೆಡೆ ಅಪಾರ ನಾಶ ನಷ್ಟ ಉಂಟಾಗಿದೆ. ಗಾಳಿಯ ರಭಸಕ್ಕೆ ಅಡಿಕೆಮರಗಳು ಮುರಿದು ಕೃಷಿನಾಶ ಸಂಭವಿಸಿದೆ. ಗಿರಿಪುರದಲ್ಲಿ ದೊಡ್ಡ ಮಾವಿನ ಮರ ಮುರಿದು ಬಿದ್ದು ಮನೆ ನಾಶವಾಗಿದೆ. ಅಲ್ಲಿ ವಾಸಿಸುತ್ತಿದ್ದ ಕುಟುಂಬ ಸಮೀಪದ ಶಾಲೆಯಲ್ಲಿ ಆಶ್ರಯ ಪಡೆದಿದೆ. ಊರ ಕೆರೆಗಳಲ್ಲಿ, ಬಯಲು ಗದ್ದೆಗಳಲ್ಲಿ ನೀರು ತುಂಬಿದೆ. ನದಿಯಲ್ಲಿ ನೆರೆ ಬರುವ ಸಾಧ್ಯತೆ ಇದೆ. ಸಮೀಪವಾಸಿಗಳು ಎಚ್ಚರವಹಿಸಬೇಕೆಂದು ಅಧಿಕಾರಿಗಳು ತಿಳಿಸಿದ್ದಾರೆ. ಇಂದು ಜಿಲ್ಲೆಯ ಶಾಲೆಗಳಿಗೆ ರಜೆ ಸಾರಲಾಗಿದೆ.

### ಕೂಡಿಸಿ ಬರೆಯುವ

ನಮ್ಮ ಅನುಭವದಲ್ಲಿರುವ ಎಷ್ಟೋ ಪದಗಳು ಸಂಯುಕ್ತ ಪದಗಳಾಗಿವೆ ಎಂಬ ವಿಷಯವನ್ನು ಮಕ್ಕಳ ಗಮನಕ್ಕೆ ತರುವುದು. ಉದಾಹರಣೆಗಳನ್ನು ಗುರುತಿಸಲು ಹೇಳಬಹುದು. ಆ ಬಳಿಕ ಕೊಟ್ಟಿರುವ ಪದಗಳನ್ನು ಕೂಡಿಸಿ ಬರೆಯಲು ಅವಕಾಶ ಕೊಡುವುದು. ಬರೆದು ಓದಿಸಿದ ನಂತರ ಕೊಟ್ಟಿರುವ ಪದಗಳಲ್ಲಿ ಎರಡನೇ ಪದದ ಮೊದಲ ಅಕ್ಷರ ಕೂಡಿಸಿ ಬರೆದಾಗ ಎಲ್ಲಿಗೆ ಹೋಯಿತು? ಎಂದು ಕೇಳುವುದು. ಉದಾಹರಣೆಗೆ ಕತ್ತಲು + ಆಯಿತು – ಕತ್ತಲಾಯಿತು ಎಂಬಲ್ಲಿ ಎರಡನೇ ಪದದ ಮೊದಲ ಅಕ್ಷರ ಆ ಎಂಬುದು ಮೊದಲ ಪದದ ಕೊನೆಯ ಅಕ್ಷರ 'ಲು' ವಿನೊಂದಿಗೆ ಸೇರಿ ಲಾ (ಲು + ಆ = ಲಾ) ಎಂದು ಬದಲಾಗಿದೆ, ಆದ್ದರಿಂದ ಕತ್ತಲು + ಆಯಿತು – ಕತ್ತಲಾಯಿತು ಎಂಬುದಾಗಿ ಸಂಯುಕ್ತ ಪದವಾಗಿದೆ ಎಂದು ತಿಳಿಸುವುದು. ಮಾತ್ರವಲ್ಲ ಈ ಉದಾಹರಣೆಗಳಲ್ಲಿ ಬರುವ ಎರಡನೇ ಪದದ ಮೊದಲ ಅಕ್ಷರಗಳೆಲ್ಲ ಯಾವ ವರ್ಗಕ್ಕೆ ಸೇರಿದ ಅಕ್ಷರಗಳು ಎಂಬುದನ್ನು ವಿಶದೀಕರಿಸುವುದು. (ಈ ಅಕ್ಷರಗಳೆಲ್ಲ ಸ್ವರಾಕ್ಷರಗಳಾಗಿವೆ ಎಂದು ತಿಳಿದಿರುವಿರಲ್ಲವೇ?)

### ಕಂಡುಹುಡುಕುವ

ಕೊಡಲಾದ ಪದಗಳ ಸರಿಯಾದ ರೂಪವನ್ನು ಮಕ್ಕಳು ಗುಂಪಿನಲ್ಲಿ ಕುಳಿತು ಕಂಡುಹಿಡಿಯಲಿ.

- ಧ್ಯೇಯ
- ಎಳೆಯಿತು
- ಬೆಳಕು
- ಅರಳಿತು
- ಭಾವ

ಇದೇ ರೀತಿ ಬೇರೆ ಬೇರೆ ಪದಗಳನ್ನು ಕೊಟ್ಟು ಸರಿಯಾದ ಪದವನ್ನು ಗುರುತಿಸಲು ಅಭ್ಯಾಸ ಮಾಡಿಸುವಿರಲ್ಲವೇ?

## ಚಿತ್ರ ಬಿಡಿಸುವ

ಗಾಳಿಮಳೆಯ ಸನ್ನಿವೇಶವನ್ನು ಮಕ್ಕಳು ನೆನಪಿಸಿ ಹೇಳಲಿ. ಬಳಿಕ ವೈಯಕ್ತಿಕವಾಗಿ ಕುಳಿತು ಚಿತ್ರರಚನೆ ಮಾಡಲಿ. ಸೂಕ್ತವಾದ ಶೀರ್ಷಿಕೆಯನ್ನು ಕೊಡಲು ಹೇಳುವುದು. ಬಳಿಕ ಕೈ ಬದಲಾಯಿಸಿ ಚಿತ್ರ ನಿರೀಕ್ಷಣೆ ಮಾಡಲಿ. ಯಾರ ಚಿತ್ರ ಉತ್ತಮವಾಗಿದೆ. ಯಾಕೆ? ಎಂದು ವಿಮರ್ಶೆ ನಡೆಸಲಿ. ಚಿತ್ರಗಳನ್ನು ಸಂಗ್ರಹಿಸಿ ಚಿತ್ರ ಸಂಚಿಕೆ ತಯಾರಿಸುವಿರಲ್ಲವೇ?

## ಕವಿತೆ ಮುಂದುವರಿಸಿ ಬರೆಯುವ

ಕೊಟ್ಟಿರುವ ಸಾಲುಗಳನ್ನು ಮುಂದುವರಿಸಿ ಕವಿತೆಯನ್ನು ಪೂರ್ತಿಗೊಳಿಸಬೇಕಾಗಿದೆ. ಅದಕ್ಕಾಗಿ ಕವಿತೆ ರಚಿಸುವ ವಿಧಾನಗಳನ್ನು ನೆನಪಿಸಬೇಕು.

ಉದಾಹರಣೆಗೆ:

ಮೊದಲ ಸಾಲಿನಲ್ಲಿ ಎರಡು ಪದಗಳು

ಎರಡನೆ ಸಾಲಿನಲ್ಲಿ ಎರಡು ಪದಗಳು

ಮೂರನೆ ಸಾಲಿನಲ್ಲಿ ಮೂರು ಪದಗಳು

ಹಾಗಾದರೆ ನಾಲ್ಕನೇ, ಐದನೇ, ಆರನೇ ಸಾಲಿನಲ್ಲಿ ಎಷ್ಟೆಷ್ಟು ಪದಗಳು ಇರಬೇಕು? ಆ ಪದಗಳು ಪ್ರಾಸಕ್ಕೆ ಸರಿಯಾಗಬೇಕಾದರೆ ಹೇಗಿರಬೇಕು? ಎಂದು ಪ್ರಶ್ನಿಸಿ ಸೂಕ್ತವಾದ ಪದಗಳನ್ನು ಹುಡುಕಿ ಬರೆಯಲು ಸೂಚಿಸಬೇಕು. ಬಳಿಕ ಪದ್ಯವನ್ನು ಹಾಡಲು ಸೂಚನೆ ಕೊಡಬೇಕು. ಹೀಗೆ ಪದ್ಯರಚನೆ ಮುಂದುವರಿಯಲಿ. ರಚಿಸಿದ ಬಳಿಕ ಗುಂಪಿನಲ್ಲಿ ಕುಳಿತು ಉತ್ತಮ ಪದ್ಯವನ್ನು ಆಯ್ಕೆ ಮಾಡಲಿ. ಆಯ್ಕೆಯ ಮಾನದಂಡಗಳು ಯಾವುವು ಎಂದು ಮಕ್ಕಳೇ ಕಂಡುಹಿಡಿಯಲಿ.

ಉದಾ : ಮೋಡ ಮುಸುಕಿತು
ಗುಡುಗು ಗುಡುಗಿತು
ಮಳೆಯು ಬಳ ಬಳ ಸುರಿಯಿತು.
ನೀರು ಹರಿಯಿತು
ನೆಲವು ಕುಡಿಯಿತು
ಹೊಳೆಯು ಜಳ ಜಳ ಹರಿಯಿತು

## ಸಂಗ್ರಹಿಸುವ

ಮಳೆಗೆ ಸಂಬಂಧಿಸಿದ ಹಲವಾರು ಕವನಗಳನ್ನು ಓದಿ ಕೇಳಿ ತಿಳಿದಿರುವರು. ಆ ಕವನಗಳನ್ನು ಬರೆದು ಸಂಗ್ರಹಿಸಲು ಹೇಳುವುದು. ಸೂಕ್ತವಾದ ಪತ್ರಿಕೆ, ಪುಸ್ತಕಗಳನ್ನು ಓದುವ ಮೂಲೆಯಲ್ಲಿ ಒದಗಿಸಲು ಮರೆಯದಿರಿ. ಹೆಚ್ಚು ಕವನ ಸಂಗ್ರಹಿಸಿದವರಿಗೆ ಬಹುಮಾನ ಕೊಡುವಿರಲ್ಲವೇ?

## ಆಲ್ಬಂ ತಯಾರಿಸುವ

ಗಾಳಿ ಮಳೆಗೆ ಸಂಬಂಧಿಸಿದ ಹಲವಾರು ವಾರ್ತೆ, ಚಿತ್ರಗಳು ಪತ್ರಿಕೆಗಳಲ್ಲಿ ಬಂದಿವೆಯಲ್ಲವೇ? ಇವುಗಳನ್ನು ಕತ್ತರಿಸಿ ಬೇರೆ ಪುಸ್ತಕಗಳಲ್ಲಿ ಅಂಟಿಸಿ ಸ್ವಂತ ಆಲ್ಬಂ ತಯಾರಿಸಲಿ. ಇದೇ ರೀತಿಯಲ್ಲಿ ಕೊಲಾಶ್, ಮಳೆ ಸಂಚಿಕೆ ಮೊದಲಾದ ಚಟುವಟಿಕೆಗಳನ್ನು ತರಗತಿಯಲ್ಲಿ ನಡೆಸಬಹುದು.

**ಸಮಾನ ಆಶಯದ ಪದ್ಯಗಳು**

## ಮಳೆಗಾಲ

ಕಡಲಿನ ಅಬ್ಬರ
ತೆರೆಗಳ ಉಬ್ಬರ
ಬಿರುಗಾಳಿಯ ಬೀಸು
ಗುಡುಗಿನ ಸದ್ದು
ಸಿಡಿಲಿನ ಗುದ್ದು
ಕರಿಮುಗಿಲಿನ ಹಾಸು॥೧॥

ಗದ್ದೆಯ ಕೆಸರು
ರೈತನ ಉಸಿರು
ಭೂದೇವಿಯ ಬಸಿರು
ನೇಜಿಯ ಬಾಲೆ
ಅದೋ ಓ ಬೇಲೆ
ಬುವಿಯೆಲ್ಲಾ ಹಸಿರು ॥೩॥

ಮಿಂಚುವ ಬಳ್ಳಿ
ಅದೋ ಬಾನಲ್ಲಿ
ಮಳೆ ಹನಿಗಳ ಬಡಿತ
ಗಾಳಿಯ ಅಳಿತ
ಗಾಳಿಯ ಮೊರೆತ
ಮಳೆರಾಯನ ಕುಣಿತ ॥೨॥

ತುಂಬಿತು ಹಳ್ಳ
ಹರಿಯಿತು ಕೊಳ್ಳ
ಧರೆಯಾಯಿತು ತಂಪು
ಹಸುರಿನ ಸೊಗಸು
ಭೂಮಿಯ ಮೆರೆಸು
ಇರಲಿರಲೀ ಸೊಂಪು ॥೪॥

**– ಬಾಲ ಮಧುರಕಾನನ**

## ಬಂತು ಮಳೆ

ಬಂತು ಮಳೆ ಬಂತು ಮಳೆ
ತೊಳೆದು ಹೋಯ್ತು ಊರ ಕೊಳೆ
ಬಂತು ಬಾನಿನಿಂದ ಸಲೆ
ನೆಲವನೆಲ್ಲ ತೋಯಿಸದೆ
ಗಾಳಿಯೊಡನೆ ಗರ್ಜಿಸುತ್ತ
ಮೋಡಗಳನು ಕರಗಿಸುತ್ತ
ಬೆಟ್ಟಗಳನು ಮೀಯಿಸುತ್ತ
ನೀರ ಧಾರೆ ಹರಿಯಿಸುತ್ತ
ಬಂತು ಮಳೆ ಬಂತು ಮಳೆ ॥

ಕಡಿಮೆಯಾಯ್ತು ಬಿಸಿಲಿನುರಿ
ಬಾಗಿ ಬಿತ್ತು ತೆಂಗು ಗರಿ
ಹರಿಯಿತಲ್ಲಿ ಅಲ್ಲಿ ಝರಿ
ನೀರು ತುಂಬಿತದೋ ಭಾರಿ
ಬಾವಿ ತೋಡು ಊರ ಕೆರೆ
ತುಂಬಿ ಹೋಯಿತೆಲ್ಲ ನೆರೆ
ಕೊಚ್ಚಿ ಹೋಯ್ತು ಹೊಳೆಯ ಕರೆ
ಎಲ್ಲರಿಗೂ ಕರಕರೆ
ಬಂತು ಮಳೆ ಬಂತು ಮಳೆ ॥

**– ವೆಂಕಟರಾಜ ಪುಣಿಂಚತ್ತಾಯ**

## ಮಳೆರಾಯನಬ್ಬರ

ಏನಿದೀ ಮಳೆರಾಯನಬ್ಬರ
ಪಡುವಣದ ಕರುನಾಡಿನಲಿ
ಜಲವ ತುಂಬಿದ ಕೊಳಗ ಸರಿದನೊ
ಕಾಲ ಪುರುಷನು ಧರೆಯಲಿ ॥

ಶರಧಿಯಾಚೆಯ ಮುಗಿಲ ಮೊತ್ತವು
ಕವಿದು ಬಾಂದಳವೆಲ್ಲವ
ಹಿಂದೆ ಪರದೆಯ ಹಡಿದು ತೋರಿತು
ರಾಯನೋಲಗ ವೈಭವ ॥

ಇವನ ಬಣ್ಣದ ವೇಷ, ಮಿಂಚಿನ
ಕಣ್ಣು ಸಿಡಿಲಿನ ಆರ್ಭಟ
ಗುಡುಗು ಗಾಳಿಯ ಮೇಳ; ಹಗಲೂ
ರಾತ್ರಿ ನಡೆಯುವ ಕಮ್ಮಟ ॥

ಬೆಟ್ಟದಂಚಿನ ಮಣ್ಣು ಕೊರೆಯುತ
ಮರವ ಬೀಳಿಸಿ ಮುರಿಯುತ
ಹೊಳೆಯ ನೀರನು ರಾಡಿ ಮಾಡಿದ
ತುಂಟ ಮಕ್ಕಳ ಕುಣಿಸುತ ॥

ಬಡವ ಮಂದಿಯ ಕನಸಿನರಮನೆ
ಕುಸಿಯೆ ಕಷ್ಟದ ಗೋಳನು
ರೋಗ ರುಜಿನದ ನೂರು ಕೋಟಲೆ
ಕೊಟ್ಟನೀ ಮಳೆರಾಯನು ॥

ಕಷ್ಟಕಾಲದಿ ಜೀವಜಲವೇ
ಪ್ರಾಣಹಿಂಡಲು ಹೊರಟಿದೆ
ಮಿತಿಯ ಮೀರಲು ಕಷ್ಟತಪ್ಪದು
ಹಿಡಿತದಲ್ಲಿದೆ ಹಿತವಿದೆ ॥

**– ಎಸ್.ಕೆ. ಗೋಪಾಲಕೃಷ್ಣ ಭಟ್**

## ಕಾರ್ಗಾಲದ ವೈಭವ

ಪಡುವಣ ತೀರದ
ಕನ್ನಡನಾಡಿನ
ಕಾರ್ಗಾಲದ ವೈಭವವೇನು?
ಚೆಲ್ಲಿದರನಿತೂ
ತೀರದ ನೀರಿನ
ಜಡದೇಹದ ಕರ್ಮುಗಿಲೇನು? ॥೧॥
ಕೆರೆಗಳನುಕ್ಕಿಸಿ
ತೊರೆಗಳ ಸೊಕ್ಕಿಸಿ
ಗುಡ್ಡವ ಬೆಟ್ಟವ ಕೊರೆಕೊರೆದು
ಕಡಲಿನ ತೆರೆಗಳ
ರಿಂಗಣ ಕುಣಿಯಿಸಿ
ಮೊರೆಮೊರೆವುದದೋ ಸುರಿಸುರಿದು ॥೨॥
ಕುದುರೆಮೊಗದ ಕಡಿ
ವಾಣದ ತೆರದಲಿ
ಮಿಂಚುಗಳವು ಥಳಥಳಿಸುವುವು
ಗೊರಸಿನ ಘಟ್ಟನೆ
ಯಂತಿರೆ ಥಟ್ಟನೆ
ಗುಡುಗುಗಳವು ಗುಡುಗಾಡಿಪುವು ॥೩॥
ಆವೇಶದ ವೇ
ಷದ ಬಿರುಸುಟ್ಟುರೆ
ಊರೂರಲಿ ಹಾರೋಡುವುದು
ಮರಗಳ ಕೀಳುತ
ಬಂಡೆಯ ಹೋಳುತ
ಜಗಜಟ್ಟಿಯ ತೆರನಾಡುವುದು ॥೪॥
ಹಗಲಿರುಳೆನ್ನದೆ
ಹೊಡೆಯುವ ಜಡಿಮಳೆ
ಬಡಿಕೋಲ್ಮಿಂಚಿನ ಲಾಗುಗಳು
ಮನೆಗಳ ಮನಗಳ
ಒಳಗೂ ಹೊರಗೂ
ಜಿನುಗುತಿರುವ ಹನಿಸೋನೆಗಳು ॥೫॥

**– ಕಡೆಂಗೋಡ್ಲು ಶಂಕರ ಭಟ್ಟ**

## ಸುಂಟರಗಾಳಿ

ಏನಿದು ಧೂಳಿ ಓಹೋ ಗಾಳಿ!
ಸುಳಿಯುತ ಬಂತೈ ಸುಂಟರಗಾಳಿ!
ತೆಂಗಿನ ಮರಗಳು, ಕಂಗಿನ ಮರಗಳು
ಬಾಳೆಯು, ತಾಳೆಯು, ಮಾವು ಹಲಸುಗಳು
ಎಲ್ಲಾ ತೂಗಿವೆ! ಕಲೆಗಳ ಬಾಗಿವೆ
    ಏನಿದು ಧೂಳಿ ಓಹೋ ಗಾಳಿ!
    ಸುಳಿಯುತ ಬಂತೈ ಸುಂಟರಗಾಳಿ!
ಕಣ್ಣನು ಮುಚ್ಚಿ ಬಾಲವನೆತ್ತಿ
ದನ ಓಡುತ್ತಿದೆ, ಎತ್ತಲೊ ಸುತ್ತಿ
ಅಂಬಾ ಎನುತಿದೆ ಕರು ಬೆಂಬತ್ತಿ
ಏನದು ಧೂಳಿ ಓಹೋ ಗಾಳಿ!
ಸುಳಿಯುತ ಬಂತೈ ಸುಂಟರಗಾಳಿ!

ಹೋಯಿತು ಹಂಚು ಹಾರಿತು ಹುಲ್ಲು
ಬೊಬ್ಬೆಯೆ ಬೊಬ್ಬೆಯು, ಭಯವನೆಲ್ಲೆಲ್ಲು!
ಕೇಳುವರಾರೀ ಮಂದಿಯ ಗುಲ್ಲು?
ಏನಿದು ಧೂಳಿ ಓಹೋ ಗಾಳಿ!
ಸುಳಿಯುತ ಬಂತೈ ಸುಂಟರಗಾಳಿ!
    ಗಾಳಿಗೆ ಸಿಲುಕಿದನಾವನೊ ಮುದುಕ
    ಕೊಡೆ ಹಾರಿತು, ಮೈ ಥರಥರ ನಡುಕ
    ಕಣ್ಣೇ ಕಾಣದು, ಹುಟ್ಟದೊ ಮರುಕ?
    ಏನಿದು ಧೂಳಿ ಓಹೋ ಗಾಳಿ!
    ಸುಳಿಯುತ ಬಂತೈ ಸುಂಟರಗಾಳಿ!

**– ಕಯ್ಯಾರ ಕಿಞ್ಞಣ್ಣ ರೈ**

# 2. ಪುನರುದ್ಧಾರ

### ಪಾಠಭಾಗದೆಡೆಗೆ

ಅರಣ್ಯವು ಹೇಗೆ ಸಂಪತ್ತಾಗಿದೆ ಎಂದು ಮಕ್ಕಳಲ್ಲಿ ಪ್ರಶ್ನಿಸಿ ಉತ್ತರ ಹೇಳಲು ಅವಕಾಶ ಮಾಡಿಕೊಡುವುದು. ಅವರು ಸ್ವತಂತ್ರವಾಗಿ ಯೋಚಿಸಿ ಅರಣ್ಯದಲ್ಲಿ ಏನೇನು ಇವೆ? ಅರಣ್ಯದಿಂದ ಏನೇನು ಸಿಗುವುದು? ಅರಣ್ಯದಿಂದ ನಮಗೆ ಇರುವ ಪ್ರಯೋಜಗಳೇನು? ನಾವು ಯಾಕೆ ಅರಣ್ಯವನ್ನು ಉಳಿಸಬೇಕು ಎಂದೆಲ್ಲ ಯೋಚಿಸುವಂತೆ ಮಾಡುವುದರ ಮೂಲಕ ಅರಣ್ಯ ಸಂರಕ್ಷಣೆಯೆಂಬ ಸಾಮಾಜಿಕ ಪ್ರಜ್ಞೆ ಮಗುವಿನ ಮನಸ್ಸಿನಲ್ಲಿ ಮೂಡುವಂತೆ ಮಾಡಬೇಕಾಗಿದೆ. ಅದಕ್ಕೆ ಪೂರಕವಾಗಿ 'ಪುನರುದ್ಧಾರ' ಎಂಬ ಕಥೆಯನ್ನು ಇಲ್ಲಿ ಕೊಡಲಾಗಿದೆ. ಓದಿ ನೋಡೋಣ ಎಂದು ಪಾಠ ಪ್ರವೇಶ ಮಾಡಬಹುದು.

## ಚಟುವಟಿಕೆಗಳು

### ಕಥೆ ಓದುವ

ಒಂದು ಕಾಡು ............... ಪಕ್ಷಿಧಾಮವೇ ಆಗಿ ಹೋಯಿತು ಎಂಬಲ್ಲಿಯವರೆಗೆ ಮಕ್ಕಳಿಂದ ಪಾಠವನ್ನು ಓದಿಸುವುದು. ಆ ಬಳಿಕ ಅಲ್ಲಿ ದೊಡ್ಡ ದೊಡ್ಡ ಮರಗಳು ಬೆಳೆದಿದ್ದುವು. ಯಾವ ಯಾವ ಮರಗಳು ಇದ್ದಿರಬಹುದು? ಎಂದು ಪ್ರಶ್ನಿಸಿ ಗುಂಪು ಮಾಡಿ ಮರಗಳ ಹೆಸರು ಬರೆಯಲು ಹೇಳುವುದು. ಮಕ್ಕಳು ಗುಂಪಿನಲ್ಲಿ ಚರ್ಚಿಸಿ ಸಾಧ್ಯವಿದ್ದಷ್ಟು ಮರಗಳ ಹೆಸರನ್ನು ಪಟ್ಟಿಮಾಡಲಿ. ಅವುಗಳಲ್ಲಿ ಕೆಲವನ್ನಾದರೂ ಗುರುತಿಸುವ ಪ್ರಯತ್ನ ಮಾಡುವುದಿಲ್ಲವೇ?

- ಅಲ್ಲಿ ವಿಧವಿಧದ ಫಲಪುಷ್ಪಗಳಿದ್ದುವು ಯಾವ ಯಾವ ಫಲ ಪುಷ್ಪಗಳು ಇದ್ದಿರಬಹುದು? ಎಂದು ಪ್ರಶ್ನಿಸಿ ಇನ್ನೊಂದು ಗುಂಪಿನ ಸದಸ್ಯರಿಗೆ ಹೂ ಮತ್ತು ಹಣ್ಣುಗಳ ಹೆಸರು ಬರೆಯಲು ಹೇಳುವುದು.

- ಅಲ್ಲಿ ಜೇನುನೊಣಗಳು, ಹಕ್ಕಿಗಳು ಹೆಚ್ಚಿನ ಸಂಖ್ಯೆಯಲ್ಲಿ ವಾಸಮಾಡುತ್ತಿದ್ದುವು. ಯಾವ ಯಾವ ಹಕ್ಕಿಗಳು ಇದ್ದಿರಬಹುದು? ಎಂದು ಪ್ರಶ್ನಿಸಿ ಹಕ್ಕಿಗಳ ಹೆಸರನ್ನು ಬರೆಯಲು ಇನ್ನೊಂದು ಗುಂಪಿಗೆ ಹೇಳಬಹುದು. ಇವುಗಳನ್ನೆಲ್ಲ ಕ್ರೋಡೀಕರಿಸಿ ಚಾರ್ಟಿನಲ್ಲಿ ಬರೆದು ಮಕ್ಕಳು ತರಗತಿಯಲ್ಲಿ ಪ್ರದರ್ಶಿಸಲಿ.

**ಕಥೆ ಓದುವ**

'ಹೀಗಿರಲು ಒಂದು ದಿನ.................... ವಲಸೆ ಹೋಗತೊಡಗಿದುವು'. ಎಂಬಲ್ಲಿಯವರೆಗೆ ಮಕ್ಕಳು ಓದಲಿ ಅನಂತರ ಅದ್ಭುತ ಪಕ್ಷಿಧಾಮ ಹೇಗಿದ್ದಿರಬಹುದು? ಎಂದು ಪ್ರಶ್ನಿಸಿ ವಿವರಣೆ ತಯಾರಿಸಲು ಸೂಚಿಸುವುದು. ಗುಂಪಿನಲ್ಲಿ ಕುಳಿತು ಮಕ್ಕಳು ವಿವರಣೆ ಬರೆಯಲಿ. ತರಗತಿಯಲ್ಲಿ ಮಂಡಿಸಲಿ. ಅಧ್ಯಾಪಕರ ಸಹಾಯದಿಂದ ಉತ್ತಮಪಡಿಸಿ ಬರೆಯಲಿ.

ನಿಮಗೆ ಪ್ರವಾಸಿ ತಾಣಗಳ ಕುರಿತು ತಿಳಿದಿದೆಯೇ? ಇದ್ದರೆ ಯಾವುದು? ಎಂದು ಪ್ರಶ್ನಿಸಿ ಪ್ರವಾಸಿ ತಾಣಗಳನ್ನು ಪಟ್ಟಿ ಮಾಡಲು ಹೇಳುವುದು.

ಉದಾ : ಬೇಕಲಕೋಟೆ, ಪೊಸಡಿ ಗುಂಪೆ, ರಾಣಿಪುರಂ, ತೇಕ್ಕಡಿ, ತಿರುವನಂತಪುರಂ, ಅನಂತಪುರ, ಧರ್ಮಸ್ಥಳ,.....

ಪ್ರವಾಸಿ ತಾಣಗಳು ಮಲಿನವಾಗುವುದು ಹೇಗೆ? ಮಕ್ಕಳು ಗುಂಪಿನಲ್ಲಿ ಚರ್ಚಿಸಿ ಉತ್ತರಿಸಲಿ.

ಪ್ರವಾಸಿ ತಾಣಗಳನ್ನು ಸುಂದರವಾಗಿ, ಸ್ವಚ್ಛವಾಗಿ ಇಟ್ಟುಕೊಳ್ಳಲು ನಾವೇನು ಮಾಡಬಹುದು? ಗುಂಪಿನಲ್ಲಿ ಚರ್ಚಿಸಿ ಉತ್ತರಿಸಲಿ. ಬಳಿಕ ಪ್ರವಾಸೀ ತಾಣಗಳನ್ನು ರಕ್ಷಿಸೋಣ ಎಂಬ ಶೀರ್ಷಿಕೆಯಲ್ಲಿ ಕರಪತ್ರ ತಯಾರಿಸಿ ತರಗತಿಯಲ್ಲಿ ಪ್ರದರ್ಶಿಸಲು ಹೇಳುವುದು.

**ಓದುವ**

'ಆ ಕಾಡಿನಲ್ಲಿ ಶಂತನು............. ಖಗ ಸಮೂಹ ಕೃತಾರ್ಥವಾಯಿತು' ಎಂಬಲ್ಲಿಯವರೆಗೆ ಅನುಕ್ರಮವಾಗಿ ಓದಲು ಹೇಳುವುದು. ಆ ಬಳಿಕ ಕಥಾಭಾಗವನ್ನು ಸಂಕ್ಷೇಪಿಸಿ ಹೇಳಲು ಗುಂಪುಗಳಿಗೆ ಅವಕಾಶ ನೀಡುವುದು. ಆಶಯ ಸಂಗ್ರಹಕ್ಕೆ ಅಗತ್ಯವಿದ್ದಲ್ಲಿ ಸಹಕರಿಸುವುದು.

ಈ ಭಾಗದಲ್ಲಿ ಬಂದಿರುವ ನಾಣ್ಣುಡಿ ಯಾವುದು? ಪ್ರಶ್ನಿಸುವುದು.

ಇದರ ಅರ್ಥವನ್ನು ತಿಳಿಸಿ ಟಿಪ್ಪಣಿ ಬರೆಯಲು ಹೇಳುವುದು. ಮಕ್ಕಳು ಚರ್ಚಿಸಿ ಗುಂಪಿನಲ್ಲಿ ಬರೆದು ತರಗತಿಯಲ್ಲಿ ಮಂಡಿಸಲಿ. ಅಧ್ಯಾಪಕರ ಮಾದರಿ ಟಿಪ್ಪಣಿಯ ಸಹಾಯದಿಂದ ಉತ್ತಮಪಡಿಸಿ ಬರೆಯಲಿ.

### ಮನಸ್ಸಿದ್ದರೆ ಮಾರ್ಗ

'ಮನಸ್ಸಿದ್ದರೆ ಮಾರ್ಗ' ಎಂಬುದು ಒಂದು ಗಾದೆ. ನಾವು ಮನಸ್ಸು ಮಾಡಿದರೆ ಏನನ್ನಾದರೂ ಸಾಧಿಸಬಹುದು. ಮೊದಲು ನಾವು ಆ ಕೆಲಸವನ್ನು ಮಾಡಲೇಬೇಕು ಎಂಬ ನಿರ್ಧಾರವನ್ನು ಮಾಡಬೇಕು. ಅನಂತರ ಶ್ರದ್ಧೆಯಿಂದ ಕೆಲಸದಲ್ಲಿ ತೊಡಗಬೇಕು. ಆಗ ನಾವು ಭಾವಿಸಿದ್ದನ್ನು ಸಾಧಿಸಬಹುದು. ಆ ಕಾರಣದಿಂದಲೆ ಮನಸ್ಸಿದ್ದರೆ ಮಾರ್ಗವಿದೆ ಎಂಬ ಮಾತು ರೂಢಿಗೆ ಬಂದಿದೆ.

ಶಂತನು ತನ್ನ ಬಳಗದೊಂದಿಗೆ ಸಭೆಯಲ್ಲಿ ಮಾತನಾಡಿದ್ದನ್ನು ಮಕ್ಕಳು ತಿಳಿದಿರುವರು. ಬಳಿಕ 'ಅರಣ್ಯ ಸಂರಕ್ಷಣೆ' ಎಂಬ ವಿಷಯವನ್ನು ಆಯ್ದುಕೊಂಡು ಮಕ್ಕಳೇ ಸಭೆ ನಡೆಸಲಿ. ಗುಂಪಿನಲ್ಲಿ ಚರ್ಚಿಸಿ, ಗುಂಪಿನ ನಾಯಕ ಭಾಷಣ ಮಾಡುವಂತೆ

ಸೂಚನೆಗಳನ್ನು ನೀಡುವುದು. ಯಾರು ಉತ್ತಮವಾಗಿ ಭಾಷಣ ಮಾಡಿದ್ದಾರೆ ಎಂದು ಗುರುತಿಸುವುದು ಹೇಗೆ? ಸೂಚಕಗಳು ಯಾವುವು?

- ಆಶಯ ಸ್ಪಷ್ಟತೆ
- ನಿರರ್ಗಳತೆ
- ವಿಷಯ ಜ್ಞಾನ

ಸೂಚಕಗಳನ್ನು ಸ್ವತಃ ಗುರುತಿಸುವಂತೆ ಮಕ್ಕಳಿಗೆ ಸಹಾಯ ಮಾಡುವಿರಲ್ಲವೇ?

ವನ ಸಂರಕ್ಷಣೆಗೆ ಬೇಕಾಗಿ ಆ ವ್ಯಕ್ತಿ ಹಲವಾರು ಮನವಿಗಳನ್ನು ಸರಕಾರಕ್ಕೆ ಸಲ್ಲಿಸಿದ್ದಾನಲ್ಲವೇ? ನೀವು ನಿಮ್ಮ ಊರಲ್ಲಿರುವ ವನ ಸಂರಕ್ಷಣೆಗೆ ಅಗತ್ಯವಾದ ಮನವಿ ಪತ್ರವನ್ನು ಅರಣ್ಯಖಾತೆಯ ಸಚಿವರಿಗೆ ಬರೆಯಿರಿ ಎಂದು ಮಕ್ಕಳಿಗೆ ಸೂಚಿಸಿ, ಮನವಿ ಪತ್ರ ಬರೆಯುವ ರೀತಿಯನ್ನು ನೆನಪಿಸಿ, ಗುಂಪಿನಲ್ಲಿ ಬರೆಯಲು ಅವಕಾಶ ಮಾಡಿಕೊಡುವುದು.

## ಮನವಿ ಪತ್ರ

ಇವರಿಂದ

ತಸ್ರೀಫಾ ಎಂ.<br>
4 ನೇ ತರಗತಿ<br>
ಸರಕಾರಿ ಯು.ಪಿ. ಶಾಲೆ, ಕಾಸರಗೋಡು

ಇವರಿಗೆ

ಮಾನ್ಯ ಅರಣ್ಯ ಸಚಿವರು<br>
ಕೇರಳ ಸರಕಾರ<br>
ತಿರುವನಂತಪುರ

ಗೌರವಾನ್ವಿತ ಸಚಿವರೆ,

ನಮ್ಮ ಊರಲ್ಲಿರುವ ವನಗಳು ನಾಶವಾಗುತ್ತಿವೆ. ಮರಗಳನ್ನು ಕಡಿದು ಮಾರುತ್ತಾರೆ, ಪ್ರಾಣಿ ಪಕ್ಷಿಗಳನ್ನು ಕೊಂದು ತಿನ್ನುತ್ತಾರೆ. ದಯಮಾಡಿ ತಾವು ವನರಕ್ಷಣೆಗೆ ಬೇಕಾದ ಏರ್ಪಾಡುಗಳನ್ನು ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಕಾಸರಗೋಡು — ಇತಿ ನಿಮ್ಮ ವಿಶ್ವಾಸಿ,<br>
05.04.2015 — **ತಸ್ರೀಫಾ**

**ಪದ ಹುಡುಕುವ**

ಈ ಪಾಠಭಾಗದಲ್ಲಿ ಬಂದಿರುವ 'ಪ ಬಳ್ಳಿ' ಪದಗಳನ್ನು ಹುಡುಕಿ ಬರೆಯಿರಿ.

ಪುನರುದ್ಧಾರ, ಫಲ, ಪುಷ್ಪ, ಪಕ್ಷಿ, ಪಕ್ಷಿಧಾಮ, ಪ್ರಚಾರ ಪಡೆಯು, ಪ್ರಕೃತಿ, ಪಕ್ಷಿವೀಕ್ಷಣೆ, ಪ್ರವಾಸಿತಾಣ, ಪ್ರವಾಸಿಗರು, ಪ್ರಶಾಂತ, ಪ್ರಾಣಿ, ಪ್ರವಾಸಿಗರು, ಪಕ್ಷಿಸಂಕುಲ, ಫಲ, ಪ್ರಪಂಚ, ಪ್ರವೃತ್ತ,

### ಉತ್ತರ ಬರೆಯುವ

ಪಾಠಭಾಗದಲ್ಲಿ ಕೊಟ್ಟಿರುವ ಪ್ರಶ್ನೆಗಳಿಗೆ ಗುಂಪಿನಲ್ಲಿ ಕುಳಿತು ಚರ್ಚಿಸಿ ಉತ್ತರ ಬರೆಯಲು ಹೇಳುವುದು. ಬರೆದ ಉತ್ತರವನ್ನು ತರಗತಿಯಲ್ಲಿ ಓದಿ ಉತ್ತಮಪಡಿಸಲು ತಿಳಿಸುವುದು.

### ಇಷ್ಟವಾದ ಸನ್ನಿವೇಶ ಹೇಳುವ

ಮಕ್ಕಳು ಕಥೆಯಲ್ಲಿ ಇಷ್ಟವಾದ ಸನ್ನಿವೇಶವನ್ನು ಹೇಳಲಿ. ಯಾಕೆ ಇಷ್ಟವಾಯಿತು ಎಂದೂ ವಿವರಿಸಲಿ. ಮಕ್ಕಳು ಸ್ವಂತ ವಾಕ್ಯಗಳನ್ನು ರಚಿಸಿ ಬಳಸುವಂತೆ ಗಮನ ಹರಿಸುವುದು.

### ಗಾದೆ ವಿವರಣೆ

ಮನಸ್ಸಿದ್ದರೆ ಮಾರ್ಗವಿದೆ ಎಂಬ ಗಾದೆ ಮಾತನ್ನು ಈಗಾಗಲೇ ತಿಳಿದಿದ್ದೇವೆ. ಅದೇ ರೀತಿ ಚರ್ಚಿಸಿ, ಕೈ ಕೆಸರಾದರೆ ಬಾಯಿ ಮೊಸರು ಎಂಬ ಗಾದೆ ಮಾತಿನ ವಿವರಣೆ ಬರೆಯಲು ಹೇಳುವುದು.

#### ಕೈ ಕೆಸರಾದರೆ ಬಾಯಿ ಮೊಸರು

'ಕೈ ಕೆಸರಾದರೆ ಬಾಯಿ ಮೊಸರು' ಎಂಬುದು ಒಂದು ಗಾದೆ ಮಾತು. ಕೈ ಕೆಸರು ಮಾಡುವುದೆಂದರೆ ಚೆನ್ನಾಗಿ ದುಡಿಯುವುದು ಎಂದು ಅರ್ಥವಾಗಿದೆ. ಚೆನ್ನಾಗಿ ದುಡಿದಾಗ ಉತ್ತಮ ಬೆಳೆ ಸಿಗುವುದು. ಆದರಿಂದ ಜೀವನ ಸುಖಮಯವಾಗುವುದು ಇದನ್ನೇ ಬಾಯಿ ಮೊಸರು ಎಂದು ಹೇಳುವರು. ಹೀಗೆ ಚೆನ್ನಾಗಿ ದುಡಿದು ಬಾಳಬೇಕು ಎಂಬ ಆಶಯವನ್ನು ಸೂಚಿಸಲು ಕೈ ಕೆಸರಾದರೆ ಬಾಯಿ ಮೊಸರು ಎಂಬ ಗಾದೆ ಮಾತು ರೂಢಿಗೆ ಬಂದಿದೆ.

### ಶೀರ್ಷಿಕೆ ಬರೆಯುವ

ಪಾಠಭಾಗದಲ್ಲಿರುವ ಈ ಕಥೆಗೆ ಪುನರುದ್ಧಾರ ಎಂಬ ಹೆಸರು ಹೇಗೆ ಸೂಕ್ತವಾಗಿದೆ ಎಂಬ ಚರ್ಚೆ ನಡೆಸುವುದು. ಬಳಿಕ ಈ ಕತೆಗೆ ಬೇರೆ ಯಾವ ಶೀರ್ಷಿಕೆ ಕೊಡಬಹುದು ಎಂದು ಪ್ರಶ್ನಿಸುವುದು, ಮಕ್ಕಳು ತಮಗಿಷ್ಟವಾದ ಶೀರ್ಷಿಕೆಯನ್ನು ಸೂಚಿಸಲಿ. ಬಳಿಕ ಆ ಶೀರ್ಷಿಕೆಯನ್ನು ಸೂಚಿಸಲು ಅವರಿಗಿರುವ ಕಾರಣಗಳನ್ನು ಹೇಳಲು ಅವಕಾಶ ಮಾಡಿಕೊಡುವುದು. ನೀವು ಸೂಚಿಸುವ ಶೀರ್ಷಿಕೆ ಹಾಗೂ ಅದರ ಸಮರ್ಥನೆಗಳನ್ನು ನೀಡುವಿರಲ್ಲವೇ?

### ಸೂಚನೆ ಬರೆಯುವ

ಪಕ್ಷಿಧಾಮದಲ್ಲಿ ಪಕ್ಷಿಗಳಿಗೆ ತೊಂದರೆಯಾಗದಂತೆ ವೀಕ್ಷಕರು ವರ್ತಿಸಬೇಕಾಗಿದೆ. ಸಾರ್ವಜನಿಕರಿಗೆ ಈ ನಿಟ್ಟಿನಲ್ಲಿ ಅಗತ್ಯವಾದ ಸೂಚನೆಗಳನ್ನು ಕೊಡಬೇಕಲ್ಲವೇ? ಅದಕ್ಕಾಗಿ ಸೂಚನೆಗಳನ್ನು ಬರೆಯುವ ಎಂದು ಹೇಳಿ ಮಕ್ಕಳನ್ನು ಗುಂಪುಗಳಲ್ಲಿ ಕುಳ್ಳಿರಿಸಿ ಬರೆಯಲು ಹೇಳುವುದು. ಬರೆದ ಸೂಚನೆಗಳನ್ನು ಓದಿ ಉತ್ತಮಪಡಿಸಲಿ. ಬಳಿಕ ಸೂಚನೆಗಳನ್ನು ಚಾರ್ಟು ಪೇಪರಲ್ಲಿ ಬರೆದು ರಟ್ಟಿಗೆ ಅಂಟಿಸಿ ಸೂಚನಾ ಫಲಕ ತಯಾರಿಸಿ ಪ್ರದರ್ಶಿಸಲಿ.

ಉದಾ : ಸದ್ದು ಮಾಡಬೇಡಿ.
ಹಕ್ಕಿಗಳಿಗೆ ತೊಂದರೆ ಕೊಡಬೇಡಿ
ಹಕ್ಕಿಗಳಿಗೆ ಯಾವುದೇ ಆಹಾರ ಕೊಡಬೇಡಿ
ನಿಶ್ಯಬ್ದವಾಗಿ ನಡೆಯಿರಿ

ಕಲ್ಲು ಕಡ್ಡಿಗಳನ್ನು ಎಸೆಯದಿರಿ

ಕಸ ಹಾಕಬೇಡಿ

..............................

...................................

### ವಾಕ್ಯ ಪೂರ್ತಿಗೊಳಿಸುವ

ಆವರಣದಲ್ಲಿ ಕೊಟ್ಟಿರುವ ಪದಗಳ ಸರಿಯಾದ ರೂಪವನ್ನು ಬಳಸಿಕೊಂಡು ವಾಕ್ಯಗಳನ್ನು ಪೂರ್ತಿಗೊಳಿಸಬೇಕಾಗಿದೆ. ಮಕ್ಕಳಿಂದ ಸರಿಯಾದ ರೂಪವನ್ನು ಹೇಳಿಸಿದ ಬಳಿಕ ವೈಯಕ್ತಿಕವಾಗಿ ಭರ್ತಿ ಮಾಡಲು ಬಿಡುವುದು.

1) ಫಲ ನೀಡಲಿಲ್ಲ, 2) ಸಂಕಲ್ಪ ಮಾಡಿದಳು, 3) ಮನವಿ ಸಲ್ಲಿಸಿದರು, 4) ಮನಸೂರೆಗೊಳ್ಳುತ್ತಿತ್ತು, 5) ಕೂಗಿ ಕರೆಯುತ್ತದೆ.

### ವರ್ಣನೆ ಬರೆಯುವ

ವರ್ಣಿಸುವ ವಿಧಾನ ಮಕ್ಕಳಿಗೆ ತಿಳಿದಿರಬೇಕಲ್ಲವೇ. ಅದಕ್ಕಾಗಿ ಕಾಡಿನ ವರ್ಣನೆಯನ್ನು ಪಠ್ಯದಲ್ಲಿ ಕೊಡಲಾಗಿದೆ. ಅದನ್ನು ಓದಿ ಅರ್ಥೈಸಿಕೊಂಡು ಬಯಲಿನ ವರ್ಣನೆಯನ್ನು ಬರೆಯಬೇಕಾಗಿದೆ. ಅದಕ್ಕೆ ಸಹಾಯಕವಾದ ಅಂಶಗಳನ್ನು ಕೊಡಲಾಗಿದೆ. ಒಂದು ಪದಸೂರ್ಯದ ಮೂಲಕ ಈ ಆಶಯವನ್ನು ಇನ್ನೂ ಸ್ಪಷ್ಟಗೊಳಿಸಬಹುದು.




ಬಯಲಿಗೆ ಸಂಬಂಧಿಸಿದ ಹೇಳಿಕೆಗಳನ್ನು ವಾಕ್ಯರೂಪದಲ್ಲಿ ಸುಂದರವಾಗಿ ಪೋಣಿಸಿದಾಗ ವರ್ಣನೆ ಸಿದ್ಧವಾಗುವುದಲ್ಲವೇ? ಮಕ್ಕಳನ್ನು ಗುಂಪಿನಲ್ಲಿ ಕುಳ್ಳಿರಿಸಿ ಬರೆಯಲು ಸೂಚಿಸಬಹುದು. ಬರೆದ ವರ್ಣನೆಯನ್ನು ಗುಂಪಿನಲ್ಲಿ ಓದಿ ಅಧ್ಯಾಪಕರ ಸಲಹೆಯಂತೆ ಉತ್ತಮಪಡಿಸಿ ಬರೆಯಲಿ. ನಿಮ್ಮ ಸ್ವಂತ ವರ್ಣನೆಯನ್ನು ಚಾರ್ಟಿನಲ್ಲಿ ಬರೆದು ಪ್ರದರ್ಶಿಸುವಿರಲ್ಲವೇ?

ಸುಂದರವಾದ ಬಯಲು, ಹಚ್ಚಹಸುರಾದ ಗದ್ದೆಗಳು ನೋಟಕರ ಮನ ಸೆಳೆಯುತ್ತಿದ್ದುವು. ಪೈರು ತೆನೆಭಾರದಿಂದ ಬಾಗಿ ಸಮಸ್ಕರಿಸುವಂತೆ ಕಾಣುತ್ತಿತ್ತು. ಅಡಿಕೆ ಮರದಲ್ಲಿ ಕೆಂಪಾದ ಗೊನೆಗಳು, ತೆಂಗಿನ ಮರದಲ್ಲಿ ತೂಗಿ ತೊನೆಯುವ ಕಾಯಿಗಳು, ಕೈ ಬೀಸಿ ಕರೆಯುವಂತೆ ತೋರುತ್ತಿತ್ತು. ಹರಿಯುವ ನದಿ ಕನ್ನಡಿಯಂತೆ ಹೊಳೆಯುತ್ತಿತ್ತು. ನೀರೊಳಗೆ ಮೀನುಗಳು ಮಿಂಚಿ ಮಾಯವಾಗುತ್ತಿದ್ದುವು. ಹಕ್ಕಿಗಳು ಹಾರುವ ವಿಮಾನದಂತೆ ಆಗಸದಲ್ಲಿ ಕಾಣುತ್ತಿದ್ದವು. ಚಿಟ್ಟೆಗಳು ಜೇನು ಹೀರಲು ಹಿಂಡು ಹಿಂಡಾಗಿ ಹೂಗಳ ಮೇಲೆ ಹಾರುತ್ತಿದ್ದುವು. ಹೊಲದಲ್ಲಿ ರೈತರು ತನ್ಮಯವಾಗಿ ದುಡಿಯುತ್ತಿದ್ದರು. ದೂರದಲ್ಲಿ ಮಕ್ಕಳು ಹಕ್ಕಿಗಳಂತೆ ಹಾಡುತ್ತಾ ಆಡುತ್ತಿದ್ದರು. ಮುದುಕರು ಇದನ್ನು ಕಣ್ಣುಮುಚ್ಚದೆ ನೋಡುತ್ತಿದ್ದರು.

**ಚರ್ಚಿಸುವ**

ಪ್ರವಾಸಿ ಕೇಂದ್ರಗಳು ಮಲಿನವಾಗಿ ಸಮಸ್ಯೆಯನ್ನು ಉಂಟುಮಾಡುತ್ತಿವೆ. ಇದಕ್ಕೆ ಪ್ರವಾಸಿಗರೇ ಕಾರಣರಾಗಿದ್ದಾರೆ. ಪ್ರವಾಸಿಗರು ಎಲ್ಲೆಂದರಲ್ಲಿ ಮಾಲಿನ್ಯಗಳನ್ನು ಎಸೆಯುತ್ತಿರುವುದರಿಂದ ಈ ಪರಿಸ್ಥಿತಿ ನಿರ್ಮಾಣವಾಗುತ್ತದೆ. ಇದನ್ನು ನಿವಾರಿಸುವುದು ಹೇಗೆ? ಮಕ್ಕಳೊಂದಿಗೆ ಚರ್ಚಿಸಿರಿ.

**ಪ್ರವಾಸಾನುಭವ ಬರೆಯುವ**

ಮಕ್ಕಳು ಕೈಗೊಂಡ ಪ್ರವಾಸದ ಅನುಭವಗಳನ್ನು ತರಗತಿಯಲ್ಲಿ ಹಂಚಿಕೊಳ್ಳಲು ಅವಕಾಶ ನೀಡುವುದು ಪ್ರವಾಸೀ ಕೇಂದ್ರಗಳೇ ಆಗಬೇಕೆಂದಿಲ್ಲ. ಅವರು ಅಜ್ಜಿಮನೆಗೆ ಹೋದ ಅನುಭವವೂ ಆದೀತು. ವಾಕ್ಯರೂಪದಲ್ಲಿ ವಿವರಿಸುವ, ಬರೆಯುವ ಸಾಮರ್ಥ್ಯದ ಬೆಳವಣಿಗೆಯನ್ನು ಇಲ್ಲಿ ಉದ್ದೇಶಿಸಲಾಗಿದೆ. ಬಳಿಕ ವೈಯಕ್ತಿಕವಾಗಿ ಬರೆಯಲಿ. ಬರೆದ ಲೇಖನವನ್ನು ತರಗತಿಯಲ್ಲಿ ಓದಲಿ. ಇತರರು ಆಲಿಸಿ ಮೌಲ್ಯನಿರ್ಣಯ ಮಾಡುವುದು. ಮೌಲ್ಯನಿರ್ಣಯ ಸೂಚಕಗಳು ಯಾವುವು? ಮಕ್ಕಳೇ ಸೂಚಿಸಲಿ.

- ಆಶಯ ಸ್ಪಷ್ಟತೆ
- ವಾಕ್ಯ ರಚನಾ ಕ್ರಮ/ಶೈಲಿ
- ಘಟನೆಗಳ ವಿವರಣೆ
- ಕ್ರಮೀಕರಣ

ಇತರರು ನೀಡಿದ ಸೂಚನೆಗಳ ಸಹಾಯದಿಂದ ಪ್ರವಾಸಾನುಭವವನ್ನು ಉತ್ತಮಪಡಿಸಿ ಪುನಃ ಬರೆಯಲಿ. ಅವುಗಳನ್ನು ಒಟ್ಟುಗೂಡಿಸಿ ತರಗತಿ ಸಂಚಿಕೆ ತಯಾರಿಸುವುದು.

**ಪತ್ತೆ ಹಚ್ಚುವ**

ಚೌಕದೊಳಗೆ ಹಲವಾರು ಮರಗಳ ಹೆಸರು ಅಡಗಿದೆ. ಮಕ್ಕಳು ವೈಯಕ್ತಿಕವಾಗಿ ಪತ್ತೆ ಮಾಡಲಿ. ಯಾರು ಅತಿ ಹೆಚ್ಚು ಹೆಸರು ಹುಡುಕಿದರೆಂದು ಗಮನಿಸಿ ಅಭಿನಂದಿಸುವಿರಲ್ಲವೇ?

ಚೌಕದಲ್ಲಿರುವ ಮರಗಳ ಹೆಸರು ಈ ಕೆಳಗಿನಂತಿವೆ :

| | | | |
|---|---|---|---|
| 1. ಹುಣಸೆ | 11. ರೆಂಜೆ | 21. ಅತ್ತಿ | 31. ಅಗಸೆ |
| 2. ಶ್ರೀಗಂಧ | 12. ಕದಂಬ | 22. ಅಶೋಕ | 32. ಅಂದಿಪುನಾರು |
| 3. ಕೊಂದೆ | 13. ಸಂಪಿಗೆ | 23. ಕಾಸರ್ಕ | 33. ಬಿದಿರು |
| 4. ಶಾಂತಿ | 14. ಬೀಟಿ | 24. ಜಾಲಿ | 34. ಗರಿಗ |
| 5. ಬೇಲ | 15. ನೆಲ್ಲಿ | 25. ದಡ್ಡಾಲ | 35. ಬಾಗೆ |
| 6. ಹೊಂಗೆ | 16. ದಾಲಚೀನಿ | 26. ತಾಳೆ | 36. ಬೇಗೆ |
| 7. ಮಹಾಗನಿ | 17. ಬೂರುಗ | 27. ಹೊನ್ನೆ | 37. ಸೀಗೆ |
| 8. ಚಂಪಕ | 18. ನೀಲಗಿರಿ | 28. ನೇರಳೆ | |
| 9. ಚಂದನ | 19. ಸಾಗುವಾನಿ | 29. ಅರಳಿ | |
| 10. ನಾಗಸಂಪಿಗೆ | 20. ಗೋಳಿ | 30. ಪನೆ | |

# 3. ಗದ್ದೆಯ ಗಮ್ಮತ್ತು

ಈ ಪಾಠದಲ್ಲಿ ಬೇಸಾಯದ ಕೆಲವು ಆಚರಣೆಗಳನ್ನು ತಿಳಿಸಲಾಗಿದೆ. ಮಕ್ಕಳಲ್ಲಿ ಕೃಷಿ ಸಂಸ್ಕೃತಿಯನ್ನು ಬೆಳೆಸಿ ಅವರನ್ನು ಕೃಷಿಯತ್ತ ಆಕರ್ಷಿತರಾಗುವಂತೆ ಮಾಡುವುದೇ ಈ ಪಾಠಭಾಗದ ಉದ್ದೇಶ.

## ಚಟುವಟಿಕೆಗಳು

### ಉತ್ತರಿಸುವ

ಕೊಟ್ಟಿರುವ ಪ್ರಶ್ನೆಗಳಿಗೆ ಮಕ್ಕಳು ಪಾಠಭಾಗದಿಂದ ಉತ್ತರವನ್ನು ಆರಿಸಿ ಬರೆಯಲಿ. ಪರಸ್ಪರ ಬದಲಾಯಿಸಿ ಸರಿಪಡಿಸಲಿ. ಅಗತ್ಯವಿದ್ದಲ್ಲಿ ಅಧ್ಯಾಪಕರು ಸಹಕಾರ ನೀಡುವುದು.

### ಚರ್ಚಿಸುವ

ನಿಮ್ಮ ಊರಿನಲ್ಲಿ ಗದ್ದೆ ಕೃಷಿ ಇದೆಯೇ? ಈಗ ಬೇಸಾಯದಲ್ಲಿ ಯಾವ ಯಾವ ಬದಲಾವಣೆಗಳಾಗಿವೆ? ಎಂದು ಪ್ರಶ್ನಿಸುವುದರ ಮೂಲಕ ಚರ್ಚೆಯನ್ನು ಆರಂಭಿಸುವುದು. ಕೃಷಿ ವಿಧಾನಗಳು, ಯಂತ್ರೋಪಕರಣಗಳು, ನೀರಾವರಿ, ಗೊಬ್ಬರ, ಬೀಜಗಳು, ಕೀಟನಾಶಕಗಳು, ಕೊಯ್ಲು ಇತ್ಯಾದಿಗಳಲ್ಲುಂಟಾದ ಬದಲಾವಣೆಗಳು ಚರ್ಚೆಯಲ್ಲಿ ಬರುವಂತೆ ಗಮನಹರಿಸುವುದು.

### ಸರಿಪಡಿಸಿ ಬರೆಯುವ

ಪಾಠಭಾಗದಲ್ಲಿ ನೀಡಲಾದ ಪದಗಳನ್ನು ಮಕ್ಕಳು ವೈಯಕ್ತಿಕವಾಗಿ ವಿಂಗಡಿಸಿ ಬರೆಯಲಿ. ಬಳಿಕ ಗುಂಪಿನಲ್ಲಿ ಸರಿಪಡಿಸಿ ಬರೆಯಲಿ.

| | | | |
|---|---|---|---|
| ಉದಾ : | ಕೆಳಗಿಳಿಸಿ | – | ಕೆಳಗೆ + ಇಳಿಸಿ |
| | ಹಾಕಿಟ್ಟರು | – | ಹಾಕಿ + ಇಟ್ಟರು |
| | ಹೊತ್ತಾಯಿತು | – | ಹೊತ್ತು + ಆಯಿತು |
| | ಬದಿಗಿರಿಸಿ | – | ಬದಿಗೆ + ಇರಿಸಿ |
| | ಹಟ್ಟಿಯಲ್ಲಿದ್ದ | – | ಹಟ್ಟಿಯಲ್ಲಿ + ಇದ್ದ |
| | ಉತ್ತಾಯಿತು | – | ಉತ್ತು + ಆಯಿತು |
| | ನೊಗವನ್ನಿಟ್ಟು | – | ನೊಗವನ್ನು + ಇಟ್ಟು |
| | ನೇಗಿಲನ್ನೆಳೆದು | – | ನೇಗಿಲನ್ನು + ಎಳೆದು |
| | ಬಾಯಗಲಿಸಿ | – | ಬಾಯಿ + ಅಗಲಿಸಿ |
| | ಕಾಲೆಡೆಯಲ್ಲಿ | – | ಕಾಲ + ಎಡೆಯಲ್ಲಿ |
| | ಕೆಲಸದಾಳುಗಳು | – | ಕೆಲಸದ + ಆಳುಗಳು |

ಇದೇ ರೀತಿಯ ಇತರ ಪದಗಳನ್ನು ಹುಡುಕಿ ಬರೆಯಲಿ.

**ಬರೆಯುವ**

ಪಾಠಭಾಗವನ್ನು ಓದಿ ಈ ಮಾತುಗಳನ್ನು ಯಾರು ಯಾರಿಗೆ ಹೇಳಿದರು ಎಂಬುದನ್ನು ಮಕ್ಕಳು ಬರೆಯಲಿ. ಗುಂಪಿನಲ್ಲಿ ಮಂಡಿಸಲಿ. ಅಗತ್ಯವಿದ್ದಲ್ಲಿ ಅಧ್ಯಾಪಕರು ಸಹಾಯಮಾಡುವುದು.

1. ಬನ್ನಿ ಬನ್ನಿ ಊಟ ಮಾಡೋಣ.
   ಈ ಮಾತನ್ನು ಕಮಲೆ ನೇಜಿ ನೆಡುತ್ತಿದ್ದ ಹೆಂಗಸರಲ್ಲಿ ಹೇಳಿದಳು.
2. ಇನಿಯತ್ತ ಕಂಡದ ಕೋರಿ
   ಈ ಮಾತನ್ನು ತಿಮ್ಮಜ್ಜ ರಾಮರಾಯರಲ್ಲಿ ಹೇಳಿದರು.
3. ಹೂಂ. ಆಯ್ತಪ್ಪ
   ಈ ಮಾತನ್ನು ರವಿ ತಂದೆಯಲ್ಲಿ ಹೇಳಿದನು.
4. ಅಣ್ಣೆರೇ ಕಂಡದ ಕೋರಿಕ್ ದಾದ ಗಮ್ಮತ್ತ್?
   ಈ ಮಾತನ್ನು ಶೇಖರ ರಾಮರಾಯರಲ್ಲಿ ಕೇಳಿದನು.
5. ಹೂಂ, ಹೂಂ, ಏನು ಕಾಳ .......... ಭಾರಿ ಉದಾಸೀನ?
   ಈ ಮಾತನ್ನು ರಾಮರಾಯರು ಎತ್ತುಗಳಿಗೆ ಹೇಳಿದರು.

**ಪದಗಳನ್ನು ಬರೆಯುವ**

ಮಕ್ಕಳು ಪಾಠಭಾಗವನ್ನು ಓದಿ ಅದರಲ್ಲಿ ಬಂದಿರುವ ತುಳು ಪದಗಳನ್ನು ಪಟ್ಟಿ ಮಾಡಲಿ. ಬಳಿಕ ಗುಂಪಿನಲ್ಲಿ ಚರ್ಚಿಸಿ ಅರ್ಥವನ್ನು ಕಂಡುಹಿಡಿಯಲಿ. ಹಿರಿಯರಿಂದ ಕೇಳಿ ತಿಳಿಯಲಿ.

ಸುಗ್ಗಿಡ್ – ಭತ್ತ ಬೇಸಾಯದ ಎರಡನೇ ಬೆಳೆಯ ಸಮಯ
(ಮೊದಲನೆಯದು ಏಣಿಲು, ಮೂರನೆಯದು ಕೊಳಕೆ)

ಕಂಡತ – ಗದ್ದೆಯ

ಮದಿಮೆ – ಮದುವೆ

ಅತ್ತ – ಅಲ್ವ

ಇನಿಯತ್ತ – ಇವತ್ತಲ್ವ

ಅಂದಜ್ಜರೇ – ಹೌದಜ್ಜ

ಬೊಕ್ಕ ಬಲೆ – ಮತ್ತೆ ಬನ್ನಿ

ತೂಕ – ನೋಡುವ

ಆಂಡ – ಸಾಧ್ಯವಾದರೆ

ಬರ್ಪೆ – ಬರುತ್ತೇನೆ

ಅಣ್ಣೆರೆ – ಅಣ್ಣಾ

ದಾದ – ಏನು

ಗಮ್ಮತ್ತ್ – ಗಮ್ಮತ್ತು

ಪಳಯೋ – ಹಲಗೆ

ಕಂಡದ ಕೋರಿ – ಸಾಮಾನ್ಯವಾಗಿ ಬೇಸಾಯದ ಕೊನೆಯಲ್ಲಿ ಆಚರಿಸುವ ಹಬ್ಬ.

ಬಚ್ಚಲಾ ಬೋರಿ ಕುಟ್ಟಿ ಕುಂಡಪ್ಪ – ಗದ್ದೆ ಉಳುವಾಗ ಎತ್ತುಗಳನ್ನು ಹೊಡೆದುಕೊಂಡು ಹಾಡುವ ಹಾಡು.

ಓ ಬೇಲೆ ಬೆನ್ನಿತ ಬೇಲೆ ಓ ಬೇಲೆ ಕಂಡದ ಬೇಲೆ – ನೇಜಿ ನೆಡುವ ಸಂದರ್ಭದಲ್ಲಿ ಆಯಾಸ ಪರಿಹಾರಕ್ಕಾಗಿ ಹಾಡುವ ಹಾಡು.

## ಪದಸೂರ್ಯ ಪೂರ್ತಿಗೊಳಿಸುವ

ಪದಸೂರ್ಯವನ್ನು ಪೂರ್ತಿಗೊಳಿಸಿರಿ ಎಂದು ಮಕ್ಕಳಲ್ಲಿ ಹೇಳುವುದು. ಮಕ್ಕಳು ಬೇಸಾಯಕ್ಕೆ ಸಂಬಂಧಿಸಿದ ಪದಗಳನ್ನು ಬರೆದು ಗುಂಪಿನಲ್ಲಿ ಮಂಡಿಸಲಿ. ಅಗತ್ಯವಿದ್ದರೆ ಅಧ್ಯಾಪಕರು ಸಹಾಯ ಮಾಡುವುದು.

ಬೇಸಾಯ

ಬೀಜ

ನಾಟಿ

ಹಲಗೆ ಹಾಕುವುದು

ನೇಗಿಲು

ಉಳುವುದು

ನೊಗ

ಎತ್ತುಗಳು




## ನೋಡಿ ತಿಳಿಯುವ

ಕೃಷಿಗೆ ಸಂಬಂಧಿಸಿದ ವೀಡಿಯೋ ದೃಶ್ಯಗಳನ್ನು ಅಧ್ಯಾಪಕರು ತರಗತಿಯಲ್ಲಿ ಪ್ರದರ್ಶಿಸುವುದು. (ದಾರಿದೀಪ ಮತ್ತು ಇತರ ಕೃಷಿರಂಗದ ಅಡಕಮುದ್ರಿಕೆಗಳು)

## ಘೋಷಣ ವಾಕ್ಯ ಬರೆಯುವ

ಮಕ್ಕಳು ಕೃಷಿಗೆ ಸಂಬಂಧಪಟ್ಟಂತಹ ಘೋಷಣಾ ವಾಕ್ಯವನ್ನು ಗುಂಪಿನಲ್ಲಿ ಬರೆಯಲಿ. ಬರೆಯುವುದಕ್ಕೆ ಮೊದಲು ಅಧ್ಯಾಪಕರು ಇತರ ಕೆಲವು ಘೋಷಣ ವಾಕ್ಯಗಳನ್ನು ಪರಿಚಯಿಸುವುದು. ಬಳಿಕ ಮಕ್ಕಳು ಗುಂಪಿನಲ್ಲಿ ಮಂಡಿಸುವುದು. ಯಾವ ಗುಂಪಿನ ಘೋಷಣ ವಾಕ್ಯ ಉತ್ತಮ. ಯಾಕೆ? ಮೌಲ್ಯನಿರ್ಣಯ ಸೂಚಕಗಳನ್ನು ಕಂಡುಕೊಂಡು ಮೌಲ್ಯನಿರ್ಣಯ ನಡೆಸುವುದು.

## ಘೋಷಣ ವಾಕ್ಯಗಳು

- ಬೇಸಾಯಗಾರ ಬೇಗ ಸಾಯ
- ಕೃಷಿಯಲ್ಲಿ ತೊಡಗಿರಿ, ಖುಷಿಯಲ್ಲಿ ಬದುಕಿರಿ
- ಕೃಷಿ ಬದುಕಿಗೆ ಆಧಾರ
- ಬೆಳೆ ಬೆಳೆಸಿ ಪರಿಸರ ಉಳಿಸಿ
- ಬೆಳೆ ಬೆಳೆಸಿ ಜೀವ ಉಳಿಸಿ

**ಅನುಭವ ಬರೆಯುವ**

ಅಧ್ಯಾಪಕರು ಕೃಷಿ ಅನುಭವದ ಬಗ್ಗೆ ಮಕ್ಕಳಲ್ಲಿ ಕೇಳುವುದು. ನಿಮ್ಮ ಮನೆಯಲ್ಲಿ ಯಾವ ಯಾವ ಕೃಷಿ ಮಾಡುತ್ತಾರೆ? ಕೃಷಿ ಮಾಡುವ ಹಂತಗಳು ಯಾವುವು? ಉಪಯೋಗಿಸುವ ಉಪಕರಣಗಳು ಯಾವುವು? ಹಾಕುವ ಗೊಬ್ಬರ ಯಾವುದು? ಯಾರು ಯಾರು ಕೆಲಸ ಮಾಡುತ್ತಾರೆ? ನೀವು ಯಾವ ರೀತಿ ಸಹಾಯ ಮಾಡುತ್ತೀರಿ? ಇತ್ಯಾದಿ ಪ್ರಶ್ನೆಗಳ ಮೂಲಕ ಮಕ್ಕಳ ಅನುಭವಗಳನ್ನು ಹೇಳಿಸುವುದು. ಬಳಿಕ ಮಕ್ಕಳಲ್ಲಿ ಬರೆಯಲು ಹೇಳುವುದು. ಗುಂಪಿನ ಮಂಡನೆ. ಅಧ್ಯಾಪಕರು ತಮ್ಮ ಕೃಷಿ ಅನುಭವವನ್ನು ಮಂಡಿಸುವುದು.

**ವಾಕ್ಯ ಬರೆಯುವ**

ಮಕ್ಕಳು ಪಾಠಭಾಗದಲ್ಲಿ ಕೊಟ್ಟಿರುವ ಪದಗಳನ್ನು ಕ್ರಮೀಕರಿಸಿ ಮಾದರಿಯಂತೆ ವಾಕ್ಯ ಬರೆಯಲಿ.

1. ಅಪ್ಪ ತೋಟದಲ್ಲಿ ಕೆಲಸ ಮಾಡುತ್ತಾರೆ.
2. ಅಜ್ಜನ ಜೊತೆಗೆ ನಾನು ಹೋಗುತ್ತೇನೆ.
3. ಅಮ್ಮ ಮಲ್ಲಿಗೆ ಕೃಷಿಯನ್ನು ಮಾಡುತ್ತಾರೆ.
4. ನಾವು ಮನೆಯಲ್ಲಿ ತರಕಾರಿಗಳನ್ನು ಬೆಳೆಸುತ್ತೇವೆ.

**ಸಂಗ್ರಹಿಸುವ**

ಅಧ್ಯಾಪಕನು ಮಕ್ಕಳಲ್ಲಿ ಕೃಷಿಗೆ ಸಂಬಂಧಿಸಿದ ಗಾದೆಗಳನ್ನು ಸಂಗ್ರಹಿಸಲು ಹೇಳುವುದು. ಅದಕ್ಕೆ ಪೂರಕವಾಗಿ ಗಾದೆಗಳ ಪುಸ್ತಕಗಳನ್ನು ಗ್ರಂಥಾಲಯದಿಂದ ಒದಗಿಸುವುದು. ಅದನ್ನು ಓದಿ ಹಾಗೂ ಹಿರಿಯರಿಂದ ಕೇಳಿ ಮಕ್ಕಳು ಕೃಷಿ ಸಂಬಂಧೀ ಗಾದೆಗಳನ್ನು ಬರೆಯಲಿ.

**ಕೃಷಿ ಗಾದೆಗಳು**

ಬೇಸಾಯಗಾರ ಬೇಗತಾ ಸಾಯ
ಕೈ ಕೆಸರಾದರೆ ಬಾಯಿ ಮೊಸರು
ಮಾಡಿದ್ದುಣ್ಣೊ ಮಹಾರಾಯ
ಭರಣಿ ಮಳೆ ಧರಣಿ ಬೆಳೆ
ತಗ್ಗಿದ ಗದ್ದೆಗೆ ಮೂರು ಬೆಳೆ
ಎತ್ತು ಏರಿಗೆ ಕೋಣ ನೀರಿಗೆ
ಬೆಳೆಯ ಸಿರಿ ಮೊಳಕೆಯಲ್ಲಿ
ಬಿತ್ತಿದಂತೆ ಬೆಳೆ
ಕೋಟಿ ವಿದ್ಯೆಗಳಲ್ಲಿ ಮೇಟಿ ವಿದ್ಯೆಯೆ ಲೇಸು
ಕೃಷಿಕನೆ ದೇಶದ ಬೆನ್ನೆಲುಬು

(ಹೆಚ್ಚಿನ ಮಾಹಿತಿಗೆ : ಕೃಷಿ ಗಾದೆಗಳು ಪುಸ್ತಕ ನೋಡಿರಿ.

## ಸಂದರ್ಶನ ನಡೆಸುವ

ನಮ್ಮ ಊರಿನ ಕೃಷಿಗಳು ಮತ್ತು ಕೃಷಿ ವಿಧಾನಗಳ ಬಗ್ಗೆ ತಿಳಿಯಲು ಉತ್ತಮ ಕೃಷಿಕರೊಬ್ಬರನ್ನು ಸಂದರ್ಶಿಸಬೇಕಾಗಿದೆ. ಅವರಲ್ಲಿ ಕೃಷಿಗೆ ಸಂಬಂಧಿಸಿದಂತೆ ಯಾವ ಯಾವ ಪ್ರಶ್ನೆಗಳನ್ನು ಕೇಳಬಹುದು? ಎಂದು ಅಧ್ಯಾಪಕರು ಮಕ್ಕಳಲ್ಲಿ ಕೇಳುವುದು. ಬಳಿಕ ಅಧ್ಯಾಪಕರು ಮತ್ತು ಮಕ್ಕಳು ಸೇರಿ ಪ್ರಶ್ನೆಗಳನ್ನು ತಯಾರಿಸುವುದು.

## ಕೇಳಬಹುದಾದ ಪ್ರಶ್ನೆಗಳು

1. ನಿಮ್ಮ ಹೆಸರೇನು?
2. ನೀವು ಯಾವ ಯಾವ ಕೃಷಿಗಳನ್ನು ಮಾಡುತ್ತೀರಿ?
3. ನೀವು ಈ ಕ್ಷೇತ್ರವನ್ನು ಆಯ್ಕೆ ಮಾಡಿಕೊಳ್ಳಲು ಕಾರಣವೇನು?
4. ನೀವು ಕೃಷಿ ಮಾಡುವ ವಿಧಾನ ಯಾವುದು?
5. ಕೃಷಿಗೆ ಜೈವಿಕ / ರಾಸಾಯನಿಕ ಗೊಬ್ಬರವನ್ನು ಬಳಸುತ್ತೀರಾ? ಯಾಕೆ?
6. ಕೃಷಿಯಲ್ಲಿ ಬಂದ ಬದಲಾವಣೆಗಳು ಯಾವುವು?
7. ನೀವು ಯಾವ ಯಾವ ಕೃಷಿ ಆಚರಣೆಗಳನ್ನು ಆಚರಿಸುತ್ತೀರಿ?
8. ಕೃಷಿಯಲ್ಲಿ ನೀವು ಎದುರಿಸುತ್ತಿರುವ ಸಮಸ್ಯೆಗಳು ಯಾವುವು?
9. ಮುಂದಿನ ಜನಾಂಗಕ್ಕೆ ನಿಮ್ಮ ಸಲಹೆ ಸೂಚನೆಗಳೇನು?

ಈ ರೀತಿಯ ಪ್ರಶ್ನಾವಳಿಗಳನ್ನು ತಯಾರಿಸಿ ಕೃಷಿಕರ ಸಂದರ್ಶನ ನಡೆಸಿ ಮಾಹಿತಿಗಳನ್ನು ಸಂಗ್ರಹಿಸುವುದು. ಸಂಗ್ರಹಿಸಿದ ಮಾಹಿತಿಗಳ ಆಧಾರದಲ್ಲಿ ವರದಿ ಬರೆಯಲು ಪ್ರಯತ್ನಿಸಲಿ.

## ಮೌಲ್ಯಮಾಪನ ಚಟುವಟಿಕೆಗಳು

## I

1. ಪಕ್ಷಿಗಳ ಗುಂಪಿನ ನಾಯಕ ಯಾರು? (ಶಂತನು, ಗರುಡ, ಜಟಾಯು) (1)
2. ಪಕ್ಷಿಗಳು ಕಾಡನ್ನು ಪುನಃ ಬೆಳೆಸಲು ಏನು ಮಾಡಿದವು? (2)
3. 'ಮನುಷ್ಯನಿಂದ ಅತಿಕ್ರಮಣದಿಂದ ಪರಿಸರ ನಾಶವಾಗುತ್ತದೆ. 'ಪುನರುದ್ಧಾರ' ಕಥೆಯ ಆಧಾರದಲ್ಲಿ ನಿಮ್ಮ ಅಭಿಪ್ರಾಯಗಳನ್ನು ಬರೆಯಿರಿ. (2)

## II

1. ಅಬ್ದುಲ್ ರಹಮಾನ್ ಬರೆದ ಪದ್ಯದ ಹೆಸರೇನು? (1)
2. ಗಾಳಿಮಳೆಯಿಂದ ಏನೆಲ್ಲಾ ಅನಾಹುತಗಳಾಗಿವೆ? ಪದ್ಯದ ಆಧಾರದಲ್ಲಿ ಬರೆಯಿರಿ. (2)
3. ಗಾಳಿಮಳೆಯಿಂದ ಊರ ಜನರಿಗೆ ಆದ ನಾಶ–ನಷ್ಟಕ್ಕೆ ಪರಿಹಾರವನ್ನು ಒದಗಿಸುವಂತೆ ವಿನಂತಿಸುತ್ತಾ ಪಂಚಾಯತು ಅಧ್ಯಕ್ಷರಿಗೆ ಮನವಿ ಪತ್ರ ಬರೆಯಿರಿ? (3)

## III

1. 'ನೇಗಿಲನ್ನೆಳೆದು' ಈ ಪದವನ್ನು ವಿಂಗಡಿಸಿ ಬರೆಯಿರಿ.
   (ನೇಗಿಲು + ಎಳೆದು, ನೇಗಿಲನ್ನು + ಎಳೆದು, ನೇಗಿಲ + ನೆಳೆದು ) (1)
2. 'ಕಂಡದ ಕೋರಿ' ಯ ದಿನ ರವಿಗೆ ಆದ ಅನುಭವಗಳೇನು? ನಿಮ್ಮದೇ ಮಾತುಗಳಲ್ಲಿ ಬರೆಯಿರಿ. (2)
3. ಇಂದು ಗದ್ದೆ ಬೇಸಾಯದಲ್ಲಿ ಬಂದ ಬದಲಾವಣೆಗಳೇನು? (2)

# 2. ನೆನೆಯುತ ನಲಿ

ಕಲೆ, ಸಂಸ್ಕೃತಿಗಳು ನಮ್ಮ ಬದುಕಿನಲ್ಲಿ ಸೇರಿಕೊಂಡಿವೆ. ನಾವು ಕಲೆಯನ್ನು ನೋಡಿ, ಆಸ್ವಾದಿಸಿ ಆನಂದಿಸಿದ್ದೇವೆ. ಕಲೆ ಮತ್ತು ಸಂಸ್ಕೃತಿ ನಮ್ಮನ್ನು ಸಾಮಾಜಿಕರನ್ನಾಗಿ ರೂಪಿಸುತ್ತವೆ. ಪರಸ್ಪರ ಸಾಮಾಜಿಕ ಸಂಬಂಧಗಳು ಗಟ್ಟಿಗೊಳ್ಳುವಂತೆ ಮಾಡುತ್ತವೆ. ಆದರೆ ಇಲ್ಲೆಲ್ಲಾ ಆಡಂಬರ, ಅಹಂಕಾರ ಸರಿಯಲ್ಲ. ನೊಂದ ಬದುಕಿಗೆ ಒಂದಷ್ಟು ಸಾಂತ್ವನ, ಹೊಸ ಹುರುಪು ದೊರಕಲು, ಇಲ್ಲದಿದ್ದರೆ ಸಂತೋಷವನ್ನು ಹಂಚಿಕೊಳ್ಳಲು, ವಿರಾಮ ಸಮಯದಲ್ಲಿ ದಣಿವು ಆರಿಸಿಕೊಳ್ಳಲು ಕಲೆಗಳು ರೂಪುಗೊಂಡಿರಬಹುದಾದರೂ ಅವುಗಳಿಗೆ ಅವುಗಳದ್ದೇ ಆದ ನೆಲೆ ಬೆಲೆ ಇದೆ. ಅದನ್ನು ಉಳಿಸಿ ಬೆಳೆಸುವುದು ಸಮಾಜ ಜೀವಿಯಾಗಿ ನಮ್ಮೆಲ್ಲರ ಕರ್ತವ್ಯವಾಗಿದೆ. ಇಲ್ಲಿ ಕೊಡಲಾದ ದೀಪಾವಳಿ, ನೃತ್ಯಾಂಗನೆ ಕಲ್ಯಾಣಿ ಕುಟ್ಟಿಯಮ್ಮ ಮತ್ತು ಆಷಾಢ ಮಾಸ ಬಂದೀತವ್ವ ಎಂಬ ಪಾಠಗಳ ಮೂಲಕ ಕಲೆ ಸಂಸ್ಕೃತಿಗಳ ಸ್ವರೂಪನ್ನು ಅರಿತುಕೊಂಡು ಅವುಗಳನ್ನು ಉಳಿಸಿ ಬೆಳೆಸುವ ಕಾರ್ಯಕ್ಕೆ ಮಕ್ಕಳನ್ನು ಪ್ರಚೋದಿಸಬೇಕಾಗಿದೆ. ಮಾತ್ರವಲ್ಲ ಸೂಚಿಸುವ ಕಲಿಕಾ ಸಾಧನೆಗಳನ್ನು ಸಾಧಿಸುವಂತೆಯೂ ಮಾಡಬೇಕಾಗಿದೆ.

## ಕಲಿಕಾ ಸಾಧನೆಗಳು

- ಹೊಸ ಪ್ರಯೋಗಗಳು, ಪದಗಳು, ಗಾದೆಗಳು, ನುಡಿಗಟ್ಟುಗಳು ಮೊದಲಾದುವುಗಳನ್ನು ಉಪಯೋಗಿಸಿಕೊಂಡು ಸಂದರ್ಭಾನುಸಾರ ಮಾತನಾಡುವುದು.
- ಕಥೆ, ಕವಿತೆ, ವಿವರಣೆ, ವರ್ಣನೆ ಮೊದಲಾದುವುಗಳನ್ನು ಆಲಿಸಿ ಮತ್ತು ಓದಿ ತನ್ನದೇ ಆದ ರೀತಿಯಲ್ಲಿ ಹೇಳುವುದು ಮತ್ತು ಬರೆಯುವುದು.
- ಕವಿತೆಯನ್ನು ಅರ್ಥೈಸಿಕೊಂಡು ರಾಗ, ತಾಳ, ಭಾವಗಳನ್ನು ಪರಿಗಣಿಸಿ ಹಾಡುವುದು.
- ಕವಿತೆಯ ಆಶಯವನ್ನು ಅರಿತು ಆಸ್ವಾದಿಸುವುದು ಮತ್ತು ಆಸ್ವಾದನ ಟಿಪ್ಪಣಿಯನ್ನು ಬರೆಯುವುದು.
- ವಿಶೇಷಣಗಳು, ವಿಶೇಷ ಪ್ರಯೋಗಗಳು ಮೊದಲಾದುವುಗಳನ್ನು ಸೂಕ್ತವಾಗಿ ಸೇರಿಸಿ ವಾಕ್ಯಗಳನ್ನು ಬರೆಯುವುದು.
- ಪಾಠಭಾಗವನ್ನು ವ್ಯವಹಾರ ರೂಪಕ್ಕೆ ತಕ್ಕಂತೆ ನಿರರ್ಗಳವಾಗಿ ಸ್ವರಭಾರ ಮತ್ತು ಉಚ್ಚಾರಸ್ಪಷ್ಟತೆಯೊಂದಿಗೆ ಓದುವುದು.
- ಕಥೆ, ಕವಿತೆ, ವಿವರಣೆ, ಭಿತ್ತಿಪತ್ರಿಕೆ ಮೊದಲಾದ ಸೃಜನಾತ್ಮಕ ರಚನೆಯಲ್ಲಿ ತೊಡಗುವುದು ಮತ್ತು ಅವುಗಳನ್ನು ಸಂಗ್ರಹಿಸಿ ಸಂಚಿಕೆ, ಹಸ್ತಪತ್ರಿಕೆ, ಭಿತ್ತಿಪತ್ರಿಕೆಗಳನ್ನು ತಯಾರಿಸುವುದು.
- ಕಥೆ ಮತ್ತು ಕವಿತೆಗಳ ಸಾಲುಗಳ ಅರ್ಥವನ್ನು ತಿಳಿದುಕೊಂಡು ಪದಸೌಂದರ್ಯವನ್ನು ಆಸ್ವಾದಿಸಿ ಆಶಯವನ್ನು ಹೇಳುವುದು ಮತ್ತು ಬರೆಯುವುದು.
- ಪದಪ್ರಯೋಗ, ಭಾಷಾ ಪ್ರಯೋಗ, ಆಶಯ ಮೊದಲಾದವುಗಳನ್ನು ತನ್ನ ರಚನೆಯಲ್ಲಿ ಬಳಸಿಕೊಳ್ಳುವುದು.
- ಕೃತಿರಚನೆಯಲ್ಲಿ ಇತರರು ಬಳಸಿದ ಆಶಯ, ಪ್ರಯೋಗ, ನುಡಿಗಟ್ಟು ಮೊದಲಾದುವುಗಳನ್ನು ಹೋಲಿಸಿ ತನ್ನ ರಚನೆಗಳನ್ನು ಉತ್ತಮಪಡಿಸುವುದು.
- ತನ್ನ ಮತ್ತು ಇತರರ ರಚನೆಗಳ ಮೌಲ್ಯನಿರ್ಣಯ ಮಾಡುವ ಮಾನದಂಡಗಳನ್ನು ರೂಪಿಸುವುದು ಮತ್ತು ಅವುಗಳ ಸಹಾಯದಿಂದ ಮೌಲ್ಯನಿರ್ಣಯ ಮಾಡುವುದು.
- ಬರವಣಿಗೆಯಲ್ಲಿ ಬಳಕೆಯಾಗುವ ಲೇಖನ ಚಿಹ್ನೆಗಳನ್ನು ಗುರುತಿಸಿಕೊಂಡು ಅವುಗಳನ್ನು ತನ್ನ ರಚನೆಯಲ್ಲಿ ಬಳಸುವುದು.
- ಓದುವ ಮೂಲೆ, ವಾಚನಾಲಯ ಮತ್ತು ಇತರೆಡೆಗಳಿಂದ ಲಭಿಸುವ ಓದುವ ಸಾಮಗ್ರಿಗಳನ್ನು ಓದಿ ದೊರೆತ ಅನುಭವಗಳನ್ನು ವಿಭಿನ್ನ ರೀತಿಯಲ್ಲಿ ಹಂಚಿಕೊಳ್ಳುವುದು.
- ಓದಿದ, ಆಲಿಸಿದ ವ್ಯವಹಾರ ರೂಪದ ಆಶಯವನ್ನು ತಿಳಿದುಕೊಂಡು ಇನ್ನೊಂದು ವ್ಯವಹಾರ ರೂಪವಾಗಿ ಬದಲಾಯಿಸುವುದು.
- ಮಾಹಿತಿ ತಂತ್ರಜ್ಞಾನವನ್ನು (ICT) ಉಪಯೋಗಿಸಿ, ಕೇಳಿಯೂ ನೋಡಿಯೂ ಆಶಯವನ್ನು ತಿಳಿದುಕೊಂಡು ಸ್ವಂತ ರಚನೆ ಮಾಡುವುದು ಮತ್ತು ಮಂಡಿಸುವುದು.

# ಯೂನಿಟ್ ಗ್ರಿಡ್

**ಯೂನಿಟ್ 2 : ನೆನೆಯುವ ನಲಿಯುವ** ಸಮಯ : 6+6+6 ಪೀರಿಯಡ್‌ಗಳು

| ಪಾಠದ ಹೆಸರು | ಆಶಯ/ ಉದ್ದೇಶಗಳು | ಪ್ರಕ್ರಿಯೆ | ಪೂರಕ ಸಾಮಗ್ರಿಗಳು | ಮೌಲ್ಯನಿರ್ಣಯ |
|---|---|---|---|---|
| 1. ದೀಪಾವಳಿ (ಕಥೆ) | • ಹಬ್ಬಗಳು ನಮ್ಮ ಸಂಸ್ಕೃತಿಯ ಭಾಗವಾಗಿದೆ.<br>• ಪಟಾಕಿ, ಸಿಡಿಮದ್ದುಗಳನ್ನು ಸಿಡಿಸುವಾಗ ಮುಂಜಾಗರೂಕತೆಗಳನ್ನು ವಹಿಸಬೇಕು.<br>• ಹಬ್ಬಗಳ ಸಮಯದಲ್ಲಿ ಶುಭಾಶಯ ಸಂದೇಶಗಳನ್ನು ಕಳುಹಿಸುತ್ತಾರೆ ಎಂದು ತಿಳಿಯುವುದು. | • ಪಾಠಭಾಗವನ್ನು ಸೂಕ್ತ ಸ್ವರಭಾರದೊಂದಿಗೆ ಓದುವುದು.<br>• ಭಿತ್ತಿ ಪತ್ರ ರಚಿಸುವುದು.<br>• ಶುಭಾಶಯ ಸಂದೇಶ ಬರೆಯುವುದು.<br>• ಕಥೆ ರಚಿಸುವುದು. | • ದಾರಿದೀಪ C.D.<br>• ಪತ್ರಿಕಾ ವರದಿ | • ಭಿತ್ತಿ ಪತ್ರ<br>• ಶುಭಾಶಯ ಸಂದೇಶಗಳು |
| 2. ನೃತ್ಯಾಂಗನೆ ಕಲ್ಯಾಣಿ ಕುಟ್ಟಿ ಅಮ್ಮ (ಲೇಖನ) | • ಕೆಲವೊಂದು ಘಟನೆಗಳನ್ನು ಓದಿ ಕಥೆಯನ್ನು ರಚಿಸಬಹುದು.<br>• ಕಠಿಣವಾದ ಪರಿಶ್ರಮದಿಂದ ಏನನ್ನು ಬೇಕಾದರೂ ಸಾಧಿಸಬಹುದು.<br>• ಕಲೆಗಳು ನಮ್ಮ ಸಂಸ್ಕೃತಿಯ ಭಾಗವಾಗಿದೆ.<br>• ಕೇರಳದಲ್ಲಿ ಹಲವಾರು ಕಲೆಗಳು ಪ್ರಚಲಿತವಾಗಿದೆ. | • ಊಹಿಸಿ ಬರೆಯುವುದು.<br>• ಆಮಂತ್ರಣ ಪತ್ರಿಕೆ ತಯಾರಿ.<br>• ವರದಿ ತಯಾರಿ<br>• ಆಲ್ಬಂ ತಯಾರಿ. | • ದಾರಿದೀಪ C.D.<br>• ಆಮಂತ್ರಣ ಪತ್ರಿಕೆಗಳ ಸಂಗ್ರಹ<br>• ದಿನ ಪತ್ರಿಕೆಗಳು/ ಮಾಸಿಕಗಳು/ವಾರ ಪತ್ರಿಕೆಗಳು | • ಕಥೆ<br>• ಆಮಂತ್ರಣ ಪತ್ರಿಕೆ<br>• ವರದಿ<br>• ಆಲ್ಬಂ |
| 3. ಆಷಾಢ ಮಾಸ ಬಂದೀತವ್ವ (ಜನಪದ ಗೀತೆ) | • ತವರು ಮನೆಯ ಹಸಿರಾದ ನೆನಪು<br>• ಜನಪದ ಗೀತೆಗಳಿಗೆ ಅವುಗಳದ್ದೇ ಆದ, ರಾಗ, ತಾಳ ಲಯಗಳಿವೆ.<br>• ನಮ್ಮ ಸಂಸ್ಕೃತಿಯನ್ನು ಬಿಂಬಿಸುತ್ತದೆ.<br>• ಪ್ರತಿಯೊಬ್ಬ ಹೆಣ್ಣು ಮಗಳಿಗೂ ತವರಿನ ಹಂಬಲವಿದೆ. | • ಆಸ್ವಾದನ ಟಿಪ್ಪಣಿ ಬರೆಯುವುದು. | • ದಾರಿ ದೀಪ C.D.<br>• ಜನಪದ ಗೀತೆಗಳ ಪುಸ್ತಕ | • ಆಸ್ವಾದನ ಟಿಪ್ಪಣಿ |

# 1. ದೀಪಾವಳಿ

ಹಬ್ಬ ಜನರನ್ನು ಒಂದುಗೂಡಿಸುತ್ತದೆ. ಆನಂದ, ಉಲ್ಲಾಸದೊಂದಿಗೆ ಹೊಸ ಅನುಭವಗಳನ್ನು ನೀಡುತ್ತವೆ. ಇಲ್ಲಿ ದೀಪಾವಳಿ ಹಬ್ಬವನ್ನು ಕೇಂದ್ರೀಕರಿಸಿ ಹಬ್ಬಗಳ ಮಹತ್ವ ತಿಳಿಯುವುದರೊಂದಿಗೆ ಭಾಷಾ ಕಲಿಕೆಯ ಚಟುವಟಿಕೆಗಳ ಮೂಲಕ ಆಶಯ ಗ್ರಹಣ ಓದು, ಸಂದೇಶ ಬರವಣಿಗೆ, ಭಿತ್ತಿ ಪತ್ರ ತಯಾರಿ, ಚರ್ಚೆಗಳ ಮೂಲಕ ಅಭಿಪ್ರಾಯ ಮಂಡಿಸುವ ಅವಕಾಶಗಳು ಇಲ್ಲಿವೆ.

## ಚಟುವಟಿಕೆಗಳು

### ಹೆಸರು ಹೇಳುವ ಆಟ

ಹೆಸರು ಸೇರಿಸುತ್ತಾ ಹೇಳುವ ಆಟ ಆಡುವುದು. ಹಬ್ಬಗಳು ಕಲೆ, ಕಲಾವಿದ–ಇತ್ಯಾದಿಗಳಲ್ಲಿ ಯಾವುದಾದರೂ ಒಂದು ವಿಷಯವನ್ನು ಆಯ್ದು, ವೃತ್ತಾಕಾರವಾಗಿ ನಿಂತು, ಹೆಸರು ಹೇಳುವ ಆಟವನ್ನಾಡಬಹುದು.

ಉದಾ:

ಒಂದನೆಯವನು : ದೀಪಾವಳಿ ಹಬ್ಬ

ಎರಡನೆಯವನು : ದೀಪಾವಳಿ, ನವರಾತ್ರಿ

ಮೂರನಯವನು : ದೀಪಾವಳಿ, ನವರಾತ್ರಿ, ರಂಜಾನ್

.......................... ಹೀಗೆ ಮುಂದುವರಿಯುವುದು.

ಆಟದ ಬಳಿಕ ಹೆಸರುಗಳನ್ನು ಪಟ್ಟಿ ಮಾಡಿಡುವುದು.

### ಚಿತ್ರದಲ್ಲಿ ಏನಿದೆ?

ದೀಪಾವಳಿ ಪಾಠದ ಚಿತ್ರಕ್ಕೆ ಸಂಬಂಧಿಸಿದ ಪ್ರಶ್ನೆಗಳನ್ನು ಕೇಳುವುದು.

- ಚಿತ್ರ ಯಾವುದಕ್ಕೆ ಸಂಬಂಧಿಸಿದೆ?
- ದೀಪಾವಳಿಯ ವಿಶೇಷವೇನು?
- ದೀಪಾವಳಿಯನ್ನು ಬೇರೆ ಹೆಸರಿನಿಂದ ಕರೆಯುವುದಿದ್ದರೆ ಯಾವ ಹೆಸರನ್ನು ನೀವು ಸೂಚಿಸುತ್ತೀರಿ? ಕಾರಣ ಕೊಡಿರಿ.

ಉದಾ: 'ಬೆಳಕಿನ ಹಬ್ಬ', 'ಪಟಾಕಿ ಹಬ್ಬ', 'ಬೆಳಗುವ ಹಬ್ಬ', 'ತಿಳಿವಿನ ಹಬ್ಬ'... ಹೀಗೆ....

- ದೀಪಾವಳಿಗೆ ಸಂಬಂಧಿಸಿದ ಪದಗಳನ್ನು ಬರೆಯಲು ಹೇಳುವುದು.



**ಕಥೆ ಓದುವ**

ಮಕ್ಕಳು 'ದೀಪಾವಳಿ' ಕಥೆಯನ್ನು ಓದಲಿ. ಕಠಿಣ ಪದಗಳನ್ನು ಗುರುತಿಸಿ ಪದಕೋಶದ ಸಹಾಯದಿಂದ ಅರ್ಥವನ್ನು ಕಂಡುಹಿಡಿಯಲಿ, ಬರೆಯಲಿ.

- ಪಾತ್ರಗಳು ಯಾವುವು?

  ಕಥೆಯಲ್ಲಿ ಬರುವ ಪಾತ್ರಗಳು ಯಾವುವು? ಕಥೆಯನ್ನು ಓದಿ ಪಾತ್ರಗಳನ್ನು ಗುರುತಿಸಿ ಪಟ್ಟಿಮಾಡುವುದು.

- ಉತ್ತರಿಸಿರಿ

  ಮಕ್ಕಳು 'ದೀಪಾವಳಿ' ಪಾಠದ ಕಥೆಯನ್ನು ಓದಿ ಪಾಠದ ಕೊನೆಗೆ ನೀಡಲಾದ ಪ್ರಶ್ನೆಗಳಿಗೆ ಉತ್ತರಿಸಲಿ. ಅದಕ್ಕಾಗಿ ಮಕ್ಕಳು ಈ ಕೆಳಗಿನ ಪ್ರಕ್ರಿಯೆಯಲ್ಲಿ ಸಾಗುವುದು.

**ಪ್ರಕ್ರಿಯೆ**

- ಪಾಠವನ್ನು ಓದುವುದು.
- ಪ್ರಶ್ನೆಗಳನ್ನು ಓದುವುದು.
- ಪ್ರಶ್ನೆಗಳ ಉತ್ತರಗಳಿರುವ ಪಾರಾಗಳನ್ನು ಗುರುತಿಸುವುದು.
- ಪ್ರಶ್ನೆಗಳಿಗೆ ಉತ್ತರ ಬರೆಯುವುದು.
- ಚರ್ಚಿಸಿ ಸರಿಪಡಿಸಿ ಹೇಳುವುದು.
- ಉತ್ತರ ಬರೆಯುವುದು.

**ಬರೆಯುವ**

ಕಥಾಭಾಗದಲ್ಲಿ ಬಂದಿರುವ ಪಾತ್ರಗಳ ಮಾತುಗಳನ್ನು ಕೊಡಲಾಗಿದೆ. ಈ ಮಾತುಗಳನ್ನು ಯಾರು? ಯಾರಿಗೆ? ಹೇಳಿದರು ಎಂದು ಪೂರ್ಣವಾಕ್ಯಗಳಲ್ಲಿ ಓದಿ ಕಂಡು ಹಿಡಿಯಲಿ, ಬಳಿಕ ಬರೆಯಲಿ.

**ಸಂದೇಶ ಬರೆಯುವ**

Computer / Laptop ನಲ್ಲಿ ಒಂದು ಹಬ್ಬದ ಸಂದೇಶವನ್ನು ಮಕ್ಕಳಿಗೆ ತೋರಿಸುವುದು. ಈ ಸಂದೇಶ ಯಾವ ಹಬ್ಬಕ್ಕೆ ಸಂಬಂಧಿಸಿದ್ದು?

ಸಂದೇಶದ ಅರ್ಥವೇನು? ಎಂದೆಲ್ಲಾ ಚರ್ಚಿಸುವುದು. (Laptop/Computer/Mobile ಇಲ್ಲವಾದಲ್ಲಿ ಪತ್ರ, ಕಾರ್ಡುಗಳನ್ನು ಬಳಸಬಹುದು)

ದೀಪಾವಳಿ ಹಬ್ಬದ ವಿಶೇಷತೆಯ ಬಗ್ಗೆ ಚರ್ಚಿಸುವುದು. ಬಳಿಕ ವೈಯಕ್ತಿಕವಾಗಿ ಸಂದೇಶಗಳನ್ನು ರಚಿಸುವುದು. ತರಗತಿಯಲ್ಲಿ ಓದುವುದು. ಉತ್ತಮವಾದುದನ್ನು ಆಯ್ಕೆ ಮಾಡುವುದು. ಪ್ರತಿಯೊಬ್ಬ ವಿದ್ಯಾರ್ಥಿಯೂ ಉತ್ತಮಪಡಿಸಿ ಬರೆಯಲಿ.

**ಸಂದೇಶಗಳು**

(1) ದೀಪಾವಳಿಯ ಸಾಲು ಹಣತೆ, ಸದಾ ಬೆಳಗಲಿ ಬಾಳ ಹಣತೆ

(2) ಸಾಲು ಸಾಲು ದೀಪ ಬೆಳಗಲಿ ಹಬ್ಬದ ದಿನ, ಹೊಸ ಬೆಳಕಿನಿಂದ ಹೊಸ ಅರಿವಿನಿಂದ
ಸಂಭ್ರಮಿಸಲಿ ಮನೆ, ಮನ

(3) ನೂರು ದೀಪ ಬೆಳಗಲಿ, ನೂರು ವರುಷ ಬಾಳಿರಿ

**ಅಭಿಪ್ರಾಯ ಹೇಳುವ**

'ಹಬ್ಬ'ವನ್ನು ಅರ್ಥಪೂರ್ಣವಾಗಿ ಆಚರಿಸುವುದು ಹೇಗೆ? ಎಂಬ ವಿಷಯದ ಚರ್ಚೆ ಆರಂಭಿಸಿ ವಿದ್ಯಾರ್ಥಿಗಳಿಗೆ ಅಭಿಪ್ರಾಯ ಹೇಳಲು ಅವಕಾಶ ಕೊಡುವುದು.

**ಪಟ್ಟಿ ಮಾಡುವ – ಪ್ರದರ್ಶಿಸುವ**

'ಪಟಾಕಿಯ ಸಂಭ್ರಮ'ದ ಬಗ್ಗೆ ಮಾತನಾಡುವುದು.

ಪಟಾಕಿ ಸಿಡಿಸುವಾಗ ವಹಿಸಬೇಕಾದ ಜಾಗ್ರತೆಗಳೇನು?

ಪಟ್ಟಿ ಮಾಡುವುದು.

**ವಹಿಸಬೇಕಾದ ಜಾಗರೂಕತೆಗಳು**

- ತೆರೆದ ಬಯಲಿನಲ್ಲಿ ಪಟಾಕಿ ಸಿಡಿಸಬೇಕು.
- ಒಣಹುಲ್ಲು, ಸೋಗೆ ಇರುವಲ್ಲಿ ಪಟಾಕಿ ಸಿಡಿಸಬಾರದು.
- ಸಿಡಿಯದೆ ಅರ್ಧಕ್ಕೆ ನಿಂತ ದುರುಸು ಪಟಾಕಿಗಳನ್ನು ಮುಟ್ಟಲು ಹೋಗಬಾರದು.
- ರಸ್ತೆಗಳಲ್ಲಿ ಪಟಾಕಿ ಸಿಡಿಸಬಾರದು.
- ದುರುಸು, ಬಾಣ, ರಾಕೆಟ್ ಉರಿಸುವಾಗ ಭದ್ರವಾಗಿ ಇರಿಸಿ, ತಕ್ಕ ಸ್ಥಳದಲ್ಲೇ ಉರಿಸಬೇಕು.

**ಭಿತ್ತಿ ಪತ್ರ ರಚಿಸುವ**

ಪಟಾಕಿ ಸುಡುವಾಗ ಸಂಭವಿಸುವ ಅನಾಹುತಗಳ ಬಗ್ಗೆ ಜಾಗೃತಿ ಮೂಡಿಸಲು ಘೋಷಣಾ ವಾಕ್ಯಗಳನ್ನು ಬರೆಯುವುದು. ವೈಯುಕ್ತಿಕವಾಗಿ ಬರೆದ ಬಳಿಕ ಗುಂಪಿನಲ್ಲಿಯೂ, ಬಳಿಕ ತರಗತಿಯಲ್ಲಿಯೂ ಮಂಡಿಸಿ ಉತ್ತಮಪಡಿಸಿ ಭಿತ್ತಿ ಪತ್ರಿಕೆಯಲ್ಲಿ ಪ್ರಕಟಿಸುವುದು.

**ಪಟಾಕಿಯ ಸಂಭ್ರಮವಿರಲಿ**
**ಜೊತೆಗೆ ಎಚ್ಚರವಿರಲಿ**

**ದೀಪಾವಳಿಗೆ ದೀಪ ಉರಿಯಲಿ,**
**ಪಟಾಕಿಯ ಹಾವಳಿ ತಗ್ಗಲಿ**

**ಪತ್ರಿಕಾ ವರದಿ–ಸಂಗ್ರಹ**

ವಿವಿಧ ಪತ್ರಿಕೆಗಳಲ್ಲಿ ಪ್ರಕಟವಾದ 'ಸಿಡಿಮದ್ದುಗಳಿಂದುಂಟಾದ ಅನಾಹುತ'ಗಳ ಕುರಿತಾದ ವರದಿಗಳನ್ನು ಮಕ್ಕಳು ಸಂಗ್ರಹಿಸಲಿ (ಅಧ್ಯಾಪಕರು ಅಂತಹ ಹಳೆಯ ಪತ್ರಿಕಾ ಪ್ರತಿಗಳನ್ನು ಒದಗಿಸಬಹುದು). ಅವುಗಳನ್ನುಪಯೋಗಿಸಿ ಕೊಲಾಶ್ ಅಥವಾ ಆಲ್ಬಂ ತಯಾರಿಸಲಿ.

**ಪೂರ್ತಿಗೊಳಿಸುವ**

ಮಕ್ಕಳೇ ಈ ಚಟುವಟಿಕೆಯನ್ನು ಮಾಡಲು ಪ್ರೇರೇಪಿಸುವುದು ಉತ್ತಮ.

(1) ಪಟಪಟನೆ

(2) ಪಳ ಪಳನೆ

(3) ಛಟ ಛಟನೆ

(4) ಧಗ ಧಗನೆ

(5) ಗಳ ಗಳನೆ

**ವಿಶೇಷ ತಿಂಡಿಗಳ ಪಟ್ಟಿ ಮಾಡುವ**

ಕೆಲವು ಹಬ್ಬಗಳ ಸಂದರ್ಭಗಳಲ್ಲಿ ವಿಶೇಷವಾದ ತಿಂಡಿ ತಿನಿಸುಗಳನ್ನು ತಯಾರಿಸುವ ಕ್ರಮವಿರುತ್ತದೆ. ಸಾಮಾನ್ಯವಾಗಿ ರೂಢಿಯಲ್ಲಿರುವ ಇವುಗಳನ್ನು ಮಕ್ಕಳು ಪಟ್ಟಿ ಮಾಡಲಿ. (ಇವುಗಳಲ್ಲಿ ಪ್ರಾದೇಶಿಕ ಬದಲಾವಣೆಗಳು ಇರಬಹುದು.)

ಉದಾ:

ದೀಪಾವಳಿ – ಕಡುಬು

ಚೌತಿ – ಮೋದಕ, ಅಪ್ಪ

ಕಾವೇರಿ ಸಂಕ್ರಾತಿ – ಉದ್ದಿನ ದೋಸೆ

ಓಣಂ – ಓಣಂ ಊಟ

ಮಕರ ಸಂಕ್ರಾತಿ – ಎಳ್ಳು ಬೆಲ್ಲ

ಯುಗಾದಿ – ಬೇವು ಬೆಲ್ಲ

ಅಷ್ಟಮಿ – ಹಲಸಿನ ಎಲೆ ಕೊಟ್ಟಿಗೆ

ನಾಗರ ಪಂಚಮಿ – ಅರಸಿನ ಎಲೆ ಅಡೆ ....... ಹೀಗೆ

**ತಿಂಗಳು ತಿಳಿಯುವ**

| ಸೌರಮಾನ | ಚಾಂದ್ರಮಾನ | ತುಳು | ಹಿಜಿರಾ | ಇಂಗ್ಲಿಷ್ |
|---|---|---|---|---|
| ಮೇಷ | ಚೈತ್ರ | ಪಗ್ಗು | ಮೊಹರಂ | ಜನವರಿ |
| ವೃಷಭ | ವೈಶಾಖ | ಬೇಸ್ಯ | ಸಫರ್ | ಫೆಬ್ರವರಿ |
| ಮಿಥುನ | ಜ್ಯೇಷ್ಠ | ಕಾರ್ತೆಲ್ | ರಬಿಯಿಲ್ ಅವ್ವಲ್ | ಮಾರ್ಚ್ |
| ಕರ್ಕಟಕ | ಅಷಾಢ | ಆಟಿ | ರಬಿಉಲ್ ಅಲ್ಲವ್ | ಏಪ್ರಿಲ್ |
| ಸಿಂಹ | ಶ್ರಾವಣ | ಸೋಣ | ಜಮಾದಿಲ್ ಆಖಿರ್ | ಮೇ |
| ಕನ್ಯಾ | ಭಾದ್ರಪದ | ನಿರ್ನಾಲ್ | ರಜಬ್ | ಜೂನ್ |
| ತುಲಾ | ಅಶ್ವಯುಜ | ಬೊಂತೆಲ್ | ಶಹಬಾನ್ | ಜುಲೈ |
| ವೃಶ್ಚಿಕ | ಕಾರ್ತಿಕ | ಜಾರ್ದೆ | ಶಹಬಾನ್ | ಆಗಸ್ಟ್ |
| ಧನು | ಮಾರ್ಗಶಿರ | ಪೆರಾರ್ದೆ | ರಂಜಾನ್ | ಸೆಪ್ಟಂಬರ್ |
| ಮಕರ | ಪುಷ್ಯ | ಪೊನ್ನಿ | ಶವ್ವಾಲ್ | ಅಕ್ಟೋಬರ್ |
| ಕುಂಭ | ಮಾಘ | ಮಾಯಿ | ದುಲ್‌ಕಅದ್ | ನವೆಂಬರ್ |
| ಮೀನ | ಫಾಲ್ಗುಣ | ಸುಗ್ಗಿ | ದುಲ್‌ಹಜ್ | ಡಿಸೆಂಬರ್ |

# ಲತಾ ಮಂಗೇಶ್ಕರ್



ಲತಾ ಮಂಗೇಶ್ಕರ್ ಚಲನ ಚಿತ್ರದ ಪ್ರಖ್ಯಾತ ಹಿನ್ನೆಲೆ ಗಾಯಕಿ. ಇವರು ಸುಮಾರು 36 ಭಾರತೀಯ ಪ್ರಾದೇಶಿಕ ಭಾಷೆಗಳಲ್ಲಿ ಸುಮಾರು 40,000 ಕ್ಕೂ ಹೆಚ್ಚು ಚಲನ ಚಿತ್ರ ಗೀತೆಗಳನ್ನು ಹಾಡಿರುತ್ತಾರೆ. ಇದು ಒಂದು ವಿಶ್ವದಾಖಲೆಯಾಗಿ ಗಿನ್ನೆಸ್ ಪುಸ್ತಕ ಸೇರಿದೆ.

ತಂದೆ – ಪಂಡಿತ್ ದೀನನಾಥ್ ಶಾಸ್ತ್ರೀಯ ಸಂಗೀತಗಾರ ಮತ್ತು ರಂಗ ನಟ

ತಾಯಿ – ಸೇವಂತಿ

ಜನನ ಸ್ಥಳ – ಇಂದೋರ್, ಈಗಿನ ಮಧ್ಯಪ್ರದೇಶ.

ಬಹಳ ಚಿಕ್ಕಂದಿನಲ್ಲಿಯೇ ಸಂಗೀತಾಭ್ಯಾಸ

ತಂದೆಯ ಮರಣದಿಂದ ಕುಟುಂಬ ಹೊಣೆ ಹೊತ್ತ ಲತಾ ಸಿನಿಮಾದಲ್ಲಿ ಅಭಿನಯದಿಂದ ವೃತ್ತಿ ಆರಂಭ.

(1942 ರಿಂದ 48) 8 ಸಿನಿಮಾಗಳಲ್ಲಿ ಅಭಿನಯ.

ಬಳಿಕ – ಹಿನ್ನೆಲೆ ಗಾಯಕಿಯಾಗಿ ಮಾನ್ಯತೆ

ಪ್ರಶಸ್ತಿಗಳು – ಭಾರತ ರತ್ನ – ಭಾರತದ ನಾಗರೀಕರಿಗೆ ಲಭಿಸುವ ಉನ್ನತ ಪ್ರಶಸ್ತಿ, 8 ಸಲ ಫಿಲಂಫೇರ್ ಪ್ರಶಸ್ತಿ (ಮುಂದಿನ ತಲೆಮಾರಿಗೆ ಅವಕಾಶ ಕಲ್ಪಿಸಿಕೊಡುವ ಉದ್ದೇಶದಿಂದ. ಪದ್ಮವಿಭೂಷಣ, ಪದ್ಮಭೂಷಣ, ದಾದಾ ಸಾಹೇಬ್ ಫಾಲ್ಕೆ ಪ್ರಶಸ್ತಿ, ಹೀಗೆ ಹತ್ತು ಹಲವು ಪ್ರಶಸ್ತಿಗಳು. ಮುಂದೆ ಅವರು ಈ ಪ್ರಶಸ್ತಿಯನ್ನು ಸ್ವೀಕರಿಸದೆ ಬಿಟ್ಟರು.)

**ಕಥೆ ರಚಿಸುವ**

ಕಥೆಯನ್ನು ರಚಿಸಲು ಕೆಲವೊಂದು ಸೂಚನೆಗಳನ್ನು ನೀಡಲಾಗಿದೆ. ಮಕ್ಕಳು ಸೂಚನೆಗಳನ್ನು ಓದಲಿ. ಒಂದೊಂದು ಸೂಚನೆಯ ಆಧಾರದಲ್ಲಿ ಕಥೆಯನ್ನು ಬರೆಯಲಿ. ಒಂದು ಸೂಚನೆಗೆ ಒಂದು ಚಿಕ್ಕ ಪಾರಾದಷ್ಟು ವಿಸ್ತರಿಸಿದರೆ ಒಳ್ಳೆಯದು. ಕಥೆಯಲ್ಲಿ ಘಟನೆಗಳ ಸಮಯ, ಸಂದರ್ಭ ಕ್ರಮೀಕರಣ, ಸರಳವಾದ ವಿವರಣೆ, ಆಶಯ ಸ್ಪಷ್ಟತೆ, ಉತ್ತಮ ಭಾಷಾ ಶೈಲಿ ಒಳಗೊಳ್ಳುವಂತಿರಲಿ.

ಕಥೆಯನ್ನು ಬರೆಯಲು ಸುಲಭವಾಗುವಂತೆ ಮಕ್ಕಳು ಸೂಚನೆಗಳ ಮೇಲೆ ಕೆಲವೊಂದು ಪ್ರಶ್ನೆಗಳನ್ನು ಹಾಕಿ ವಿಸ್ತರಿಸುವುದು.

ಉದಾ : 'ತೇಜ ರಸ್ತೆಯಲ್ಲಿ ಬರುತ್ತಿದ್ದ'

ತೇಜನು ಯಾಕೆ ರಸ್ತೆಯಲ್ಲಿ ಬರುತ್ತಿದ್ದ? ಎಲ್ಲಿಂದ ಬರುತ್ತಿದ್ದ? ಎಲ್ಲಿಗೆ ಬರುತ್ತಿದ್ದ? ಹೇಗೆ ಬರುತ್ತಿದ್ದ? (ನಿಧಾನವಾಗಿಯೋ, ವೇಗವಾಗಿಯೋ) ಅವನು ಏನನ್ನು ಯೋಚಿಸುತ್ತಾ ಬರುತ್ತಿದ್ದ? ಜೊತೆಯಲ್ಲಿ ಯಾರಾದರೂ ಇದ್ದರೇ? ಯಾರೆಲ್ಲಾ ಇದ್ದರು? ಇಂತಹ ಪ್ರಶ್ನೆಗಳನ್ನು ಹಾಕುತ್ತಾ, ಅವರೇ ಉತ್ತರ ಕಂಡುಕೊಂಡು ಕಥೆಯನ್ನು ಉತ್ತಮವಾಗಿ ಬೆಳೆಸಬಹುದು. ಅಧ್ಯಾಪಕರು ಈ ಒಂದು ಉದಾಹರಣೆಯನ್ನು ತರಗತಿ ಚರ್ಚೆಯ ಮೂಲಕ ಸ್ಪಷ್ಟ ಪಡಿಸಬೇಕು. ಇದೇ ರೀತಿಯಲ್ಲಿ ಉಳಿದ ಸೂಚನೆಗಳನ್ನು ವಿಸ್ತರಿಸುತ್ತಾ ಕಥೆಯನ್ನು ಬರೆಯುವುದು. ಬರೆದ ಕತೆಯನ್ನು ಗುಂಪುಗಳಲ್ಲಿಯೂ, ತರಗತಿ ಮಟ್ಟದಲ್ಲಿಯೂ ಓದಿ ಮೌಲ್ಯನಿರ್ಣಯ ಮಾಡಲಿ. ಬರೆದ ಕಥೆಯಲ್ಲಿ ಉತ್ತಮ ಅಂಶಗಳನ್ನು ಗುರುತಿಸಲಿ. ಮಕ್ಕಳ ರಚನೆಗಳನ್ನು ಓದುವ ಮೂಲೆಯಲ್ಲಿ ಪ್ರದರ್ಶಿಸುವುದು.

## 2. ನೃತ್ಯಾಂಗನೆ ಕಲ್ಯಾಣಿ ಕುಟ್ಟಿ ಅಮ್ಮ

ಕಲೆಗಳು ಮನೋರಂಜನೆಯಿಂದ ಉಪಾಸನೆಯ ವರೆಗೆ ನಮ್ಮ ಸಮೂಹದಲ್ಲಿ ಸೇರಿಹೋಗಿವೆ. ಮಹಾನ್ ಕಲಾಗಾರರು ಆಗಿ ಹೋಗಿದ್ದಾರೆ. ಇವರ ಬಗ್ಗೆ ತಿಳಿಯುವುದು ಅಗತ್ಯ.

### ಚಟುವಟಿಕೆಗಳು

### ಗುರುತಿಸುವ, ಪರಿಚಯ ಹೇಳುವ

ಕೆಲವೊಂದು ಪ್ರಸಿದ್ಧ ಕಲಾವಿದರ ಭಾವಚಿತ್ರ ಪ್ರದರ್ಶಿಸುವುದು. ಮಕ್ಕಳು ಗುರುತಿಸಲಿ, ಚಲನ ಚಿತ್ರ ಕಲಾವಿದರು, ಸಂಗೀತಗಾರರು, ನೃತ್ಯಗಾರರು, ಜನಪದ ಕಲಾವಿದರು, ಯಕ್ಷಗಾನ ಕಲಾವಿದರು, ಭರತ ನಾಟ್ಯ ಕಲಾವಿದರನ್ನು ಮಕ್ಕಳು ಯಾರೆಂದು ಗುರುತಿಸಲಿ ಕಿರು ಪರಿಚಯ ಹೇಳಲಿ.

ಪ್ರಖ್ಯಾತ ಕಲಾವಿದರೊಬ್ಬರ ಜೀವನ ಸಾಧನೆಯ ಕುರಿತು ಅಧ್ಯಾಪಕರು ಹೇಳುವುದು.

ಮಕ್ಕಳು ಕಲ್ಯಾಣಿ ಕುಟ್ಟಿ ಅಮ್ಮ ಪಾಠಭಾಗವನ್ನು ಓದಲಿ. ಕಠಿಣ ಪದಗಳನ್ನು ಗುರುತಿಸಲಿ. ಅರ್ಥಕೋಶದ ಸಹಾಯದಿಂದ ಪದಗಳ ಅರ್ಥವನ್ನು ಕಂಡುಹಿಡಿಯಲಿ.

### ಉತ್ತರ ಬರೆಯುವ

ಪಾಠಭಾಗವನ್ನು ಓದಿದ ಬಳಿಕ ಕೊಡಲಾದ ಪ್ರಶ್ನೆಗಳಿಗೆ ಉತ್ತರ ಹೇಳಲಿ. ಚರ್ಚೆಯ ಬಳಿಕ ಸರಿಯಾದ ಉತ್ತರ ಯಾವುದೆಂದು ತೀರ್ಮಾನಿಸಲಿ. ಬಳಿಕ ವೈಯುಕ್ತಿಕವಾಗಿ ಉತ್ತರ ಬರೆಯಲಿ.

### ಕ್ರಮೀಕರಿಸಿ ಬರೆಯುವ

ಪಾಠವನ್ನು ಓದಿ ಕಲ್ಯಾಣಿ ಕುಟ್ಟಿ ಅಮ್ಮನ ಜೀವನದ ಘಟನೆಗಳನ್ನು ಕ್ರಮೀಕರಿಸಿ ಬರೆಯಲಿ.

ಬರೆಯುವ ಮೊದಲು ಆಗಿನ ಕಾಲದ ಸಮಾಜದ ದೃಷ್ಟಿಕೋನದಲ್ಲಿ ಸ್ತ್ರೀಯರ ಸ್ಥಾನಮಾನದ ಬಗ್ಗೆ, ಅವರ ವಿದ್ಯಾಭ್ಯಾಸದ ಬಗ್ಗೆ, ಇರುವ ಕಲ್ಪನೆಗಳನ್ನು ಚರ್ಚಿಸುವುದು. ಬಳಿಕ, ಕಲ್ಯಾಣಿ ಕುಟ್ಟಿ ಅಮ್ಮನು ಕೂಡಾ ಸಾಮಾನ್ಯ ಸ್ತ್ರೀಯರಂತೆ ಆಗುತ್ತಿದ್ದರು. ಇಷ್ಟೊಂದು ಸಾಧನೆ ಮಾಡಲು ಸಾಧ್ಯವಾಗುತ್ತಿರಲಿಲ್ಲ ಎಂಬ ಆಶಯ ಬರುವಂತೆ ಮಕ್ಕಳ ಊಹನೆ ಬೆಳೆಯಬೇಕು.

ಬಳಿಕ ತಮ್ಮ ಕುಟುಂಬ ಸದಸ್ಯರ, ತಂದೆ, ತಾಯಿ, ಅಜ್ಜ ಹೀಗೆ ಯಾರಾದರೂ ಒಬ್ಬರ ಜೀವನದ ಘಟನೆಗಳನ್ನು ಕ್ರಮೀಕರಿಸಿ ಬರೆಯಲಿ.

(ಜನನ, ವಿದ್ಯಾಭ್ಯಾಸ ಆರಂಭ, ಉನ್ನತ ಶಿಕ್ಷಣ, ವಲಸೆ, ಉದ್ಯೋಗ, ವಿವಾಹ, ಹೀಗೆ....)

**ಆಮಂತ್ರಣ ಪತ್ರಿಕೆ**

## ಸರಕಾರಿ ಹಿರಿಯ ಪ್ರಾಥಮಿಕ ಶಾಲೆ, ಕಾಸರಗೋಡು

ಅಂಚೆ : ಕಾಸರಗೋಡು ಕಾಸರಗೋಡು

ದಿನಾಂಕ: 10.09.2015

ಪ್ರಿಯರೇ,

ಇದೇ ಬರುವ ದಿನಾಂಕ 01–09–2015 ನೇ ಗುರುವಾರ ನಮ್ಮ ಶಾಲೆಯ 2015–16ನೇ ಸಾಲಿನ ಶಾಲಾಕಲೋತ್ಸವ ಜರಗಲಿರುವುದು. ತಮಗೆಲ್ಲರಿಗೂ ಈ ಸಮಾರಂಭಕ್ಕೆ ಆದರದ ಸ್ವಾಗತ.

**ಕಾರ್ಯಕ್ರಮಗಳು**

| | | |
|---|---|---|
| ಬೆಳಗ್ಗೆ 9.00 ಗಂಟೆಗೆ | : | ಉದ್ಘಾಟನ ಕಾರ್ಯಕ್ರಮ |
| ಸ್ವಾಗತ | : | ಶ್ರೀ ರೋಬರ್ಟ್ ಡಿಸೋಜ, ಮುಖ್ಯೋಪಾಧ್ಯಾಯರು |
| ಉದ್ಘಾಟಕರು | : | ಶ್ರೀ ನವೀನ್‌ಕುಮಾರ್, ಗ್ರಾಮ ಪಂಚಾಯತು ಸದಸ್ಯರು |
| ಅಧ್ಯಕ್ಷರು | : | ಶ್ರೀಮತಿ ಮಾಲತಿ, ಅಧ್ಯಕ್ಷೆ ಮಾತೃ ಸಂಘ |
| ಶುಭಾಶಂಸನೆ | : | ಶ್ರೀ ಅಬ್ಬಾಸ್, ಅಧ್ಯಕ್ಷರು, ಹಿರಿಯ ವಿದ್ಯಾರ್ಥಿ ಸಂಘ |
| ಬೆಳಗ್ಗೆ 10.00 ಗಂಟೆಗೆ | : | ಶಾಲಾ ಕಲೋತ್ಸವ, ಕಲಾ ಸ್ಪರ್ಧೆಗಳು ಆರಂಭ, |
| ಸಾಯಂಕಾಲ 4.30ಕ್ಕೆ | : | ಸಮಾರೋಪ ಸಮಾರಂಭ |

ಇತಿ

**ಮುಖ್ಯೋಪಾಧ್ಯಾಯರು**

ಅಧ್ಯಾಪಕರು ಮತ್ತು ವಿದ್ಯಾರ್ಥಿವೃಂದ

### ವರದಿ ಬರೆಯುವ

ಶಾಲಾ ಕಲೋತ್ಸವ ಅಥವಾ ಸ್ವಾತಂತ್ರ್ಯ ದಿನಾಚರಣೆಯ ಬಗ್ಗೆ ವರದಿ ತಯಾರಿಸುವುದು. ವರದಿಯು ಉತ್ತಮವಾಗಲು ಏನು ಮಾಡಬೇಕು? ವಾಕ್ಯಗಳನ್ನು ಪೂರ್ಣವೂ ಸ್ಪಷ್ಟವೂ ಆಗಿ ಬರೆಯಲಿ. ಘಟನೆಗಳನ್ನು ಕ್ರಮೀಕರಿಸಿ ಬರೆಯಲಿ. ತಪ್ಪಿಲ್ಲದೆ ಸೂಕ್ತ ಪದಗಳನ್ನು ಬಳಸಲಿ. ಯಾವುದೇ ಆಶಯಗಳು ಬಿಟ್ಟುಹೋಗದಂತೆ ಬರೆಯಲಿ. ವರದಿಯನ್ನು ಸರಳವಾಗಿ, ಸಮಗ್ರವಾಗಿ ಬರೆಯಲಿ.

### ವಾಕ್ಯ ರಚಿಸುವ

ಅಡಿಗೆರೆಯೆಳೆದ ಪದಗಳ ಅರ್ಥವನ್ನು ತಿಳಿದುಕೊಂಡು ವಾಕ್ಯ ರಚನೆ ಮಾಡಲಿ.

ಉದಾ: (1) ಶಂತನುವಿನ ನಾಯಕತ್ವದಲ್ಲಿ ಪಕ್ಷಿಗಳು ಅರಣ್ಯವನ್ನು <u>ಪುನರುಜ್ಜೀವನ</u>ಗೊಳಿಸಿದವು.

(2) ಸರ್.ಎಂ. ವಿಶ್ವೇಶ್ವರಯ್ಯರು ಭಾರತದ ಜಲವಿದ್ಯುತ್ ಯೋಜನೆಗಳ <u>ರೂವಾರಿ</u>ಯಾಗಿದ್ದಾರೆ.

(3) ವಿದ್ಯಾರ್ಥಿಗಳು ಉತ್ತಮ ಸಾಧನೆ ಗೈದು ಸಮಾಜವೇ <u>ಗುರುತಿಸುವಂತಾಗಬೇಕು.</u>

(4) ಅದೆಷ್ಟೋ ಮಂದಿ ಭೀಕರ ರಸ್ತೆ ಅಪಘಾತದಲ್ಲಿ <u>ವಿಧಿವಶ</u>ರಾಗುತ್ತಾರೆ.

### ಚರ್ಚಿಸುವ

ಚರ್ಚೆಯ ವಿಷಯವನ್ನು ಕರಿಹಲಗೆಯಲ್ಲಿ ಬರೆಯಬೇಕು. ಈ ಪ್ರಶ್ನೆಗೆ ಸಂಬಂಧಿಸಿದ ಚರ್ಚೆಯನ್ನು ಅಧ್ಯಾಪಕರು ನಡೆಸುವುದು. ಮಕ್ಕಳಲ್ಲಿ ಪ್ರಶ್ನಿಸುತ್ತಾ ಅವರ ಅಭಿಪ್ರಾಯ ಹೇಳಲು ಅವಕಾಶ ಕೊಡುವುದು. ಮಕ್ಕಳು ಹೇಳಿದ ಅಭಿಪ್ರಾಯಗಳನ್ನು ಅಧ್ಯಾಪಕರು ಸರಿಪಡಿಸಿ ಹೇಳಿ ಖಾತರಿಪಡಿಸಲಿ. ಅವುಗಳ ಮೇಲೆ ಪ್ರಶ್ನೆಗಳನ್ನು ಕೇಳುತ್ತಾ ಮುಂದುವರಿದು ಹೆಚ್ಚಿನ ಮಕ್ಕಳು ಮುಕ್ತವಾಗಿ ಅಭಿಪ್ರಾಯ ವ್ಯಕ್ತ ಪಡಿಸಲು ಅವಕಾಶ ಕಲ್ಪಿಸುವುದು. ಅಭಿಪ್ರಾಯ ವ್ಯಕ್ತಿಪಡಿಸಿದವರನ್ನು ಪ್ರೋತ್ಸಾಹಕ ನುಡಿಗಳಿಂದ ಬೆಂಬಲಿಸುವುದು. ಚರ್ಚೆಯ ಕೊನೆಗೆ ಒಟ್ಟು ಚರ್ಚೆಯಲ್ಲಿ ಮೂಡಿ ಬಂದ ಅಭಿಪ್ರಾಯಗಳನ್ನು ಕ್ರೋಡೀಕರಿಸುವುದು.

**ವಿ.ಸೂ.:** ಪ್ರತಿಯೊಬ್ಬ ಮಗುವಿಗೂ ಅವಕಾಶ ಸಿಗುವಂತಾಗಬೇಕು. ಅಭಿಪ್ರಾಯ ಮಂಡಿಸುವಾಗ ಮಗು ತಪ್ಪಿದರೆ ಅವುಗಳನ್ನು ನಗಣ್ಯ ಮಾಡಿರಿ. ಸರಿಪಡಿಸುತ್ತಾ ಮಕ್ಕಳಿಗೆ ಪ್ರೋತ್ಸಾಹವನ್ನು ನೀಡಿರಿ. ಅಂತಹ ಮಕ್ಕಳಿಗೆ ನಾಚಿಕೆ, ಅಪಮಾನವಾಗದಂತೆ ಜಾಗ್ರತೆ ವಹಿಸಬೇಕು. ಇಲ್ಲವಾದಲ್ಲಿ ಮುಂದೆ ಅವರು ಅಭಿಪ್ರಾಯ ಮಂಡಿಸಲು ಹಿಂಜರಿಕೆ ತೋರಿಸಬಹುದು.

### ಆಲ್ಬಂ ತಯಾರಿ

ವಿವಿದೆಡೆಗಳಿಂದ ಚಿತ್ರಗಳನ್ನು ಸಂಗ್ರಹಿಸಿ ಪುಸ್ತಕದಲ್ಲಿ ಅಂಟಿಸಿ ಆಲ್ಬಂ ತಯಾರಿಸಲಿ. ಚಿತ್ರಗಳನ್ನು ಮಕ್ಕಳು ಪರಸ್ಪರ ಹಂಚಿಕೊಳ್ಳುವಂತೆ ಪ್ರೋತ್ಸಾಹಿಸುವುದು.

## 3. ಆಷಾಢ ಮಾಸ

ನಮ್ಮ ಬದುಕಿನಲ್ಲಿ ಕಲೆ, ಸಂಸ್ಕೃತಿ, ಹಾಸು ಹೊಕ್ಕಾಗಿದೆ. ಜನ ಜೀವನದ ನೋವು ನಲಿವಿನಲ್ಲಿ, ಕೆಲಸ ಕಾರ್ಯಗಳ ಸಂದರ್ಭದಲ್ಲಿ ಮೌಖಿಕವಾಗಿ ಮೂಡಿಬಂದ ಹಾಡುಗಳು, ಜನಪದ ಹಾಡು ಎಂದು ಗುರುತಿಸಲ್ಪಡುತ್ತವೆ. ಜನಪದ ಹಾಡು ಜನಜೀವನದ ಸಂಸ್ಕೃತಿಯನ್ನು ಬಿಂಬಿಸುತ್ತದೆ. ಪ್ರಕೃತ ಹೆಣ್ಣು ಮಗಳ ತವರಿನ ಹಸಿರಾದ ನೆನಪು ಹಾಡಾಗಿದೆ. ಜನಪದ ಗೀತೆಗಳಿಗೆ ತಮ್ಮದೇ ಆದ ರಾಗ, ತಾಳ, ಲಯಗಳು ಇವೆ. ಇವುಗಳ ಬಗ್ಗೆ ಮಕ್ಕಳಿಗೆ ಅರಿವು ಮೂಡಬೇಕು. ಹಾಡು ಮತ್ತು ಹಾಡಿನ ಆಶಯದ ಆಸ್ವಾದನೆಯಾಗಬೇಕು.

### ಚಟುವಟಿಕೆಗಳು

### ರಾಗವಾಗಿ ಹಾಡುವ

ಮಕ್ಕಳು ತಮ್ಮದೇ ಆದ ರಾಗವನ್ನು ಹಾಕಿ ಪದ್ಯವನ್ನು ಗುಂಪಿನಲ್ಲಿ ಹಾಡಲಿ. ಒಂದು ಗುಂಪಿನವರು ಹಾಡುವಾಗ ಇನ್ನೊಂದು ಗುಂಪಿನವರು ಮೌಲ್ಯನಿರ್ಣಯ ಮಾಡಲಿ. ಮೌಲ್ಯ ನಿರ್ಣಯ ಸೂಚಕಗಳನ್ನು ಮಕ್ಕಳೇ ಕಂಡುಕೊಳ್ಳಲಿ.

ಬಳಿಕ ಅಧ್ಯಾಪಕರೊಂದಿಗೆ ಹಾಡುವುದು.

### ಉತ್ತರ ಬರೆಯುವ

ಪಾಠಭಾಗದಲ್ಲಿ ನೀಡಲಾದ ಪ್ರಶ್ನೆಗಳಿಗೆ ಮಕ್ಕಳು ವೈಯುಕ್ತಿಕವಾಗಿ ಉತ್ತರವನ್ನು ಬರೆದು ಮಂಡಿಸಲಿ. ಸರಿಯಾದ ಉತ್ತರವನ್ನು ತಿಳಿದು ಬರೆಯಲಿ. ಅಧ್ಯಾಪಕರು ಅಗತ್ಯ ಸಹಾಯ ಮಾಡುವುದು.

### ಆಸ್ವಾದನ ಟಿಪ್ಪಣಿ ಬರೆಯುವ

ಮಕ್ಕಳು ಗುಂಪುಗಳಾಗಲಿ. ಪದ್ಯವನ್ನು ಓದಿ, ಚರ್ಚಿಸಿ, ಬರೆದು ಮಂಡಿಸಲಿ. ಬಳಿಕ ಅಧ್ಯಾಪಕ ಆವೃತ್ತಿಯ ಸಹಾಯದಿಂದ ಉತ್ತಮಪಡಿಸಿ ಬರೆಯಲಿ.

'ಬರ್ತಾಳೆ ರತುನ' ಎಂಬುದು ಒಂದು ಜನಪದ ಗೀತೆಯಾಗಿದೆ. ಈ ಪದ್ಯದಲ್ಲಿ 12 ಸಾಲುಗಳಿವೆ. ಈ ಹಾಡಿನಲ್ಲಿ ರತುನ ಎಂಬ ಪದವು ಮತ್ತೆ ಮತ್ತೆ ಬರುತ್ತದೆ. ಈ ಹಾಡಿನಲ್ಲಿ ಪ್ರಾಸ ಪದಗಳಿವೆ.

ಇದನ್ನು ಅಭಿನಯಿಸಿಕೊಂಡು ರಾಗವಾಗಿ ಹಾಡಬಹುದು. ಇದರಲ್ಲಿ ಹೆಣ್ಣು ಮಕ್ಕಳು ಧರಿಸುವ ವಿವಿಧ ರೀತಿಯ ಆಭರಣಗಳ ಕುರಿತು ಹೇಳಲಾಗಿದೆ. ಆಭರಣಗಳನ್ನು ಧರಿಸಿ ಬಿಂಕ ಬಿನ್ನಾಣಗಳನ್ನು ತೋರುವ ಬಾಲೆಯ ಕುರಿತು ಈ ಹಾಡಿನಲ್ಲಿ ಕವಿ ಹೇಳಿದ್ದಾನೆ.

### ಚರ್ಚಿಸುವ

ಹಿಂದಿನ ಕಾಲದಲ್ಲಿ ಹತ್ತಿರ ಹತ್ತಿರ ಮನೆಗಳಿರಲಿಲ್ಲ. ರಸ್ತೆ ಸೌಕರ್ಯಗಳಿರಲಿಲ್ಲ. ವಾಹನ ಸೌಕರ್ಯಗಳಿರಲಿಲ್ಲ. ವಿದ್ಯುತ್ ಸೌಲಭ್ಯಗಳಿರಲಿಲ್ಲ. ಕಾಡುಗಳು ಹೆಚ್ಚಾಗಿದ್ದರಿಂದ ಕಾಡು ಪ್ರಾಣಿಗಳ ಹಾವಳಿ ಅತಿಯಾಗಿತ್ತು. ಮೂಢನಂಬಿಕೆಗಳು ಹೆಚ್ಚಾಗಿದ್ದವು. ಇತ್ಯಾದಿ ವಿಚಾರಗಳು ಚರ್ಚೆಯಲ್ಲಿ ಬರುವಂತೆ ಅಧ್ಯಾಪಕರು ಗಮನ ಹರಿಸುವುದು.

### ಸಂಗ್ರಹಿಸುವ

ಮಕ್ಕಳು ಗ್ರಂಥಾಲಯದಲ್ಲಿರುವ ಪುಸ್ತಕಗಳನ್ನು ಓದಿ, ಹಿರಿಯರಿಂದ ಕೇಳಿ ತಿಳಿದು ಅಣ್ಣ ತಂಗಿಯರ ಪ್ರೀತಿ, ವಾತ್ಸಲ್ಯಗಳನ್ನು ಸಾರುವ ಜನಪದ ಗೀತೆಗಳನ್ನು ಸಂಗ್ರಹಿಸಿ ತರಲಿ. ಬಳಿಕ ಇವುಗಳನ್ನು ತರಗತಿಯಲ್ಲಿ ಹಾಡಲು ಅವಕಾಶ ಮಾಡುವುದು. ಅವುಗಳನ್ನೆಲ್ಲಾ ಒಟ್ಟು ಮಾಡಿ ಸಂಚಿಕೆ ತಯಾರಿಸುವುದು.

ಉದಾಹರಣೆಗೆ :

## ಹೆಣ್ಣಿನ ಜನುಮಕೆ

ಹೆಣ್ಣಿನ ಜನುಮಾಕೆ ಅಣ್ಣ ತಮ್ಮರು ಬೇಕು
ಬೆನ್ನು ತಟ್ಟುವರು ಸಭೆಯೊಳಗೆ
ಬೆನ್ನು ತಟ್ಟುವರು ಸಭೆಯೊಳಗೆ, ಸಾವಿರ
ಹೊನ್ನು ಕಟ್ಟುವರು ಉಡಿಯೊಳಗೆ ॥

ಎನಗೆ ಯಾರಿಲ್ಲಂತ ಮನದಾಗ ಮಗುಗಿದರು
ಪರನಾಡಲೊಬ್ಬ ಪ್ರತಿಸೋರ್ಯ
ಪರನಾಡಲೊಬ್ಬ ಪ್ರತಿಸೂರ್ಯ ನನ್ನಣ್ಣ
ಬಿದಿಗೆ ಚಂದ್ರಾಮ ಉದಿಯಾದ ॥

ಮನೆಯ ಹಿಂದಲ ಮಾವು ನೆನೆದಾರೆ ಘಮ್ಮೆಂದು
ನೆನೆದಂಗೆ ಬಂದ ನನ ಅಣ್ಣ
ನೆನೆದಂಗೆ ಬಂದ ನನ ಅಣ್ಣ ಬಾಳೆಯ
ಗೊನೆಹಾಂಗ ತೋಳ ತಿರವೂತ ॥

ಸರದಾರ ಬರುವಾಗ ಸುರಿದಾವು ಮಲ್ಲಿಗೆ
ದೊರೆ ನನ್ನ ತಮ್ಮ ಬರುವಾಗ
ದೊರೆ ನನ್ನ ತಮ್ಮ ಬರುವಾಗ ಯಾಲಕ್ಕಿ
ಗೊನೆ ಬಾಗಿ ಬಾಲ ಸುರಿದಾವೊ ॥

ಅಣ್ಣ ಬರುತಾನಂದ ಅಂಗಳಕೆ ಕೈಕೊಟ್ಟು
ರನ್ನ ಬಚ್ಚಲಿಗೆ ಮಣೆ ಹಾಕಿ
ರನ್ನ ಬಚ್ಚಲಿಗೆ ಮಣೆ ಹಾಕಿ ಕೇಳೇನು
ತಣ್ಣಗಿರಲಣ್ಣ ತವರವರು ॥

## ಕುದುರೇನ ತಂದೀವ್ನಿ

ಕುದುರೇನ ತಂದೀವ್ನಿ ಜೀನಾವ ಬಿಗಿದಿವ್ನಿ
ಬರಬೇಕು ತಂಗಿ ಮದುವೇಗೆ

ಅಂಗ್ಯ ಗುಡಿಸೋರಿಲ್ಲ ಗಂಗ್ಯ ತೊಳೆಯೋರಿಲ್ಲ
ಹೆಂಗೆ ಬರಲಣ್ಣ ಮದುವೇಗೆ
ಅಂಗ್ಯಾಕೆ ಆಳಿಡುವೆ ಗಂಗ್ಯಾಕೆ ತೊತ್ತಿಡುವೆ
ಬರಬೇಕು ತಂಗಿ ಮದುವೇಗೆ ॥

ಮಳೆಯಾರ ಬಂದೀತು ಹೊಳೆಯಾರ ತುಂಬೀತು
ಹೆಂಗೆ ಬರಲಣ್ಣ ಮದುವೇಗೆ
ಚಿನ್ನಾದ ಹರಿಗೋಲ್ಗೆ ರನ್ನಾದ ಹುಟ್ಹಾಕಿ
ಜೋಕೇಲಿ ನಿನ್ನ ಕರೆದೊಯ್ವೆ
ಜೋಕೇಲಿ ನಿನ್ನ ಕರೆದೊಯ್ವೆ ॥

ಅಪ್ಪ ಇದ್ದರೆ ಎನ್ನ ಸುಮ್ಮಾನೆ ಕಳುಹೋರೆ
ಅಮ್ಮ ಇಲ್ಲಾದ ಮನೆಯಲ್ಲಿ
ಬಂದಾರೆ ಬಂದೇನು ಬಾಗ್ಲಾಕೆ ನಿಂದೇನು
ಕಣ್ಣಾಗೆ ಧಾರೆ ಎರೆದೇನು ॥

# ಕೈ ತುತ್ತು ತಿನಿಸಿದ್ದೆ

ಕೈ ತುತ್ತು ತಿನಿಸಿದ್ದೆ ಜೋಗುಳವ ಹಾಡಿದ್ದೆ
ತಂಗೀಯೇ ನಿನ್ನ ಬೆಳೆಸಿದ್ದೆ। ಹೂವಾಗಿ
ಗಂಡನ ಮನೆಗ್ಹೋಗಿ ಮರಿಬ್ಯಾಡ ॥

ಮರೆವುದು ಹೇಗಣ್ಣ ನನ ಕಣ್ಣು ನೀನಣ್ಣ
ಅಚಲವು ಎಂದಿಗು ಬಾನಾ ಬಣ್ಣ । ಅಣ್ಣ
ಮರೆತರೆ ಉಳಿವು ಇರದಣ್ಣ ॥

ಅತ್ತೆ ಮಾವಂದಿರು ತಂದೆ ತಾಯಂತೆ
ಗಂಡಾನೆ ನಿನಗೆ ಸೌಭಾಗ್ಯ । ವನತಂಗಿ
ಭೇದಾವ ಮಾಡದೆ ಬಾಳಮ್ಮ॥

ನಿನಮಾತು ಮೀರಲಾರೆ ಭೇದಾವ ಮಾಡಲಾರೆ
ಅವರ ಎದುರಾಗಿ ನಡೆಯಲಾರೆ। ಅಣ್ಣಯ್ಯ
ಹರಸಿ ಕಳಿಸಣ್ಣ ಆ ಮನೆಗೆ ॥

ಒಡಿಬ್ಯಾಡ ಸಂಸಾರ ನಿನಗಿರಲಿ ಎಚ್ಚರ
ಸಿರಿಬಂದ್ರೆ ಮರಿಬ್ಯಾಡ ತವರೂರ । ನನ ತಂಗಿ
ಸಿರಿಯಲ್ಲಿ ನೀತಿ ಬಿಡಬ್ಯಾಡ ॥

ಬರಿಯ ಎನಗೇಕಣ್ಣ ಗಂಡನೆ ಮಿಗಿಲಣ್ಣ
ನಶ್ವರದ ಆ ಬಾಳು ಇರಲೇಕೆ । ಅಣ್ಣಯ್ಯ
ನಿನ್ನಂತ ಅಣ್ಣನ ಪಡೆದಾಗ ॥

ಸಲಿಗೆಯ ತರವಲ್ಲ ಅತಿ ಮಾತು ಒಳಿತಲ್ಲ
ಸುಳ್ಳು ಎಂದೆಂದಿಗೂ ನಿಜವಲ್ಲ। ನನ ತಂಗಿ
ಸೋಮಾರಿ ಬಾಳು ಬಾಳಲ್ಲ ॥

ನಿನ ಮಾತು ದೀಪವಾಗಿ ನನ ಬಾಳಿಗೆ ಬೆಳಕಾಗಿ
ಇರಲಿ ಎಂದೆಂದು ಸ್ಥಿರವಾಗಿ । ಅಣ್ಣಯ್ಯ
ನಿನ ರಕ್ಷೆ ಕರುಣೆ ನನಗಿರಲಿ॥

## ಮೌಲ್ಯಮಾಪನ ಚಟುವಟಿಕೆಗಳು

### I

1. ದೀಪಾವಳಿಗೆ ಬಹುಮಾನವನ್ನು ಕೊಡುವವರು ಯಾರು?
   (ಮುಖ್ಯೋಪಾಧ್ಯಾಯರು, ಚೆನ್ನಯ್ಯ, ಶಂಕರಯ್ಯ) (1)
2. ಪುಟ್ಟ ಮತ್ತು ಗೆಳೆಯರು ದೀಪಾವಳಿಯನ್ನು ಅರ್ಥಪೂರ್ಣವಾಗಿ ಆಚರಿಸಿದುದು ಹೇಗೆ? (3)
3. ಕೆಳಗೆ ಕೊಟ್ಟಿರುವ ಘೋಷಣಾ ವಾಕ್ಯದ ಮುಂದಿನ ಭಾಗವನ್ನು ಬರೆಯಿರಿ?
   ಹಚ್ಚಿರಿ ಹಣತೆಯ ಮನೆಯಲ್ಲಿ

### II

1. ಕಲ್ಯಾಣಿ ಕುಟ್ಟಿ ಅಮ್ಮ ............ ಇಸವಿಯಲ್ಲಿ ಜನಿಸಿದರು (1937, 1915,1999) (1)
2. 'ಮೋಹಿನಿಯಾಟ'ಕ್ಕೆ ಕಲ್ಯಾಣಿ ಕುಟ್ಟಿಯಮ್ಮನ ಕೊಡುಗೆಗಳೇನು? (2)
3. ನಿಮ್ಮ ಶಾಲೆಯಲ್ಲಿ ನಡೆದ ಸಾಹಿತ್ಯ ಸಭೆಯ ವರದಿಯನ್ನು ಬರೆಯಿರಿ? (2)

### III

1. 'ತಂಗಿ' ಯಾರನ್ನು ಕಾಯುತ್ತಿದ್ದಾಳೆ (ಅಪ್ಪ, ಅಣ್ಣ, ಅಮ್ಮ) (1)
2. ಕೆಳಗೆ ಕೊಟ್ಟಿರುವ ಪದ್ಯವನ್ನು ಓದಿ, ಆಸ್ವಾದನ ಟಿಪ್ಪಣಿಯನ್ನು ಬರೆಯಿರಿ. (4)
   (ಪಂಚಮಿ ಹಬ್ಬ)

# 3. ನಗು ಮಗು

'ಬೆಳೆಯ ಸಿರಿ ಮೊಳಕೆಯಲ್ಲಿ' ಎಂಬಂತೆ ಎಳವೆಯಲ್ಲೇ ಮಕ್ಕಳ ಸರ್ವತೋಮುಖ ಅಭಿವೃದ್ಧಿಯೆಡೆಗೆ ಹೆತ್ತವರು, ಅಧ್ಯಾಪಕರು ಹಾಗೂ ಸಮಾಜ ಗಮನಹರಿಸಿದಲ್ಲಿ ಮುಂದಕ್ಕೆ ಅವರು ಬೆಳೆದು ಸಮಾಜಕ್ಕೆ ನೆರಳು ಕೊಡುವುದರಲ್ಲಿ ಯಾವುದೇ ಸಂಶಯವಿಲ್ಲ. ಉತ್ತಮ ವಾತಾವರಣದಲ್ಲಿ ಪ್ರೀತಿ, ವಾತ್ಸಲ್ಯಗಳಿಂದ ಬೆಳೆದ ಮಗುವು ತಾನು ಬೆಳೆದು ದೊಡ್ಡವನಾದಾಗ ಉತ್ತಮ ವ್ಯಕ್ತಿತ್ವವನ್ನು ರೂಪಿಸಿಕೊಳ್ಳುತ್ತಾನೆ. ಆದುದರಿಂದ ಮಕ್ಕಳಿಗೆ ಬಾಲ್ಯದಿಂಲೇ ಯೋಗ್ಯ ಶಿಕ್ಷಣಗಳನ್ನು ನೀಡಿ ಉತ್ತಮ ವ್ಯಕ್ತಿತ್ವವನ್ನು ರೂಪಿಸುವಲ್ಲಿ ಗಮನ ಹರಿಸಬೇಕು ಎಂಬುದನ್ನು ಈ ಘಟಕದಲ್ಲಿ ಹೇಳಲಾಗಿದೆ.

'ಮುದ್ದುಕಂದ' ಎನ್ನುವ ಕವಿತೆಯಲ್ಲಿ ಮಕ್ಕಳ ಬಾಲ್ಯ ಕಾಲದ ತುಂಟಾಟಗಳ ಕುರಿತು ಹೇಳಿದರೆ 'ಬಾಲ ಕಾರ್ಮಿಕರು' ಎಂಬ ಗದ್ಯದಲ್ಲಿ ಹಲವಾರು ಕಾರಣಗಳಿಂದ ಶಿಕ್ಷಣ ವಂಚಿತರಾದ ಮಕ್ಕಳ ಕುರಿತು ಹೇಳಲಾಗಿದೆ. 'ಗಿಡವಾಗಿ ಬಗ್ಗದ್ದು' ಎಂಬ ಕಥೆ ಹಾಗೂ 'ಕ್ಷಮಾಪಣೆ' ಎಂಬ ನಾಟಕದಲ್ಲಿ ತನ್ನ ಮಕ್ಕಳು ತಪ್ಪಿ ನಡೆದಾಗ ತಾಯಿಯಾದವಳು ಯಾವ ರೀತಿ ಸರಿಪಡಿಸುತ್ತಿದ್ದಾಳೆ ಎಂಬುದರ ಕುರಿತು ಹೇಳಲಾಗಿದೆ.

## ಕಲಿಕಾ ಸಾಧನೆಗಳು

- ಹೊಸ ಪ್ರಯೋಗಗಳು, ಪದಗಳು, ಗಾದೆಗಳು, ನುಡಿಗಟ್ಟುಗಳು ಮೊದಲಾದುವುಗಳನ್ನು ಉಪಯೋಗಿಸಿಕೊಂಡು ಸಂದರ್ಭಾನುಸಾರ ಮಾತನಾಡುವುದು.
- ಘಟನೆಗಳು, ದೃಶ್ಯಗಳು ಮೊದಲಾದುವುಗಳನ್ನು ವಿಶ್ಲೇಷಿಸಿ ಸೂಕ್ತವಾದ ಭಾಷೆಯಲ್ಲಿ ವಿವರಿಸುವುದು ಮತ್ತು ಬರೆಯುವುದು.
- ಕಥೆ, ಕವಿತೆ, ವಿವರಣೆ, ವರ್ಣನೆ ಮೊದಲಾದುವುಗಳನ್ನು ಆಲಿಸಿ ಮತ್ತು ಓದಿ ತನ್ನದೇ ಆದ ರೀತಿಯಲ್ಲಿ ಹೇಳುವುದು ಮತ್ತು ಬರೆಯುವುದು.
- ಕವಿತೆಯನ್ನು ಅರ್ಥೈಸಿಕೊಂಡು ರಾಗ, ತಾಳ, ಭಾವಗಳನ್ನು ಪರಿಗಣಿಸಿ ಹಾಡುವುದು.
- ವಿಶೇಷಣಗಳು, ವಿಶೇಷ ಪ್ರಯೋಗಗಳು ಮೊದಲಾದುವುಗಳನ್ನು ಸೂಕ್ತವಾಗಿ ಸೇರಿಸಿ ವಾಕ್ಯಗಳನ್ನು ಬರೆಯುವುದು.
- ಪಾಠಭಾಗವನ್ನು ವ್ಯವಹಾರ ರೂಪಕ್ಕೆ ತಕ್ಕಂತೆ ನಿರರ್ಗಳವಾಗಿ, ಸ್ವರಭಾರ ಮತ್ತು ಉಚ್ಚಾರ ಸ್ಪಷ್ಟತೆಯೊಂದಿಗೆ ಓದುವುದು.
- ಕಥೆ ಮತ್ತು ಕವಿತೆಗಳ ಸಾಲುಗಳ ಅರ್ಥವನ್ನು ತಿಳಿದುಕೊಂಡು ಪದಸೌಂದರ್ಯವನ್ನು ಆಸ್ವಾದಿಸಿ ಆಶಯವನ್ನು ಹೇಳುವುದು ಮತ್ತು ಬರೆಯುವುದು.
- ಓದಿ ಆಸ್ವಾದಿಸಿದ ಕಥೆ, ಕವಿತೆ ಮೊದಲಾದುವುಗಳನ್ನು ಪಾತ್ರಾಭಿನಯ, ಮೂಕಾಭಿನಯ, ಸಂಭಾಷಣೆಗಳ ಮೂಲಕ ಮಂಡಿಸುವುದು.
- ಪದಪ್ರಯೋಗ, ಭಾಷಾ ಪ್ರಯೋಗ, ಆಶಯ ಮೊದಲಾದವುಗಳನ್ನು ತನ್ನ ರಚನೆಯಲ್ಲಿ ಬಳಸಿಕೊಳ್ಳುವುದು.
- ತನ್ನ ಮತ್ತು ಇತರರ ರಚನೆಗಳ ಮೌಲ್ಯನಿರ್ಣಯ ಮಾಡುವ ಮಾನದಂಡಗಳನ್ನು ರೂಪಿಸುವುದು ಮತ್ತು ಅವುಗಳ ಸಹಾಯದಿಂದ ಮೌಲ್ಯನಿರ್ಣಯ ಮಾಡುವುದು.
- ಪಾಠಭಾಗದಲ್ಲಿ ಬಳಕೆಯಾದ ಪದಗಳನ್ನು ವಿಂಗಡಿಸಿ ಬರೆಯುವುದು ಮತ್ತು ಸೇರಿಸಿ ಬರೆಯುವುದು.
- ಸರ್ವನಾಮ ಹಾಗೂ ಉಪಸರ್ಗಗಳನ್ನು ಉಪಯೋಗಿಸಿ ವಾಕ್ಯಗಳನ್ನು ರಚಿಸುವುದು.
- ಓದುವ ಮೂಲೆ, ವಾಚನಾಲಯ ಮತ್ತು ಇತರೆಡೆಗಳಿಂದ ಲಭಿಸುವ ಓದುವ ಸಾಮಾಗ್ರಿಗಳನ್ನು ಓದಿ ದೊರೆತ ಅನುಭವಗಳನ್ನು ವಿಭಿನ್ನ ರೀತಿಯಲ್ಲಿ ಹಂಚಿಕೊಳ್ಳುವುದು.
- ಓದಿದ, ಆಲಿಸಿದ ವ್ಯವಹಾರ ರೂಪದ ಆಶಯವನ್ನು ತಿಳಿದುಕೊಂಡು ಇನ್ನೊಂದು ವ್ಯವಹಾರ ರೂಪವಾಗಿ ಬದಲಾಯಿಸುವುದು.
- ಮಾಹಿತಿ ತಂತ್ರಜ್ಞಾನವನ್ನು (ICT) ಉಪಯೋಗಿಸಿ, ಕೇಳಿಯೂ ನೋಡಿಯೂ ಆಶಯವನ್ನು ತಿಳಿದುಕೊಂಡು ಸ್ವಂತ ರಚನೆ ಮಾಡುವುದು ಮತ್ತು ಮಂಡಿಸುವುದು.
- ಉತ್ತಮ ದಿನಚರಿಗಳನ್ನು ಓದುವುದು ಮತ್ತು ಸ್ವ–ಅನುಭವಗಳನ್ನು ಅಳವಡಿಸಿ ದಿನಚರಿ ಬರೆಯುವುದು.

# ಯೂನಿಟ್ ಗ್ರಿಡ್

**ಯೂನಿಟ್ 3 : ನಗುಮಗು** ಸಮಯ : 6+6 ಪೀರಿಯಡ್‌ಗಳು

| ಪಾಠದ ಹೆಸರು | ಆಶಯ/ ಉದ್ದೇಶಗಳು | ಪ್ರಕ್ರಿಯೆ | ಪೂರಕ ಸಾಮಗ್ರಿಗಳು | ಮೌಲ್ಯನಿರ್ಣಯ |
|---|---|---|---|---|
| 1. ಮುದ್ದು ಕಂದ (ಜನಪದ ಗೀತೆ) | • ಬಾಲ್ಯವು ಮಧುರವಾಗಿದೆ.<br>• ಬಾಲ್ಯದಲ್ಲಿ ಮಕ್ಕಳ ಆಟ, ನೋಟ, ತೊದಲು ನುಡಿಗಳು ಒಂದು ಮನೋಹರ ಅನುಭವ<br>• ಕವಿತೆಯನ್ನು ರಾಗ, ತಾಳದೊಂದಿಗೆ ಹಾಡುವುದು. | • ಕವಿತೆಯನ್ನು ರಾಗವಾಗಿ ಹಾಡುವುದು.<br>• ಅಮ್ಮನಿಗೆ ಸಹಾಯ ಮಾಡುವುದರ ಕುರಿತು ಟಿಪ್ಪಣಿ ಬರೆಯುವುದು.<br>• ಪದ್ಯವನ್ನು ಮುಂದುವರಿಸಿ ಬರೆಯುವುದು. | • ದಾರಿದೀಪ ಸಿ.ಡಿ.<br>• ಪದ್ಯ ಪುಸ್ತಕ, ಓದುವ ಮೂಲೆ | • ಟಿಪ್ಪಣಿ<br>• ಮುಂದುವರಿದ ಪದ್ಯ |
| 2. ಬಾಲ ಕಾರ್ಮಿಕರು (ಪ್ರಬಂಧ) | • ಹಲವು ಕಾರಣಗಳಿಂದಾಗಿ ಮಕ್ಕಳು ವಿದ್ಯಾಭ್ಯಾಸವನ್ನು ಮೊಟಕುಗೊಳಿಸಿ ಕೆಲಸಕ್ಕೆ ತೊಡಗುತ್ತಾರೆ.<br>• ತಮ್ಮ ಹಕ್ಕುಗಳಿಂದ ವಂಚಿತರಾಗುವ ಅದೆಷ್ಟೋ ಮಕ್ಕಳು ನಮ್ಮ ಸಮಾಜದಲ್ಲಿದ್ದಾರೆ.<br>• ಅಡಿ ಟಿಪ್ಪಣಿಯು ಒಂದೇ ವಾಕ್ಯದಲ್ಲಿ ವಿಶಾಲ ಅರ್ಥವನ್ನು ಕೊಡುವ ಸೃಜನಾತ್ಮಕ ರಚನೆಯಾಗಿದೆ. | • ಅನುಭವ ಹೇಳುವುದು<br>• ಟಿಪ್ಪಣಿ ಬರೆಯುವುದು<br>• ಘೋಷಣ ವಾಕ್ಯ ಬರೆಯುವುದು.<br>• ಅಡಿಟಿಪ್ಪಣಿ ಬರೆಯುವುದು. | • ದಾರಿದೀಪ ಸಿಡಿ.<br>• ಪತ್ರಿಕಾ ವರದಿ/ಚಿತ್ರಗಳು | • ಟಿಪ್ಪಣಿ<br>• ಘೋಷಣ ವಾಕ್ಯ<br>• ಅಡಿಟಿಪ್ಪಣಿ |

# ಯೂನಿಟ್ ಗ್ರಿಡ್

**ಯೂನಿಟ್ 3 : ನಗುಮಗು** ಸಮಯ : 6+6 ಪೀರಿಯಡ್‌ಗಳು

| ಪಾಠದ ಹೆಸರು | ಆಶಯ/ ಉದ್ದೇಶಗಳು | ಪ್ರಕ್ರಿಯೆ | ಪೂರಕ ಸಾಮಗ್ರಿಗಳು | ಮೌಲ್ಯನಿರ್ಣಯ |
|---|---|---|---|---|
| 3.ಗಿಡವಾಗಿ ಬಗ್ಗದ್ದು... (ಕಥೆ) | • ಬಾಲ್ಯದಲ್ಲಿ ರೂಢಿಸಿಕೊಂಡ ಗುಣಗಳು ಬಾಳಿನುದ್ದಕ್ಕೂ ಫಲ ನೀಡುತ್ತವೆ.<br>• ಬಾಲ್ಯದಿಂದಲೇ ಸದ್ಗುಣಗಳನ್ನು ರೂಢಿಕೊಳ್ಳಬೇಕು.<br>• ಕವಿತೆಯನ್ನು ರಾಗ, ತಾಳದೊಂದಿಗೆ ಹಾಡುವುದು. | • ದಿನಚರಿ ಬರೆಯುವುದು<br>• ವ್ಯಕ್ತಿ ಚಿತ್ರಣ ಬರೆಯುವುದು.<br>• ವಿವರಣೆ ಬರೆಯುವುದು.<br>• ಗಾದೆ ವಿಸ್ತರಿಸಿ ಬರೆಯುವುದು<br>• ಚಿತ್ರ ಕಥೆ | • ದಾರಿದೀಪ ಸಿ.ಡಿ.<br>• ಗಾದೆ ಪುಸ್ತಕ<br>• ಚಿತ್ರಕಥೆ ಪುಸ್ತಕಗಳು | • ದಿನಚರಿ<br>• ವ್ಯಕ್ತಿ ಚಿತ್ರಣ<br>• ವಿವರಣೆ<br>• ಗಾದೆ ವಿಸ್ತರಣೆ<br>• ಚಿತ್ರ ಕಥೆ |
| 4. ಕ್ಷಮಾಪಣೆ (ನಾಟಕ) | • ಪರರ ವಸ್ತುಗಳನ್ನು ಅನುಮತಿ ಇಲ್ಲದೇ ತೆಗೆಯುವುದು ಸರಿಯಲ್ಲ.<br>• ಸನ್ನಿವೇಶಗಳನ್ನು ರಸವತ್ತಾಗಿ ನಾಟಕದ ಮೂಲಕ ಅಭಿನಯಿಸುವುದು.<br>• ನಾಟಕದ ಆಶಯಗಳನ್ನು ತಿಳಿದುಕೊಳ್ಳುವುದು. | • ಪಾತ್ರಗಳನ್ನು ಹಂಚಿಕೊಂಡು ನಾಟಕವನ್ನು ಅಭಿನಯಿಸುವುದು.<br>• ನಾಟಕವನ್ನು ಕಥೆಯಾಗಿ ಬರೆಯುವುದು.<br>• ಮೆಚ್ಚುಗೆಯಾದ ಕಥಾ ಪಾತ್ರವನ್ನು ಬರೆದು ಸಮರ್ಥಿಸುವುದು. | • ದಾರಿದೀಪ ಸಿ.ಡಿ.<br>• ನಾಟಕಕ್ಕೆ ಅಗತ್ಯವಿರುವ ಸಾಮಗ್ರಿಗಳು<br>• ಇತರ ನಾಟಕ ಪುಸ್ತಕಗಳು | • ಅಭಿನಯ<br>• ಕಥೆ<br>• ಮೆಚ್ಚುಗೆಯಾದ ಕಥಾಪಾತ್ರ |

# 1. ಮುದ್ದು ಕಂದ

## ಪಾಠಭಾಗದೆಡೆಗೆ

ಮಕ್ಕಳ ತುಂಟಾಟ, ಕೇಕೆ, ತೊದಲು ನುಡಿ, ಮುಗ್ಧತೆ ಮೊದಲಾದವುಗಳಿಗೆ ಮನಸೋಲದವರಾರು? ಅವರು ನಕ್ಕರೂ ಚಂದ, ಅತ್ತರೂ ಚಂದ. ಆಡುವ ತೊದಲು ನುಡಿಗಳು ಇನ್ನೂ ಚೆಂದ. ಆದುದರಿಂದಲೇ ಹಿರಿಯರು 'ಮಕ್ಕಳಿರಲವ್ವ ಮನೆ ತುಂಬ' ಎಂದು ಹಾರೈಸುತ್ತಿದ್ದರು. ಮಗುವಿನ ಮುಗ್ಧ ಸೌಂದರ್ಯ, ಎಂಥವರನ್ನೂ ಮೋಡಿ ಮಾಡುವ ರೀತಿ ಮೊದಲಾದವುಗಳ ಕುರಿತು 'ಮುದ್ದು ಕಂದ' ಕವನದಲ್ಲಿ ಹೇಳಲಾಗಿದೆ. ಈ ಕವಿತೆಯ ಮೂಲಕ ಜನಪದದಲ್ಲಿ ಮಕ್ಕಳ ಬಗೆಗಿನ ಮೃದು ಮಧುರ ಭಾವನೆಗಳ ಬಗ್ಗೆ ತಿಳಿಯಬಹುದಾಗಿದೆ.

## ಚಟುವಟಿಕೆಗಳು

### ಹಾಡುವ

'ಮುದ್ದುಕಂದ' ಪದ್ಯವನ್ನು ವೈಯುಕ್ತಿಕವಾಗಿ ಹಾಡಲು ತಿಳಿಸುವುದು. ಉಳಿದ ಮಕ್ಕಳನ್ನು ಗುಂಪುಗಳನ್ನಾಗಿ ಮಾಡಿ, ರಾಗ ಹಾಕಿ, ಗುಂಪಿನಲ್ಲಿ ಹಾಡಲು ಹೇಳುವುದು. ಉಳಿದ ಗುಂಪಿನವರು ಕೇಳಲಿ. ಉತ್ತಮವಾಗಿ ಹಾಡಿದ ಗುಂಪಿನವರನ್ನು ಅಭಿನಂದಿಸಬೇಕು. ಬಳಿಕ ಅಧ್ಯಾಪಕರು ಮಾದರಿಯಾಗಿ ಹಾಡುವುದು. ಐ.ಸಿ.ಟಿ. ಸಾಧ್ಯತೆಯನ್ನು ಉಪಯೋಗಿಸಬೇಕು.

### ಇಷ್ಟವಾದ ಸಾಲು ಬರೆಯುವ

ವಿದ್ಯಾರ್ಥಿಗಳು ಮತ್ತೊಮ್ಮೆ ಪದ್ಯವನ್ನು ಮೌನವಾಗಿ ಓದಲಿ. ತಮಗೆ ಇಷ್ಟವಾದ ಸಾಲುಗಳನ್ನು ನೋಟು ಪುಸ್ತಕದಲ್ಲಿ ಬರೆಯಲಿ. ಆ ಸಾಲುಗಳನ್ನು ಇಷ್ಟಪಡಲಿರುವ ಕಾರಣಗಳನ್ನು ಬರೆಯಲಿ. ಕೆಲವು ವಿದ್ಯಾರ್ಥಿಗಳಿಂದ ಮಂಡಿಸಲು ಹೇಳುವುದು. ಅಗತ್ಯವಿದ್ದರೆ ಸಹಾಯ ಮಾಡುವುದು.

ಬರೆಯಲು ಕಷ್ಟವಾಗುವ ವಿದ್ಯಾರ್ಥಿಗಳಿಗೆ ಅಗತ್ಯ ಸಹಾಯವನ್ನು ಮಾಡಬೇಕು.

### ಮಾದರಿಯಂತೆ ಬರೆಯುವ

ಗ್ರಾಮ್ಯ ಪದಗಳ ಅರ್ಥವನ್ನು ತಿಳಿಯುವುದು. ಈ ಚಟುವಟಿಕೆಯ ಉದ್ದೇಶವಾಗಿದೆ. ತ್ರಿಪದಿಗಳಿಂದ ಆಯ್ದ ಕೆಲವು ಪದಗಳನ್ನು ಮಾದರಿಯಂತೆ ಶಿಷ್ಟ ಕನ್ನಡದಲ್ಲಿ ಬರೆಯುವುದು.

| | |
|---|---|
| ಹೊಳೆದಂಗ | ಹೊಳೆದ ಹಾಗೆ |
| ಕುಡಿಯಂಗ | ಕುಡಿಯ ಹಾಗೆ |
| ಎಸಳಂಗ | ಎಸಳಿನ ಹಾಗೆ |

### ಉತ್ತರ ಬರೆಯಿರಿ

ಪದ್ಯದ ಆಶಯವು ಎಷ್ಟರ ಮಟ್ಟಿಗೆ ಮಗುವಿಗೆ ಅರ್ಥವಾಗಿದೆ ಎಂದು ತಿಳಿಯಲು ಪ್ರಶ್ನೆಗಳಿಗೆ ಉತ್ತರ ಬರೆಯುವ ಚಟುವಟಿಕೆಯನ್ನು ನಡೆಸಬೇಕು.

ವಿದ್ಯಾರ್ಥಿಗಳು ವೈಯಕ್ತಿಕವಾಗಿ ಬರೆಯಲಿ. ಬಳಿಕ ಮಕ್ಕಳನ್ನು ಗುಂಪುಗಳಾಗಿ ಮಾಡಿ ತಾವು ಬರೆದ ಉತ್ತರಗಳನ್ನು ಪರಸ್ಪರ ಹಂಚಿಕೊಳ್ಳಲಿ. ಬಳಿಕ ಗುಂಪಿನಲ್ಲಿ ಉತ್ತಮಪಡಿಸಲಿ. ಗುಂಪಿನ ಮಂಡನೆ ನಡೆಸಬೇಕು. ಅಧ್ಯಾಪಕರ ಸಹಾಯದೊಂದಿಗೆ ಉತ್ತಮ ಪಡಿಸುವುದು.

## ಟಿಪ್ಪಣಿ ಬರೆಯುವ

ಟಿಪ್ಪಣಿಯು, ಭಾಷಾ ವ್ಯವಹಾರ ರೂಪಗಳಲ್ಲಿ ಒಂದಾಗಿದೆ. ಉದ್ದೇಶಿತ ವಿಷಯಗಳನ್ನು ವಿವರಣಾತ್ಮಕವಾಗಿ ಬರೆಯುವ ಬದಲು ಚಿಕ್ಕದಾಗಿಯೂ, ಆಶಯಪೂರ್ಣ ವಾಗಿಯೂ ಬರೆಯಲು ವಿದ್ಯಾರ್ಥಿಗಳಿಗೆ ಸಾಧ್ಯವಾಗಬೇಕು.

ಈ ಚಟುವಟಿಕೆಯ ಆರಂಭದಲ್ಲಿ ತಾಯಿಯ ಕೆಲಸ – ಕಾರ್ಯಗಳ ಬಗ್ಗೆ ವಿದ್ಯಾರ್ಥಿಗಳಲ್ಲಿ ಚರ್ಚಿಸುವುದು.

- ಮನೆಯಲ್ಲಿ ಅಮ್ಮ ಯಾವ ಯಾವ ಕೆಲಸಗಳನ್ನು ಮಾಡುತ್ತಾರೆ?
- ನಿಮಗೆ ಯಾವ ರೀತಿಯಲ್ಲಿ ಸಹಾಯ ಮಾಡುತ್ತಾರೆ?

ಇತ್ಯಾದಿ ಪ್ರಶ್ನೆಗಳನ್ನು ಕೇಳಿದ ಬಳಿಕ, ವೈಯಕ್ತಿಕವಾಗಿ ಟಿಪ್ಪಣಿ ಬರೆಯಲು ತಿಳಿಸುವುದು. ಬಳಿಕ ಗುಂಪುಗಳಲ್ಲಿ ಮಂಡಿಸುವುದು. ಉತ್ತಮ ಪಡಿಸಿದ ಟಿಪ್ಪಣಿಯನ್ನು ಮಂಡಿಸುವುದು. ಅಧ್ಯಾಪಕರ ಆವೃತ್ತಿಯನ್ನು ಪ್ರದರ್ಶಿಸುವುದು. ಅದರ ಆಧಾರದಲ್ಲಿ ಗುಂಪಿನಲ್ಲಿ ಉತ್ತಮ ಪಡಿಸಿ ಬರೆಯಲಿ.

## ಜೊತೆಗೊಳಿಸುವ

ಇದೊಂದು ವೈಯಕ್ತಿಕವಾಗಿ ಮಾಡಬಹುದಾದ ಚಟುವಟಿಕೆಯಾಗಿದೆ. ವಿವಿಧ ಪ್ರಾಣಿಗಳು ಹೊರಡಿಸುವ ಧ್ವನಿಗಳನ್ನು ವಿವಿಧ ರೀತಿಯ ಪದಗಳಿಂದ ಗುರುತಿಸುತ್ತೇವೆ ಎಂಬುದನ್ನು ತಿಳಿಯುವುದು ಈ ಚಟುವಟಿಕೆಯ ಉದ್ದೇಶವಾಗಿದೆ.

| | | |
|---|---|---|
| ಕುದುರೆ | : | ಕೆನೆಯುತ್ತದೆ |
| ನಾಯಿ | : | ಬೊಗಳುತ್ತದೆ |
| ಕತ್ತೆ | : | ಅರಚುತ್ತದೆ |
| ಆನೆ | : | ಘೀಳಿಡುತ್ತದೆ |
| ಸಿಂಹ | : | ಗರ್ಜಿಸುತ್ತದೆ |
| ಕಪ್ಪೆ | : | ವಟಗುಟ್ಟುತ್ತದೆ |
| ದುಂಬಿ | : | ಝೇಂಕರಿಸುತ್ತದೆ |
| ನೊಣ | : | ಗುಯಿಂಗುಟ್ಟುತ್ತದೆ |

## ಪದ್ಯವನ್ನು ಮುಂದುವರಿಸುವ

ಕೊಟ್ಟಿರುವ ಪದ್ಯದ ಸಾಲಿನಲ್ಲಿ ಆಶಯವನ್ನು ತಿಳಿದುಕೊಂಡು, ಅದೇ ಆಶಯವು ಮುಂದುವರಿಯುವಂತೆ ಸಾಲುಗಳನ್ನು ಸೇರಿಸಬೇಕಾಗಿದೆ. ಇದು ವಿದ್ಯಾರ್ಥಿಯ ಸೃಜನಶೀಲತೆಯನ್ನು ಬೆಳೆಸಲು ಯೋಗ್ಯವಾದ ಚಟುವಟಿಕೆಯಾಗಿದೆ.

ಚಟುವಟಿಕೆಯನ್ನು ನಡೆಸುವ ಮೊದಲು ವಿದ್ಯಾರ್ಥಿಗಳಲ್ಲಿ ಈ ಕೆಳಗಿನ ಪ್ರಶ್ನೆಗಳನ್ನು ಕೇಳಿ ಚರ್ಚಿಸಬಹುದು.

- ಗುಬ್ಬಿ ಹಕ್ಕಿಯನ್ನು ನೋಡಿದ್ದೀರಾ?
- ಅದು ಯಾವ ಯಾವ ಕೆಲಸಗಳನ್ನು ಮಾಡುತ್ತದೆ?

  (ಮರದಿಂದ ಮರಕ್ಕೆ ಹಾರುತ್ತದೆ, ಗೂಡು ಕಟ್ಟುತ್ತದೆ, ಕಾಳುಗಳನ್ನು ಹೆಕ್ಕಿ ತಿನ್ನುತ್ತದೆ. ಇತ್ಯಾದಿ ಉತ್ತರಗಳು ಸಿಗಬಹುದು.)
- ಗೂಡು ಕಟ್ಟಿದ ಮೇಲೆ ಏನು ಮಾಡುತ್ತದೆ?

  (ಗೂಡಿನಲ್ಲಿ ವಾಸಿಸುತ್ತದೆ ಮೊಟ್ಟೆಯಿಡುತ್ತದೆ, ಕಾವು ಕೊಡುತ್ತದೆ)

ಈ ಚರ್ಚೆಯ ಬಳಿಕ ವಿದ್ಯಾರ್ಥಿಗಳಲ್ಲಿ ವೈಯಕ್ತಿಕವಾಗಿ ಬರೆಯಲು ಹೇಳುವುದು.

- ವೈಯಕ್ತಿಕ ಬರವಣಿಗೆ.
- ಗುಂಪು ಮಾಡುವುದು.
- ಗುಂಪಿನಲ್ಲಿ ಮಂಡನೆ.
- ಗುಂಪಿನಲ್ಲಿ ಉತ್ತಮ ಪಡಿಸುವುದು.
- ಗುಂಪಿನ ಮಂಡನೆ
- ಅಧ್ಯಾಪಕರು ಬರೆದ ಪದ್ಯದ ಸಾಲುಗಳನ್ನು ಪ್ರದರ್ಶಿಸುವುದು. (Teacher's Version)
- ಉತ್ತಮಪಡಿಸಿ ಬರೆಯುವುದು.

ಉತ್ತಮವಾಗಿ ಬರೆದ ಗುಂಪನ್ನು ಅಭಿನಂದಿಸುವುದು

ಆಶಯದ ಮುಂದುವರಿಕೆ, ಪ್ರಾಸಪದಗಳ ಬಳಕೆ, ರಾಗ, ತಾಳದಿಂದ ಹಾಡಬಹುದಾದ ಸಾಲುಗಳ ರಚನೆ, ಇತ್ಯಾದಿಗಳ ಆಧಾರದಲ್ಲಿ ಉತ್ತಮವಾದುದನ್ನು ಆಯ್ಕೆ ಮಾಡಬೇಕು.

ಪುಟ್ಟ ಗುಬ್ಬಿ
ದೊಡ್ಡ ಮರದಿ
ಗೂಡು ಕಟ್ಟಿತು
ಗೂಡು ಕಟ್ಟಿ
ಅದರಲೊಂದು
ಮೊಟ್ಟೆ ಇಟ್ಟಿತು
ಕಾವು ಸಿಕ್ಕಿ
ಮೊಟ್ಟೆ ಬಿರಿದು
ಮರಿಯು ಆಯಿತು

### ಸಂಗ್ರಹಿಸುವ

ಮಕ್ಕಳ ಬಾಲ್ಯಕಾಲಕ್ಕೆ ಸಂಬಂಧಿಸಿದಂತೆ ಗೀತೆಗಳನ್ನು ಸಂಗ್ರಹಿಸಿ ಬರೆದು ತರಲು ತಿಳಿಸುವುದು. ಅವುಗಳನ್ನು ತರಗತಿಯಲ್ಲಿ ಹಾಡಲು ಅವಕಾಶ ನೀಡುವುದು. ವಿದ್ಯಾರ್ಥಿಗಳು ಪೋರ್ಟ್‌ಪೋಲಿಯೋದಲ್ಲಿ ಸಂಗ್ರಹಿಸಲಿ.

## 2. ಬಾಲ ಕಾರ್ಮಿಕರು

### ಚಟುವಟಿಕೆಗಳು

### ಪಾಠಭಾಗದೆಡೆಗೆ

ಬಾಲ್ಯವೆಂಬುದು ಜೀವನದ ಒಂದು ಘಟ್ಟ. ಈ ಸಮಯದಲ್ಲಿ ಮಕ್ಕಳು ಹೆತ್ತವರ ಪ್ರೀತಿಯಲ್ಲಿ, ಹಿರಿಯರ ರಕ್ಷೆಯಲ್ಲಿ ಸಂತೋಷದಿಂದ ಕಾಲ ಕಳೆಯುತ್ತಾರೆ. ಶಾಲೆಗೆ ಹೋಗಲು ಪ್ರಾರಂಭಿಸಿದ ಮೇಲೆ ಓದು, ಬರಹ, ಆಟೋಟ ಮೊದಲಾದ ಚಟುವಟಿಕೆಗಳಲ್ಲಿ ತೊಡಗಿಕೊಳ್ಳುತ್ತಾ ತಮ್ಮನ್ನು ತಾವೇ ಮರೆತು ಬಿಡುತ್ತಾರೆ. ಆದರೆ ಕೆಲವು ಮಕ್ಕಳು ತಮ್ಮ ಕುಟುಂಬದ ಆರ್ಥಿಕ ಪರಿಸ್ಥಿತಿಯಿಂದಾಗಿ ವಿದ್ಯಾಭ್ಯಾಸವನ್ನು ಅರ್ಧದಲ್ಲೇ ಮೊಟಕುಗೊಳಿಸಿ ದುಡಿಯಲು ಪ್ರಾರಂಭಿಸುತ್ತಾರೆ. ಇಂತಹ ಬಾಲ ಕಾರ್ಮಿಕರ ಕುರಿತು ಪಾಠಭಾಗದಲ್ಲಿ ಹೇಳಲಾಗಿದೆ.

### ಉತ್ತರಿಸುವ

ಬಾಲ ಕಾರ್ಮಿಕರು ಎಂಬ ಪಾಠಭಾಗದ ಆಶಯಗ್ರಹಣವಾಗಿದೆಯೋ? ಎಷ್ಟರ ಮಟ್ಟಿಗೆ ಆಶಯವನ್ನು ಮಕ್ಕಳು ಗ್ರಹಿಸಿದ್ದಾರೆ ಎಂಬುದನ್ನು ಈ ಚಟುವಟಿಕೆಯ ಮೂಲಕ ತಿಳಿಯಬಹುದು.

ವಿದ್ಯಾರ್ಥಿಗಳು ವೈಯಕ್ತಿಕವಾಗಿ ಪಾಠವನ್ನು ಓದಲಿ. ಬಳಿಕ ನೀಡಿರುವ ಪ್ರಶ್ನೆಗಳಿಗೆ ಉತ್ತರವನ್ನು ಬರೆಯಲಿ. ವಿದ್ಯಾರ್ಥಿಗಳಿಂದ ಒಂದೊಂದು ಪ್ರಶ್ನೆಯ ಉತ್ತರಗಳನ್ನು ಹೇಳಿಸುವುದು. ಉಳಿದ ವಿದ್ಯಾರ್ಥಿಗಳು ತಾವು ಬರೆದ ಉತ್ತರಗಳೊಂದಿಗೆ ಹೋಲಿಸಿ, ಚರ್ಚಿಸಿ, ಉತ್ತಮ ಪಡಿಸಿ ಬರೆಯಲು ಅವಕಾಶ ನೀಡುವುದು.

### ಸಮಾನಾರ್ಥ ಪದಗಳನ್ನು ಬರೆಯುವ

ಇದು ವೈಯಕ್ತಿಕವಾಗಿ ಮಾಡಬಹುದಾದ ಚಟುವಟಿಕೆಯಾಗಿದೆ. ತರಗತಿಯ ಮಕ್ಕಳ ಕಲಿಕಾ ಮಟ್ಟಕ್ಕೆ ಹೊಂದಿಕೊಂಡು ಗುಂಪಿನಲ್ಲಿಯೂ ಮಾಡಿಸಬಹುದು.

ಕೊಟ್ಟಿರುವ ಪದಗಳಿಗೆ ಸಮಾನಾರ್ಥಕ ಪದಗಳನ್ನು ಪಾಠಭಾಗದಿಂದ ಹುಡುಕಿ ಬರೆಯಲು ತಿಳಿಸುವುದು. ಕೆಲವು ವಿದ್ಯಾರ್ಥಿಗಳಿಂದ ಓದಿಸುವುದು. ಉಳಿದವರೊಂದಿಗೆ ಚರ್ಚಿಸಿ, ಸರಿಪಡಿಸಿ ಬರೆಯಲು ತಿಳಿಸುವುದು. ಅಗತ್ಯವಿದ್ದಲ್ಲಿ ಅರ್ಥಕೋಶವನ್ನು ನೀಡಿ ಪದಗಳ ಅರ್ಥವನ್ನು ಗುಂಪಿನಲ್ಲಿ ಕಂಡುಹಿಡಿಯಲು ತಿಳಿಸಬಹುದು.

### ಅಡಿಟಿಪ್ಪಣಿ ಬರೆಯುವ

ಅಡಿಟಿಪ್ಪಣಿ ಬರವಣಿಗೆ ಒಂದು ಭಾಷಾ ವ್ಯವಹಾರ ರೂಪವಾಗಿದೆ. ಕೊಟ್ಟಿರುವ ಚಿತ್ರ/ದೃಶ್ಯದ ಆಶಯವನ್ನು ಗ್ರಹಿಸಿಕೊಂಡು ತಮ್ಮ ಭಾವನೆಗೆ ತಕ್ಕಂತೆ ಚಿಕ್ಕದಾಗಿ, ಚೊಕ್ಕದಾಗಿ ಬರವಣಿಗೆ ರೂಪದಲ್ಲಿ ಪ್ರಕಟಿಸುವುದೇ ಅಡಿ ಟಿಪ್ಪಣಿ.

ವಿದ್ಯಾರ್ಥಿಗಳು ವೈಯಕ್ತಿಕವಾಗಿ ಚಿತ್ರವನ್ನು ವೀಕ್ಷಿಸಲಿ. ಬಳಿಕ ವೈಯಕ್ತಿಕವಾಗಿ ಅಡಿ ಟಿಪ್ಪಣಿ ಬರೆಯಲಿ.

| | |
|---|---|
| **ಹೊಟ್ಟೆ ಹೊರೆಯಲು ಕೂಲಿ**<br>**ವಿದ್ಯಾಭ್ಯಾಸಕ್ಕೆ ತಡೆಬೇಲಿ** | **ಊಟಕ್ಕಾಗಿ ಮಾಡಿದ ಕಾಯಕ**<br>**ಶಿಕ್ಷಣದಿಂದ ವಂಚಿತ ಬಾಲಕ** |

### ಟಿಪ್ಪಣಿ ಬರೆಯುವ

ಪಠ್ಯಭಾಗದ ಆಶಯದ ಬಗ್ಗೆ ಚರ್ಚಿಸುವುದು. ಈ ರೀತಿಯಲ್ಲಿ ವಿವಿಧ ಸ್ಥಳಗಳಲ್ಲಿ ಕೆಲಸ ಮಾಡುವ ಮಕ್ಕಳನ್ನು ಕಂಡಿರಬಹುದಲ್ಲವೇ? ಯಾವ ಯಾವ ಕೆಲಸ ಮಾಡುವ ಮಕ್ಕಳನ್ನು ಕಂಡಿದ್ದೀರಿ? ಅನುಭವವನ್ನು ಹೇಳಲು ತಿಳಿಸುವುದು.

ಚರ್ಚೆಯ ಬಳಿಕ ವೈಯಕ್ತಿಕವಾಗಿ ಬರೆಯಲಿ.

- ವೈಯುಕ್ತಿಕ ಬರವಣಿಗೆ
- ಗುಂಪು ಮಾಡುವುದು.
- ಗುಂಪಿನಲ್ಲಿ ಮಂಡನೆ
- ಉತ್ತಮ ಪಡಿಸುವುದು
- ಗುಂಪಿನ ಮಂಡನೆ

ಅಧ್ಯಾಪಕರು ಬರೆದ ಟಿಪ್ಪಣಿಯ ಆಧಾರದಲ್ಲಿ ಉತ್ತಮಪಡಿಸುವುದು.

### ಘೋಷಣ ವಾಕ್ಯಗಳನ್ನು ಬರೆಯುವ

ಮಕ್ಕಳ ಹಕ್ಕುಗಳ ಹಾಗೂ ಕರ್ತವ್ಯಗಳ ಬಗ್ಗೆ ಚರ್ಚಿಸುವುದು. ಬಳಿಕ ಘೋಷಣ ವಾಕ್ಯಗಳನ್ನು ಬರೆಯಲು ತಿಳಿಸುವುದು. ವೈಯಕ್ತಿಕವಾಗಿ ಬರೆದ ಘೋಷಣ ವಾಕ್ಯಗಳನ್ನು ಮಂಡಿಸಲು ತಿಳಿಸುವುದು. ಉತ್ತಮಪಡಿಸಿ ಬರೆಯಲು ಅಧ್ಯಾಪಕರು ಅಗತ್ಯ ಸಹಾಯವನ್ನು ನೀಡುವುದು.

### ಬದಲಾಯಿಸಿ ಬರೆಯುವ

ಮಾದರಿಯಂತೆ ವಾಕ್ಯಗಳನ್ನು ಬದಲಾಯಿಸಿ ಬರೆಯಲು ವಿದ್ಯಾರ್ಥಿಗಳಿಗೆ ತಿಳಿಸುವುದು. ಇದು ವೈಯಕ್ತಿಕವಾಗಿ ಮಾಡಬಹುದಾದ ಚಟುವಟಿಕೆಯಾಗಿದೆ.

- ಗುರುಹಿರಿಯರಲ್ಲಿ ಆದರವನ್ನು ತೋರಿಸಬೇಕು.
- ಆರೋಗ್ಯವಿದ್ದಾಗ ಉತ್ಸಾಹವಿರುತ್ತದೆ
- ಪತ್ರಿಕೆಗಳಲ್ಲಿ ಅಧಿಕೃತ ವಾರ್ತೆಗಳು ಇರಬೇಕು.
- ಬುದ್ಧಿವಂತರು ತಮ್ಮ ಜವಾಬ್ದಾರಿಗಳನ್ನು ಸಮರ್ಪಕವಾಗಿ ಮಾಡುತ್ತಾರೆ.
- ನಾವು ರಾಷ್ಟ್ರಧ್ವಜಕ್ಕೆ ಗೌರವ ತೋರಿಸಬೇಕು.

ಇದೇ ರೀತಿ, ಅಹಿಂಸೆ – ಹಿಂಸೆ, ಅವ್ಯವಸ್ಥೆ – ವ್ಯವಸ್ಥೆ, ಅನಾಸಕ್ತಿ – ಆಸಕ್ತಿ, ಅವಿರೋಧ – ವಿರೋಧ, ಅನಾಸ್ಥೆ – ಆಸ್ಥೆ, ಅನೀತಿ – ನೀತಿ, ಅಪ್ರಬುದ್ಧ – ಪ್ರಬುದ್ಧ ಇತ್ಯಾದಿ ಪದಗಳನ್ನುಪಯೋಗಿಸಿ ವಾಕ್ಯಗಳನ್ನು ರಚಿಸಲು ತಿಳಿಸಬಹುದು.

### ವಾಕ್ಯ ಬರೆಯುವ

ಪಠ್ಯದಲ್ಲಿ ನೀಡಿರುವ ಗದ್ಯವನ್ನು ಓದಿ ಅಡಿಗೆರೆ ಎಳೆದ ಪದಗಳನ್ನುಪಯೋಗಿಸಿ, ಸ್ವಂತವಾಕ್ಯಗಳನ್ನು ರಚಿಸಲಿ. ಮಂಡನೆಯ ಬಳಿಕ ಅಗತ್ಯವಿದ್ದಲ್ಲಿ ಉತ್ತಮಪಡಿಸಲು ಸಹಾಯ ಮಾಡುವುದು.

### ಅನುಭವ ಹೇಳುವ

ವಿದ್ಯಾರ್ಥಿಗಳು ತಮ್ಮ ಹಿರಿಯರಿಗೆ ಸಹಾಯ ಮಾಡಿದ ಸಂದರ್ಭಗಳನ್ನು ನೆನಪಿಸಿ ಹೇಳಲು ಅವಕಾಶ ಮಾಡಿಕೊಡುವುದು.

## 3. ಗಿಡವಾಗಿ ಬಗ್ಗದ್ದು

### ಪಾಠಭಾಗದೆಡೆಗೆ

ಮಕ್ಕಳು ಚಿಕ್ಕಂದಿನಿಂದಲೇ ಉತ್ತಮ ಅಭ್ಯಾಸಗಳನ್ನು ಬೆಳೆಸಿಕೊಳ್ಳಬೇಕು. ಆದರೆ ನಾವು ಯಾವ ರೀತಿ ನಡೆಯಬೇಕು? ಯಾವುದು ಸರಿ? ಯಾವುದು ತಪ್ಪು? ಎನ್ನುವುದನ್ನು ಸ್ವತಂತ್ರವಾಗಿ ವಿವೇಚಿಸಲು ಮಕ್ಕಳಿಗೆ ಸಾಧ್ಯವಾಗುವುದಿಲ್ಲ. ಇಂತಹ ಸಂದರ್ಭದಲ್ಲಿ ಹೆತ್ತವರು ಅಧ್ಯಾಪಕರು ಹಾಗೂ ಹಿರಿಯರು ಮಾರ್ಗದರ್ಶನ ನೀಡಬೇಕು. ಉತ್ತಮ ನಡತೆಗಳನ್ನು ಬಾಲ್ಯದಿಂದಲೇ ರೂಢಿಸಿಕೊಳ್ಳಲು ಸಾಧ್ಯವಾಗದಿದ್ದ ಮೇಲೆ ದೊಡ್ಡವರಾದ ಬಳಿಕ ರೂಢಿಸಿಕೊಳ್ಳುವುದು ಬಹಳ ಕಷ್ಟ. ಬಾಲ್ಯದಲ್ಲಿಯೇ ಮಕ್ಕಳು ಉತ್ತಮ ಗುಣಗಳನ್ನು ಮೈಗೂಡಿಸಿಕೊಳ್ಳಲು ಪ್ರಯತ್ನಿಸಬೇಕು ಎಂಬುದನ್ನು ಈ ಪಾಠಭಾಗವು ತಿಳಿಸುತ್ತದೆ. ಮಕ್ಕಳ ವ್ಯಕ್ತಿತ್ವದ ವಿಕಾಸವೇ ಈ ಪಾಠಭಾಗದ ಪ್ರಧಾನ ಉದ್ದೇಶವಾಗಿದೆ.

## ಚಟುವಟಿಕೆಗಳು

### ಉತ್ತರಿಸುವ

ಇದು ಪಠ್ಯಭಾಗದ ಆಶಯವನ್ನು ದೃಢಗೊಳಿಸಲಿರುವ ಚಟುವಟಿಕೆಯಾಗಿದೆ. ಚಟುವಟಿಕೆಯ ಆರಂಭದಲ್ಲಿ ವಿದ್ಯಾರ್ಥಿಗಳು ಪಾಠವನ್ನು ವೈಯಕ್ತಿಕವಾಗಿ ಓದಲಿ. ಬಳಿಕ ವೈಯಕ್ತಿಕವಾಗಿ ಉತ್ತರಗಳನ್ನು ಬರೆಯಲಿ. ಒಬ್ಬೊಬ್ಬ ವಿದ್ಯಾರ್ಥಿಯ ಒಂದೊಂದು ಪ್ರಶ್ನೆಯ ಉತ್ತರವನ್ನು ಮಂಡಿಸಲಿ. ಆ ಸಂದರ್ಭದಲ್ಲಿ ಉಳಿದ ವಿದ್ಯಾರ್ಥಿಗಳು ತಮ್ಮ ಉತ್ತರವನ್ನು ಹೋಲಿಸಿ, ಚರ್ಚಿಸಿ, ಉತ್ತಮಪಡಿಸಿ ಬರೆಯಲಿ. ಅಧ್ಯಾಪಕರು ಅಗತ್ಯ ಸಹಾಯವನ್ನು ಮಾಡುವುದು.

### ಪದ ಬರೆಯುವ

ವಿದ್ಯಾರ್ಥಿಗಳು ಪಾಠಭಾಗವನ್ನು ಮೌನವಾಗಿ ಓದಲಿ. ನವೀನ ಪದಗಳನ್ನು ಅಡಿಗೆರೆ ಹಾಕಿ ಗುರುತಿಸಲಿ. ಗುರುತಿಸಿರುವ ಪದಗಳನ್ನು ಅಕಾರಾದಿಯಾಗಿ ಬರೆಯಲಿ. ಬಳಿಕ ವಿದ್ಯಾರ್ಥಿಗಳನ್ನು ಗುಂಪುಗಳಾಗಿ ಮಾಡುವುದು. ಪ್ರತಿಯೊಂದು ಗುಂಪಿಗೂ ಒಂದೊಂದು ಅರ್ಥಕೋಶವನ್ನು ನೀಡಿ ತಾವು ಬರೆದ ಪದಗಳ ಅರ್ಥವನ್ನು ಕಂಡುಹಿಡಿದು ಬರೆಯಲು ಹೇಳುವುದು.

### ಹೊಂದಿಸಿ ಬರೆಯುವ

ಇದೊಂದು ವೈಯುಕ್ತಿಕವಾಗಿ ನಡೆಸಬಹುದಾದ ಚಟುವಟಿಕೆ. ಗಾದೆಗಳ ಅರ್ಧ ಭಾಗವನ್ನು 'ಅ' ವಿಭಾಗದಲ್ಲಿಯೂ, ಉಳಿದರ್ಧ ಭಾಗವನ್ನು 'ಆ' ವಿಭಾಗದಲ್ಲಿಯೂ ನೀಡಲಾಗಿದೆ. ವಿದ್ಯಾರ್ಥಿಗಳು ಸ್ವತಃ ಹೊಂದಿ ಬರೆಯಲಿ. ಮೌಲ್ಯಮಾಪನಕ್ಕಾಗಿ ಪ್ರತಿಯೊಬ್ಬರಲ್ಲಿ ಬರೆದ ಗಾದೆಗಳನ್ನು ಓದಲು ತಿಳಿಸುವುದು. ಉಳಿದ ವಿದ್ಯಾರ್ಥಿಗಳು ಹೋಲಿಸಿ, ಚರ್ಚಿಸಿ ಉತ್ತಮಪಡಿಸಲಿ.

### ವಿವರಣೆ ಬರೆಯುವ

ಈ ಚಟುವಟಿಕೆಯನ್ನು ವೈಯುಕ್ತಿಕವಾಗಿ ಮಾಡಬೇಕಾಗಿದೆ. ಚಟುವಟಿಕೆಯ ಮೊದಲು ವಿದ್ಯಾರ್ಥಿಗಳಲ್ಲಿ ಅವರ ಹಿಂದಿನ ದಿನದ ಕಾರ್ಯಗಳ ಬಗ್ಗೆ ಕೇಳಬೇಕು.

- ನೀವು ನಿನ್ನೆ ಶಾಲೆಗೆ ಬಂದಿದ್ದೀರಾ? ಅಥವಾ ಎಲ್ಲಿದ್ದೀರಿ?
- ನಿನ್ನೆ ನಿಮ್ಮ ಕಾರ್ಯ ಚಟುವಟಿಕೆಗಳೇನು?

ಬಳಿಕ ಈ ಪ್ರಶ್ನೆಯನ್ನು ಕೇಳಿ, ವಿದ್ಯಾರ್ಥಿಗಳು ಸ್ವತಃ ವಿವರಣೆ ಬರೆಯಲಿ. ಬಳಿಕ ಮೂರೋ ನಾಲ್ಕೋ ಗುಂಪುಗಳಾಗಿ ಮಾಡಿ, ವಿವರಣೆಯಲ್ಲಿರುವ ಅಕ್ಷರ ದೋಷ, ವಾಕ್ಯ ರಚನೆಗಳನ್ನು ಉತ್ತಮ ಪಡಿಸಲಿ. ಅಧ್ಯಾಪಕರು ಅಗತ್ಯ ಸಹಾಯ ಮಾಡಬೇಕು.

### ಪಟ್ಟಿ ಮಾಡುವ

ಆರೋಗ್ಯ ಪಾಲನೆಯ ಸರಿಯಾದ ಕ್ರಮಗಳನ್ನು ಚರ್ಚೆಯ ಮೂಲಕ, ಅನುಭವದ ಮೂಲಕ ಪಟ್ಟಿ ಮಾಡಲು ತಿಳಿಸುವುದು.

- ನಿಯಮಿತವಾಗಿ ಉಗುರುಗಳನ್ನು ಕತ್ತರಿಸಬೇಕು.
- ಪ್ರತಿದಿನ 2 ಬಾರಿ ಸ್ನಾನ ಮಾಡಬೇಕು.
- ಶುಭ್ರವಾದ ಬಟ್ಟೆ ಬರೆಗಳನ್ನು  ಧರಿಸಬೇಕು.
- ಶುದ್ಧವಾದ ಆಹಾರ ಪದಾರ್ಥಗಳನ್ನು ಸೇವಿಸಬೇಕು.

**ಹುಡುಕಿ ಬರೆಯುವ**

ಕೆಲವು ವಾಕ್ಯಗಳನ್ನು ಇಲ್ಲಿ ನೀಡಲಾಗಿದೆ. ಈ ವಾಕ್ಯಗಳನ್ನು ಓದಿ ಇದಕ್ಕೆ ಸಮಾನಾರ್ಥವಿರುವ ವಾಕ್ಯಗಳನ್ನು ಪಾಠದಿಂದ ಆರಿಸಿ ಉತ್ತಮಪಡಿಸಿ ಬರೆಯಲಿ. ಅಧ್ಯಾಪಕರು ಸಹಾಯ ನೀಡುವುದು.

- ಹೊತ್ತು ಮುಳುಗಿತು
- ತಾಳ್ಮೆಯ ಕಟ್ಟೆ ಒಡೆಯಿತು
- ಉತ್ತಮ ಅಭ್ಯಾಸಗಳನ್ನು ರೂಢಿಸಿಕೊಳ್ಳುವುದು
- ಅಮ್ಮನ ಕಳಕಳಿ ಅರ್ಥವಾಯಿತು

**ದಿನಚರಿ ಬರೆಯುವ**

ಪಾಠಭಾಗದಲ್ಲಿ ಹೇಳಿರುವ ಜಗದೀಶನ ದಿನದ ಚಟುವಟಿಕೆಯನ್ನು ಓದಿ, ವಿದ್ಯಾರ್ಥಿಗಳು ತಾವೇ ಜಗದೀಶನೆಂದು ಭಾವಿಸಿಕೊಂಡು ದಿನಚರಿ ಬರೆಯಲಿ.

**ಅಭಿಪ್ರಾಯ ಹೇಳುವ**

ಪಠ್ಯದಲ್ಲಿರುವ ವಾಕ್ಯದ ಬಗ್ಗೆ ವಿದ್ಯಾರ್ಥಿಗಳ ಅಭಿಪ್ರಾಯವನ್ನು ಕೇಳುವುದು. ಶುಚಿತ್ವಕ್ಕೆ ಸಂಬಂಧಪಟ್ಟಂತೆ ವಿದ್ಯಾರ್ಥಿಗಳು ಚರ್ಚಿಸುವಂತೆ ಗಮನವಹಿಸಬೇಕು.

**ವಿಸ್ತರಿಸಿ ಬರೆಯುವ**

ಗಾದೆ ಮಾತುಗಳ ಗೂಢಾರ್ಥವನ್ನು ತಿಳಿಯುವುದು ಈ ಚಟುವಟಿಕೆಯ ಉದ್ದೇಶವಾಗಿದೆ. ಗಾದೆಗಳು ಹಿರಿಯರ ಅನುಭವದ ಮಾತುಗಳಾಗಿವೆ. ಆದುದರಿಂದ ಎಲ್ಲರ ಜೀವನಕ್ಕೂ ಅನ್ವಯವಾಗುತ್ತವೆ. ಗಾದೆಗಳನ್ನು ಅವುಗಳ ಗೂಢಾರ್ಥವನ್ನು ತಿಳಿದು ಜೀವನದಲ್ಲಿ ಅಳವಡಿಸಬೇಕೆಂಬುದನ್ನು ವಿದ್ಯಾರ್ಥಿಗಳು ತಿಳಿಯಬೇಕು.

ಚಟುವಟಿಕೆಯ ಆರಂಭದಲ್ಲಿ ಪಾಠಭಾಗದ ಬಗ್ಗೆ ಸಣ್ಣದೊಂದು ಚರ್ಚೆ ನಡೆಸಬಹುದು. ಬಳಿಕ ಚಟುವಟಿಕೆಯನ್ನು ಆರಂಭಿಸಬೇಕು.

- ವೈಯುಕ್ತಿಕ ಬರವಣಿಗೆ.
- ಗುಂಪು ಮಾಡುವುದು.
- ಗುಂಪಿನಲ್ಲಿ ಮಂಡನೆ.
- ಉತ್ತಮ ಪಡಿಸುವುದು.
- ಗುಂಪಿನ ಮಂಡನೆ.
- ಅಧ್ಯಾಪಕರು ತಾವು ಬರೆದ ಗಾದೆ ವಿವರಣೆಯನ್ನು ಪ್ರದರ್ಶಿಸುವುದು.
- ಉತ್ತಮಪಡಿಸುವುದು.

'ಕುಳಿತು ಉಣ್ಣುವವನಿಗೆ ಕುಡಿಕೆ ಹೊನ್ನು ಸಾಲದು' ಎಲ್ಲ ಜೀವಿಗಳು ತಮ್ಮ ತಮ್ಮ ಅಗತ್ಯಗಳನ್ನು ಪೂರೈಸಲು ಶ್ರಮಿಸುತ್ತವೆ. ಮನುಷ್ಯನು ಕೂಡ ತನ್ನ ಅಗತ್ಯಗಳನ್ನು ಪಡೆಯಲು ವಿವಿಧ ರೀತಿಯಲ್ಲಿ ಶ್ರಮಿಸುತ್ತಾನೆ. ಬುದ್ಧಿಜೀವಿಯಾದ ಮನುಷ್ಯ ತನ್ನ ಅಗತ್ಯಗಳ ಜೊತೆಗೆ ಇನ್ನು ಮುಂದಿನ ಜೀವನಕ್ಕೂ ಸಂಗ್ರಹಿಸಲು ಯೋಚಿಸಿದ್ದಾನೆ.

ಹಾಗೆ ನಾವೆಲ್ಲರೂ ಕೂಡಾ ಆಹಾರಕ್ಕಾಗಿ, ಬಟ್ಟೆ ಬರೆಗಳಿಗಾಗಿ ಹಾಗೂ ಇತರ ಸೌಕರ್ಯಗಳನ್ನು ಪೂರೈಸಲು ಹಣವನ್ನು, ಚಿನ್ನವನ್ನು ಸಂಗ್ರಹಿಸಿಡುತ್ತೇವೆ. ತುಂಬಾ ಸಂಪತ್ತು ನಮ್ಮಲ್ಲಿ ಇದ್ದಾಗ, ನನಗೆ ಬೇಕಾದಷ್ಟು ಸಂಪತ್ತಿದೆ. ಇನ್ನು ನಾವು ಯಾವುದೇ ಕೆಲಸ ಮಾಡುವುದಿಲ್ಲ. ಸುಮ್ಮನೆ ಕುಳಿತುಕೊಳ್ಳುತ್ತೇನೆ ಎಂದು ಕುಳಿತರೆ ಏನಾಗಬಹುದು? ಕೆಲವು ದಿನಗಳ ಬಳಿಕ ಈ ಸಂಪತ್ತೆಲ್ಲಾ ಮುಗಿದು ಹೋಗಬಹುದು. ಇದಕ್ಕೆ ಹಿರಿಯರು ಈ ಮಾತನ್ನು ಹೇಳುವರು "ಕುಳಿತು ಉಣ್ಣುವವನಿಗೆ ಕುಡಿಕೆ ಹೊನ್ನು ಸಾಲದು"ನಾವು ಯಾವಾಗಲೂ ಏನಾದರೊಂದು ಕಾರ್ಯಗಳಲ್ಲಿ ತೊಡಗಿಸಿಕೊಳ್ಳಬೇಕು.

### ಕಥೆ ಬರೆಯುವ

ಚಿತ್ರಗಳ ಆಶಯಗಳನ್ನು ಗ್ರಹಿಸಿ ಅವುಗಳ ಘಟನೆಗಳನ್ನು ಕ್ರಮೀಕರಿಸಿ, ಸಕಾರಣಯುಕ್ತವಾಗಿ ಕಥೆಯನ್ನು ರಚಿಸುವುದು. ಇದು ಗುಂಪು ಚಟುವಟಿಕೆ.

- ವಿದ್ಯಾರ್ಥಿಗಳು ಸ್ವತಃ ಚಿತ್ರಗಳನ್ನು ನೋಡಿ ಆಶಯವನ್ನು ತಿಳಿಯುವುದು.
- ವೈಯುಕ್ತಿಕವಾಗಿ ಕಥೆಯನ್ನು ಬರೆಯುವುದು.
- ಗುಂಪು ಮಾಡುವುದು.
- ಗುಂಪಿನಲ್ಲಿ ಮಂಡಿಸುವುದು.
- ಗುಂಪಿನಲ್ಲಿ ಉತ್ತಮ ಪಡಿಸುವುದು.
- ಗುಂಪಿನ ಮಂಡನೆ.
- ಅಧ್ಯಾಪಕರ ಆವೃತ್ತಿ (Teacher's Version) ನೀಡುವುದು.
- ಅದರ ಆಧಾರದಲ್ಲಿ ಉತ್ತಮ ಪಡಿಸುವುದು.

### ಪುಟ್ಟನ ಸಹಾಯ

ಒಂದು ಊರು. ಆ ಊರಿನ ಬಯಲಿನಲ್ಲಿ ಒಂದು ದೊಡ್ಡ ಮರವಿತ್ತು. ಆ ಮರದಲ್ಲಿ ತುಂಬಾ ಹಕ್ಕಿಗಳು ವಾಸಿಸುತ್ತಿದ್ದವು. ಮರದ ಗೆಲ್ಲಿನಲ್ಲೊಂದು ಪುಟ್ಟ ಗೂಡು. ಆ ಗೂಡಿನಲ್ಲಿ ತಾಯಿ ಹಕ್ಕಿ ಹಾಗೂ ಮರಿ ಹಕ್ಕಿ ವಾಸಿಸುತ್ತಿದ್ದವು.

ಒಂದು ದಿನ ತಾಯಿ ಹಕ್ಕಿ ಆಹಾರವನ್ನು ಅರಸುತ್ತಾ ಹಾರಿ ಹೋಯಿತು. ಮರಿಹಕ್ಕಿಗೆ ಗೂಡಿನಲ್ಲಿ ಕುಳಿತು ಬೇಸರವಾಯಿತು. ಅದು ಮೆಲ್ಲಗೆ ಹೊರಗೆ ಹಾರಲು ಪ್ರಯತ್ನಿಸಿತು. ಆದರೆ ಅದಕ್ಕೆ ಹಾರಲು ಬರುತ್ತಿರಲಿಲ್ಲ. ಅದು ನೆಲಕ್ಕೆ ಬಿದ್ದಿತು. ಅಷ್ಟರಲ್ಲಿ ಅಲ್ಲಿಗೆ ಒಂದು ಹಾವು ಬಂದಿತು. ಇದನ್ನು ಪುಟ್ಟ ನೋಡಿದನು. ಅವನು ಕೂಡಲೇ ಓಡಿ ಬಂದನು. ಕೈಗೆ ಸಿಕ್ಕಿದ ದೊಣ್ಣೆಯಿಂದ ಹಾವನ್ನು ಹೆದರಿಸಿ ಓಡಿಸಿದನು. ಮರಿ ಹಕ್ಕಿಯನ್ನು ಮೆಲ್ಲಗೆ ಎತ್ತಿ ಗೂಡಿಗೆ ಸೇರಿಸಿದನು. ಅಷ್ಟರಲ್ಲಿ ತಾಯಿ ಹಕ್ಕಿ ಗೂಡಿಗೆ ಮರಳಿತು. ತಾಯಿ, ಮರಿ ಹಕ್ಕಿಗಳೆರಡೂ ಚಿಲಿಪಿಲಿಗುಟ್ಟುತ್ತಾ ಪುಟ್ಟನಿಗೆ ಕೃತಜ್ಞತೆ ಸಲ್ಲಿಸಿದವು.

# 4. ಕ್ಷಮಾಪಣೆ

ಉತ್ತಮ ನಡೆನುಡಿಗಳನ್ನು, ಗುಣನಡತೆಗಳನ್ನು ರೂಢಿಸಿಕೊಳ್ಳುವಂತೆ ಬಾಲ್ಯದಿಂದಲೇ ನೋಡಿಕೊಳ್ಳಬೇಕಾದುದು ಹೆತ್ತವರ, ಗುರುಹಿರಿಯರ ಕರ್ತವ್ಯವಾಗಿದೆ. ಮಕ್ಕಳು ತಪ್ಪು ಮಾಡಿದಾಗ ತಿಳಿಹೇಳಿ ಸರಿದಾರಿಯಲ್ಲಿ ನಡೆಸುವ ಆಶಯವಿರುವ ಎಷ್ಟೋ ಕಥೆಗಳು, ನಾಟಕಗಳು ನಮ್ಮಲ್ಲಿವೆ. 'ಕ್ಷಮಾಪಣೆ' ಅಂತಹ ಒಂದು ಸಾಮಾಜಿಕ ನಾಟಕವಾಗಿದೆ. ನಾಟಕದಲ್ಲಿ ಒಬ್ಬಳು ತಾಯಿ ತನ್ನ ಮಗನ ತಪ್ಪು ನಡತೆಯನ್ನು ಹೇಗೆ ಸರಿಪಡಿಸುತ್ತಾಳೆ ಎಂಬುದನ್ನು ನೋಡೋಣ ಎಂದು ಹೇಳಿ ಪಾಠ ಪ್ರವೇಶ ಮಾಡಬಹುದು.

ರವಿ, ಜಾನ್, ಅಮ್ಮ, ಯಜಮಾನ ಈ ನಾಲ್ಕು ಪಾತ್ರಗಳನ್ನು ಚೆನ್ನಾಗಿ ಭಾವಪೂರ್ಣವಾಗಿ ಓದುವ ಮಕ್ಕಳಿಗೆ ನೀಡಿ ಪಾಠಭಾಗವನ್ನು ಅನುಕ್ರಮವಾಗಿ ಓದಲು ಹೇಳುವುದು. ಒಂದೊಂದು ದೃಶ್ಯವನ್ನು ಓದಿದ ಬಳಿಕ ಆಶಯ ಗ್ರಹಣ ಪ್ರಶ್ನೆಗಳನ್ನು ಕೇಳುವುದು ಮತ್ತು ಮಕ್ಕಳಿಗೆ ಪ್ರತಿಕ್ರಿಯೆ ಹೇಳಲು ಅವಕಾಶ ನೀಡುವುದು ಉತ್ತಮ. ಕೊನೆಯಲ್ಲಿ ರವಿಯ ಜಾಗದಲ್ಲಿ ನೀವಿದ್ದರೆ... ಎಂಬ ಪ್ರಶ್ನೆಯನ್ನು ಕೇಳಿ ವ್ಯಕ್ತಿತ್ವದ ಬೆಳವಣಿಗೆಗೆ ತಕ್ಕ ರೀತಿಯಲ್ಲಿ ಕ್ರೋಡೀಕರಣ ನಡೆಸುವಿರಲ್ಲವೇ?

## ಚಟುವಟಿಕೆಗಳು

### ಉತ್ತರ ಬರೆಯುವ

ಪಾಠಭಾಗದ ಆಶಯವನ್ನು ದೃಢಗೊಳಿಸಲಿರುವ ಈ ಚಟುವಟಿಕೆಯನ್ನು ವಿದ್ಯಾರ್ಥಿಗಳು ವೈಯಕ್ತಿಕವಾಗಿ ನಡೆಸಲಿ. ಕೆಲವರಿಂದ ಉತ್ತರಗಳನ್ನು ಓದಲು ಹೇಳುವುದು. ಚರ್ಚಿಸಿ ಅಧ್ಯಾಪಕರ ಸಹಾಯದಿಂದ ಅವುಗಳನ್ನು ಉತ್ತಮಪಡಿಸುವುದು.

### ಮೆಚ್ಚುಗೆಯಾದ ಕಥಾಪಾತ್ರ

ವಿದ್ಯಾರ್ಥಿಗಳು ನಾಟಕವನ್ನು ವೈಯಕ್ತಿಕವಾಗಿ ಓದಲಿ. ಬಳಿಕ ತಮಗೆ ಇಷ್ಟವಾದ ಕಥಾಪಾತ್ರವನ್ನು ಯಾವುದೆಂದು ಬರೆಯಲಿ. ಕಥಾಪಾತ್ರವು ಯಾವ ಗುಣಗಳಿಂದಾಗಿ ಇಷ್ಟವಾಯಿತೆಂದು ಬರೆಯಲಿ.

### ಕಥೆ ಬರೆಯುವ

ಈ ನಾಟಕವನ್ನು ಓದಿ ಕಥೆಯಾಗಿ ಬರೆಯಲಿ. ಇದನ್ನು ಗುಂಪು ಚಟುವಟಿಕೆಯಾಗಿಯೂ ಮಾಡಬಹುದು.

- ವಿದ್ಯಾರ್ಥಿಗಳು ವೈಯಕ್ತಿಕವಾಗಿ ಕಥೆಯಾಗಿ ಬರೆಯಲಿ.
- ಗುಂಪು ಮಾಡುವುದು.
- ಗುಂಪಿನಲ್ಲಿ ಮಂಡನೆ.
- ಗುಂಪಿನಲ್ಲಿ ಉತ್ತಮ ಪಡಿಸುವುದು.
- ಅಧ್ಯಾಪಕರ ಆವೃತ್ತಿ (Teacher's Version) ಯನ್ನು ಪ್ರದರ್ಶಿಸುವುದು.
- ಉತ್ತಮಪಡಿಸುವುದು.

## ಕ್ಷಮಾಪಣೆ

ಸಾಯಂಕಾಲವಾಗಿದೆ. ರವಿ ಮತ್ತು ಜಾನ್ ಮಾವಿನ ತೋಪಿನ ಬಳಿ ಬರುತ್ತಿದ್ದಾರೆ. ರವಿಗೆ ಮಾವಿನ ಹಣ್ಣುಗಳನ್ನು ಕಂಡು ಆಸೆಯಾಯಿತು. ಜಾನ್‌ನನ್ನು ಒತ್ತಾಯದಿಂದ ಕರೆದುಕೊಂಡು ಮಾವಿನ ಹಣ್ಣು ಕೊಯ್ಯಲು ಹೋಗುತ್ತಾನೆ. ರವಿ ಮರವೇರಿ ನಾಲ್ಕೈದು ಹಣ್ಣು ಉದುರಿಸುತ್ತಾನೆ. ಅಷ್ಟರಲ್ಲಿ ಯಾರೋ ಬರುವುದು ಕಾಣಿಸುತ್ತದೆ. ಅವರು ಹಣ್ಣುಗಳನ್ನು ಹೆಕ್ಕಿಕೊಂಡು ಅಲ್ಲಿಂದ ಓಡಿ ಹೋಗುತ್ತಾರೆ.

ರವಿ ಹಣ್ಣನ್ನು ತಿನ್ನುತ್ತಾ ಮನೆಗೆ ಬರುತ್ತಾನೆ. ಅಮ್ಮ ಮನೆಯಲ್ಲಿ ತಡವಾದುದಕ್ಕೆ ಕಾರಣ ಕೇಳುತ್ತಾರೆ. ಮಾವಿನ ಹಣ್ಣು ಎಲ್ಲಿಂದ ಎಂದು ಪ್ರಶ್ನಿಸುತ್ತಾರೆ. ಗದರಿಸಿ ಕೇಳಿದಾಗ ರವಿ ನಡೆದುದನ್ನು ಹೇಳುತ್ತಾನೆ. ತಾಯಿಗೆ ಅವಮಾನವೆನಿಸುತ್ತದೆ. ಮಾವಿನ ಹಣ್ಣು ಕದ್ದದ್ದು ತಪ್ಪೆಂದು ಬುದ್ಧಿಮಾತು ಹೇಳುತ್ತಾಳೆ. ಬೇರೆಯವರ ಮರದಿಂದ ಕೇಳದೆ ಕೊಯ್ದದ್ದು ತಪ್ಪು ಅವರ ಬಳಿ ಕ್ಷಮೆ ಕೇಳಿ ಬರಬೇಕೆಂದು ಕಳಿಸುತ್ತಾಳೆ.

ರವಿ ಯಜಮಾನರ ಮನೆಗೆ ಅಳುತ್ತಾ ಬರುತ್ತಾನೆ. ನಡೆದ ಸಂಗತಿಗಳನ್ನೆಲ್ಲಾ ತಿಳಿಸಿ ಕ್ಷಮೆ ಕೋರುತ್ತಾನೆ. ಯಜಮಾನರು ರವಿಯನ್ನು ಮೆಚ್ಚಿ ಕ್ಷಮಿಸಿ ಕಳಿಸುತ್ತಾರೆ. ಅಮ್ಮನಿಗೂ ಸಂತೋಷವಾಗುತ್ತದೆ.

### ಪೂರ್ತಿಗೊಳಿಸುವ

ಆವರಣದಲ್ಲಿ ಕೊಟ್ಟಿರುವ ಪದಗಳ ಸರಿಯಾದ ರೂಪವನ್ನು ಬಳಸಿ ಪೂರ್ತಿಗೊಳಿಸಬೇಕು. ಮಕ್ಕಳು ಗುಂಪುಗಳಲ್ಲಿ ಕುಳಿತು ಸರಿಯಾದ ರೂಪವನ್ನು ಊಹಿಸಿ ಬರೆದು ಓದಲಿ. ಅಗತ್ಯವಿದ್ದರೆ ಅಧ್ಯಾಪಕರು ಸಹಾಯ ಮಾಡಬಹುದು.

ರವಿಯು ಮಾಡಿದ ತಪ್ಪನ್ನು ನೆನೆದು ತುಂಬಾ ಬೇಸರಪಟ್ಟನು. ಮರುದಿನ ಶಾಲೆಯಲ್ಲಿ ಜಾನ್‌ನನ್ನು ಕಂಡನು. ರವಿಯು ಜಾನ್‌ನಲ್ಲಿ ಹಿಂದಿನ ದಿನ ನಡೆದ ಘಟನೆಗಳನ್ನು ವಿವರಿಸಿದನು. ಜಾನ್ ರವಿಯನ್ನು ಸಮಾಧಾನ ಪಡಿಸಿದನು. ರವಿಯು 'ಇನ್ನು ಮುಂದೆ ಯಾವುದೇ ತಪ್ಪನ್ನು ಮಾಡುವುದಿಲ್ಲ' ಎಂದು ತೀರ್ಮಾನಿಸಿದನು.

### ಅಭಿನಯಿಸುವ

ನಾಟಕದ ಪಾತ್ರಗಳನ್ನು ಮಕ್ಕಳಿಗೆ ಸೂಕ್ತವಾಗಿ ಹಂಚಿರಿ. ಬಳಿಕ ಮಕ್ಕಳು ತರಗತಿಯಲ್ಲಿ ಸಂಭಾಷಣೆ ನಡೆಸಲಿ. ಅಧ್ಯಾಪಕರು ಸೂಕ್ತ ಅಭಿನಯವನ್ನು ತಿಳಿಸುವುದು. ಮಾತು, ಅಭಿನಯ ಚೆನ್ನಾಗಿ ಅಭ್ಯಾಸವಾದ ಮೇಲೆ ಸಭೆ, ಸಮಾರಂಭಗಳಲ್ಲಿ ನಾಟಕವನ್ನು ಏರ್ಪಡಿಸುವಿರಲ್ಲವೇ? ಅದೇ ರೀತಿ ಬೇರೆ ಬೇರೆ ಕಥೆಗಳನ್ನು ಆಯ್ದು ಪಾತ್ರಗಳನ್ನು ಹಂಚಿಕೊಂಡು ಅಭಿನಯಿಸುವುದಕ್ಕೆ ಮಕ್ಕಳನ್ನು ಪ್ರೋತ್ಸಾಹಿಸಬೇಕು.

## ಮೌಲ್ಯಮಾಪನ ಚಟುವಟಿಕೆಗಳು

### I

1. ಕೆಳಗೆ ಕೊಟ್ಟ ಪದದ ಸಮನಾರ್ಥ ಪದ ಬರೆಯಿರಿ? ಅಲಗು
   (ಖಡ್ಗ, ಕೊಡಲಿ, ಸೂಜಿ) (1)
2. ಕೆಳಗೆ ಕೊಡಲಾದ ಪದ್ಯದ ಆಶಯವನ್ನು ಬರೆಯಿರಿ?

   ಆಡಿ ಬಾ ಕಂದಯ್ಯ ಅಂಗಾಲ ತೊಳೆದೇನು
   ತೆಂಗಿನಕಾಯಿ ತಿಳಿನೀರ ತಕ್ಕೊಂಡು
   ಬಂಗಾರದ ಪಾದ ತೊಳೆದೇನು" (3)
3. ನೀವು ಶಾಲೆಗೆ ಸೇರಿದ ದಿನದ ಅನುಭವವನ್ನು ರಸವತ್ತಾಗಿ ಬರೆಯಿರಿ?

### II

1. ಕೆಳಗೆ ಕೊಡಲಾದ ಪದದ ವಿರೋದಾರ್ಥ ಪದ ಬರೆಯಿರಿ (1)
   ಸೋಲು
2. ಬಾಲ ಕಾರ್ಮಿಕತನ ಸರಿಯೇ ನಿಮ್ಮ ಅನಿಸಿಕೆ ಏನು? ಬರೆಯಿರಿ. (2)
3. ಮಕ್ಕಳ ಹಕ್ಕುಗಳು ಯಾವುವು? (2)

### III

1. ಜಲಜಳ ಮಗ ಯಾರು (1)
2. 'ಗಿಡವಾಗಿ ಬಗ್ಗದ್ದು ಮರವಾಗಿ ಬಗ್ಗೀತೆ' ಈ ಗಾದೆಯನ್ನು ವಿಸ್ತರಿಸಿ ಬರೆಯಿರಿ. (2)
3. ಗಿಡವಾಗಿ ಬಗ್ಗದ್ದು ಕಥೆಯ ಆಧಾರದಲ್ಲಿ ಜಗದೀಶನ ದಿನಚರಿಯನ್ನು ಬರೆಯಿರಿ. (2)

### IV

1. 'ಮಾವಿನ ಹಣ್ಣು ನಿನಗೆ ಬೇಡವಾದರೆ ನನಗೆ ಬೇಕು'ಎಂದವರು ಯಾರು? (ಜಾನ್, ರವಿ, ಅಮ್ಮ) (1)
2. ರವಿ ಅಮ್ಮ ಮಾಡಿದ್ದು ಸರಿಯೇ? ರವಿಯ ಜಾಗದಲ್ಲಿ ನೀವಿರುತ್ತಿದ್ದರೆ ನಿಮ್ಮ ಪ್ರತಿಕ್ರಿಯೆ ಏನು? ಬರೆಯಿರಿ? (2)
3. ಹುಟ್ಟು ಹಬ್ಬದ ದಿನಾಚರಣೆಯ ವಿಚಾರವನ್ನು ಗೆಳೆಯನಿಗೆ ತಿಳಿಸಲು ದೂರವಾಣಿ ಕರೆಯನ್ನು ಮಾಡಿದಿರಿ. ಆಗ ನೀವು ನಿಮ್ಮ ಗೆಳೆಯನೊಂದಿಗೆ ನಡೆಸಿದ ಸಂಭಾಷಣೆಯನ್ನು ಬರೆಯಿರಿ. (2)

# 4. ಸತ್ಯವೇ ನಿತ್ಯ

ಬಾಳಿಗೆ ಒಂದು ನಂಬಿಕೆ ಬೇಕು. ನಂಬಿಕೆಗೆ ಆದರ್ಶವೆ ಆಧಾರವಾಗಿದೆ. ಆದರ್ಶಗಳೇ ಬದುಕಿನ ದಾರಿದೀಪಗಳು. ಆ ಬೆಳಕಲ್ಲಿ ಮುನ್ನಡೆದಾಗ ಬದುಕು ಸುಂದರವಾಗುವುದು. ಅಂತಹ ಆದರ್ಶಗಳಿರುವ ಗಾಂಧೀಜಿ ಮತ್ತು ಗೋಖಲೆ ಅವರ ಬದುಕಿನ ಘಟನೆಗಳನ್ನು ಹಾಗೂ ಕಥನ ಕವನವನ್ನು ಈ ಘಟಕದಲ್ಲಿ ಪರಿಚಯಿಸಲಾಗಿದೆ. ಉದ್ದೇಶಗಳನ್ನು, ಭಾಷಾ ಕೌಶಲಗಳನ್ನು ಗಳಿಸಲು ನೆರವಾಗುವಿರಲ್ಲವೇ?

## ಕಲಿಕಾ ಸಾಧನೆಗಳು

- ಘಟನೆಗಳು, ದೃಶ್ಯಗಳು ಮೊದಲಾದುವುಗಳನ್ನು ವಿಶ್ಲೇಷಿಸಿ ಸೂಕ್ತವಾದ ಭಾಷೆಯಲ್ಲಿ ವಿವರಿಸುವುದು ಮತ್ತು ಬರೆಯುವುದು.
- ಕಥೆ, ಕವಿತೆ, ವಿವರಣೆ, ವರ್ಣನೆ, ಮೊದಲಾದವುಗಳನ್ನು ಆಲಿಸಿ ಮತ್ತು ಓದಿ ತನ್ನದೇ ಆದ ರೀತಿಯಲ್ಲಿ ಹೇಳುವುದು ಮತ್ತು ಬರೆಯುವುದು.
- ಕವಿತೆಯನ್ನು ಅರ್ಥೈಸಿಕೊಂಡು ರಾಗ, ತಾಳ, ಭಾವಗಳನ್ನು ಪರಿಗಣಿಸಿ ಹಾಡುವುದು.
- ಪಾಠಭಾಗವನ್ನು ವ್ಯವಹಾರ ರೂಪಕ್ಕೆ ತಕ್ಕಂತೆ ನಿರರ್ಗಳವಾಗಿ, ಸ್ವರಭಾರ ಮತ್ತು ಉಚ್ಚಾರಸ್ಪಷ್ಟತೆಯೊಂದಿಗೆ ಓದುವುದು.
- ಕಥೆ ಮತ್ತು ಕವಿತೆಗಳ ಸಾಲುಗಳ ಅರ್ಥವನ್ನು ತಿಳಿದುಕೊಂಡು ಪದಸೌಂದರ್ಯವನ್ನು ಆಸ್ವಾದಿಸಿ ಆಶಯವನ್ನು ಹೇಳುವುದು ಮತ್ತು ಬರೆಯುವುದು.
- ಓದಿ ಆಸ್ವಾದಿಸಿದ ಕಥೆ, ಕವಿತೆ ಮೊದಲಾದುವುಗಳನ್ನು ಪಾತ್ರಾಭಿನಯ, ಮೂಕಾಭಿನಯ, ಸಂಭಾಷಣೆಗಳ ಮೂಲಕ ಮಂಡಿಸುವುದು.
- ತನ್ನ ಮತ್ತು ಇತರರ ರಚನೆಗಳ ಮೌಲ್ಯ ನಿರ್ಣಯ ಮಾಡುವ ಮಾನದಂಡಗಳನ್ನು ರೂಪಿಸುವುದು ಮತ್ತು ಅವುಗಳ ಸಹಾಯದಿಂದ ಮೌಲ್ಯ ನಿರ್ಣಯ ಮಾಡುವುದು.
- ಪಾಠಭಾಗದಲ್ಲಿ ಬಳಕೆಯಾದ ಪದಗಳನ್ನು ವಿಂಗಡಿಸಿ ಬರೆಯುವುದು ಮತ್ತು ಸೇರಿಸಿ ಬರೆಯುವುದು.
- ಓದುವ ಮೂಲೆ, ವಾಚನಾಲಯ ಮತ್ತು ಇತರೆಡೆಗಳಿಂದ ಲಭಿಸುವ ಓದುವ ಸಾಮಗ್ರಿಗಳನ್ನು ಓದಿ ದೊರೆತ ಅನುಭವಗಳನ್ನು ವಿಭಿನ್ನ ರೀತಿಯಲ್ಲಿ ಹಂಚಿಕೊಳ್ಳುವುದು.
- ಓದಿದ, ಆಲಿಸಿದ ವ್ಯವಹಾರ ರೂಪದ ಆಶಯವನ್ನು ತಿಳಿದುಕೊಂಡು ಇನ್ನೊಂದು ವ್ಯವಹಾರ ರೂಪವಾಗಿ ಬದಲಾಯಿಸುವುದು.
- ಮಾಹಿತಿ ತಂತ್ರಜ್ಞಾನವನ್ನು (ICT) ಉಪಯೋಗಿಸಿ, ಕೇಳಿಯೂ ನೋಡಿಯೂ ಆಶಯವನ್ನು ತಿಳಿದುಕೊಂಡು ಸ್ವಂತ ರಚನೆ ಮಾಡುವುದು ಮತ್ತು ಮಂಡಿಸುವುದು.
- ಪದಪ್ರಯೋಗ, ಭಾಷಾ ಪ್ರಯೋಗ, ಆಶಯ ಮೊದಲಾದವುಗಳನ್ನು ತನ್ನ ರಚನೆಯಲ್ಲಿ ಬಳಸಿಕೊಳ್ಳುವುದು.
- ಪತ್ರಿಕಾವಾರ್ತೆಗಳನ್ನು ಓದಿ ಮತ್ತು ಭಾಷಣಗಳನ್ನು ಆಲಿಸಿ ವಿಶ್ಲೇಷಿಸಿ ಅಭಿಪ್ರಾಯಗಳನ್ನು ಹೇಳುವುದು ಮತ್ತು ಬರೆಯುವುದು.

# ಯೂನಿಟ್ ಗ್ರಿಡ್

**ಯೂನಿಟ್ 4 : ಸತ್ಯವೇ ನಿತ್ಯ** ಸಮಯ : 12+12 ಪಿರಿಯಡ್‌ಗಳು

| ಪಾಠದ ಹೆಸರು | ಆಶಯ/ ಉದ್ದೇಶಗಳು | ಪ್ರಕ್ರಿಯೆ | ಪೂರಕ ಸಾಮಗ್ರಿಗಳು | ಮೌಲ್ಯನಿರ್ಣಯ |
|---|---|---|---|---|
| 1. ಕಸ ಗುಡಿಸಿದ ಗಾಂಧೀಜಿ | • ನಮ್ಮ ಸುತ್ತಲಿನ ಪರಿಸರವನ್ನು ನಾವೇ ಶುಚಿಯಾಗಿರಿಸಬೇಕು.<br>• ಗಾಂಧೀಜಿಯವರು ಸ್ವಚ್ಛತೆಯ ಬಗ್ಗೆ ಅತೀವ ಕಾಳಜಿ ಹೊಂದಿದ್ದರು.<br>• ಕಸ ಗುಡಿಸುವುದು ಒಂದು ನಾಚಿಕೆಗೇಡಿನ ಕೆಲಸವಲ್ಲ<br>• ಭಾಷಣ ಪ್ರಾವೀಣ್ಯ | • ಗದ್ಯವನ್ನು ಉಚ್ಚಾರ ಸ್ಪಷ್ಟತೆಯಿಂದ ಸರಾಗವಾಗಿ ಓದುವುದು.<br>• ಆಶಯ ಗ್ರಹಣ ಮಾಡಿ ಪ್ರಶ್ನೆಗಳಿಗೆ ಉತ್ತರಿಸುವುದು.<br>• ಪದಗಳನ್ನು ಕ್ರಮೀಕರಿಸಿ ವಾಕ್ಯಗಳನ್ನು ಬರೆಯುವುದು.<br>• ವಿಷಯ ಸಂಗ್ರಹಿಸಿ ಭಾಷಣ ಸಿದ್ಧಪಡಿಸುವುದು.<br>• ದಿನಚರಿ ಬರೆಯುವುದು. | • ದಾರಿದೀಪ ಸಿ.ಡಿ.<br>• ಪಠ್ಯ ಪುಸ್ತಕ<br>• ಮಹಾತ್ಮರ ಜೀವನ ಚರಿತ್ರೆ | • ಭಾಷಣ<br>• ಘೋಷಣಾ ವಾಕ್ಯ<br>• ಅಭಿಪ್ರಾಯ ಮಂಡನೆ<br>• ದಿನಚರಿ |
| 2. ಸತ್ಯನಿಷ್ಠ ಬಾಲಕ | • ನಾವು ಸತ್ಯವನ್ನು ಹೇಳಲು ಹಿಂಜರಿಯಬಾರದು.<br>• ಮಹಾಪುರುಷರ ಜೀವನಾದರ್ಶಗಳು ನಮಗೆ ದಾರಿದೀಪವಾಗಿವೆ.<br>• ಜೀವನ ಚರಿತ್ರೆಗಳನ್ನು ಓದಿ ತಿಳಿಯುವುದರಿಂದ ನಮ್ಮ ಜೀವನವನ್ನು ಉತ್ತಮಪಡಿಸಬಹುದು. | • ಗದ್ಯವನ್ನು ಉಚ್ಚಾರಸ್ಪಷ್ಟತೆಯಿಂದ ಸರಾಗವಾಗಿ ಓದುವುದು.<br>• ಆಶಯ ಗ್ರಹಣ ಮಾಡಿ ಪ್ರಶ್ನೆಗಳಿಗೆ ಉತ್ತರ ಬರೆಯುವುದು.<br>• ಪದಗಳನ್ನುಪಯೋಗಿಸಿ ವಾಕ್ಯ ರಚಿಸುವುದು.<br>• ಅನುಭವ ಟಿಪ್ಪಣಿ ಬರೆಯುವುದು.<br>• ಕಥೆಯನ್ನು ಸಂಭಾಷಣೆಯಾಗಿ ಬರೆಯುವುದು.<br>• ಆಲ್ಬಂ ತಯಾರಿಸುವುದು. | • ದಾರಿದೀಪ<br>• ಪಠ್ಯ ಪುಸ್ತಕ<br>• ಮಹಾತ್ಮರ ಜೀವನ ಚರಿತ್ರೆ ಪುಸ್ತಕಗಳು<br>• ಮಹಾತ್ಮರ ಚಿತ್ರಗಳು, ಜೀವನದ ಘಟನೆಗಳು | • ವಾಕ್ಯ ರಚನೆ<br>• ಓದುವುದು<br>• ಅನುಭವ ಟಿಪ್ಪಣಿ<br>• ಸಂಭಾಷಣೆ<br>• ಆಲ್ಬಂ (ಸಂಗ್ರಹಗಳು) |

# ಯೂನಿಟ್ ಗ್ರಿಡ್

**ಯೂನಿಟ್ 4 : ಸತ್ಯವೇ ನಿತ್ಯ** ಸಮಯ : 16 ಪಿರಿಯಡ್‌ಗಳು

| ಪಾಠದ ಹೆಸರು | ಆಶಯ/ ಉದ್ದೇಶಗಳು | ಪ್ರಕ್ರಿಯೆ | ಪೂರಕ ಸಾಮಗ್ರಿಗಳು | ಮೌಲ್ಯನಿರ್ಣಯ |
|---|---|---|---|---|
| 3. ಪುಣ್ಯಕೋಟಿ | • ಕವಿತೆಯನ್ನು ರಾಗ, ತಾಳ, ಭಾವ ದೊಂದಿಗೆ ಹಾಡುವುದು.<br>• ಕಥನ–ಕವನಗಳು, ಆಶಯವನ್ನು ಪರಿಣಾಮಕಾರಿಯಾಗಿ ವರ್ಗಾಯಿಸುತ್ತವೆ.<br>• ಕೊಟ್ಟ ಮಾತಿನಂತೆ ನಡೆಯಬೇಕು ಎಂಬ ಆಶಯವನ್ನು ಪುಣ್ಯ ಕೋಟಿ ಕಥನ–ಕವನವು ಬಿಂಬಿಸುತ್ತದೆ. | • ಪದ್ಯವನ್ನು ರಾಗ, ತಾಳ, ಭಾವ ದೊಂದಿಗೆ ಹಾಡುವುದು.<br>• ಆಶಯ ಗ್ರಹಣ ಮಾಡಿ, ಪ್ರಶ್ನೆಗಳಿಗೆ ಉತ್ತರಿಸುವುದು.<br>• ಪದಗಳನ್ನು ವಿಂಗಡಿಸುವುದು.<br>• ಪಾತ್ರ ಚಿತ್ರಣ ಬರೆಯುವುದು.<br>• ಕವಿತೆಯ ಪಾತ್ರಗಳನ್ನು ಅಭಿನಯಿಸುವುದು.<br>• ಕವಿತೆಯನ್ನು ಗದ್ಯ ರೂಪದಲ್ಲಿ ಬರೆಯುವುದು. | • ದಾರಿ ದೀಪ<br>• ಪಠ್ಯಪುಸ್ತಕ<br>• ICT<br>• ಮುಖವಾಡ<br>• ನಿರ್ಮಾಣ ಸಾಮಗ್ರಿಗಳು | • ಹಾಡುವುದು<br>• ಪಾತ್ರಾಭಿನಯ<br>• ಪಾತ್ರ ಚಿತ್ರಣ<br>• ಗದ್ಯ ರೂಪ |
| | | | | |

# 1. ಕಸ ಗುಡಿಸಿದ ಗಾಂಧೀಜಿ

ನಮ್ಮ ಕೆಲಸವನ್ನು ನಾವೇ ಮಾಡುವುದು ಅವಮಾನವಲ್ಲ, ಯೋಗ್ಯವಾದದ್ದು. ಅದೇ ರೀತಿ ನಮ್ಮ ಪರಿಸರವನ್ನು ಸ್ವಚ್ಛವಾಗಿಡುವುದು. ಇಂತಹ ಆದರ್ಶಗಳನ್ನು ಬಾಳಿನುದ್ದಕ್ಕೂ ಅನುಸರಿಸಿದವರು ಗಾಂಧೀಜಿ. ಅವರ ಬದುಕು ನಮಗೆ ಅನುಕರಣೀಯ ಆದರ್ಶ.

## ಚಟುವಟಿಕೆಗಳು

### ಉತ್ತರಿಸುವ

ಪಾಠಭಾಗದ ಪ್ರಶ್ನೆಗಳಿಗೆ ಮಕ್ಕಳು ವೈಯಕ್ತಿಕವಾಗಿ ಉತ್ತರವನ್ನು ಬರೆದು ಮಂಡಿಸಲಿ. ತರಗತಿಯಲ್ಲಿ ಚರ್ಚಿಸಿ ಸರಿಯಾದ ಉತ್ತರವನ್ನು ತಿಳಿಯಲಿ. ಅಗತ್ಯವಿದ್ದಲ್ಲಿ ಅಧ್ಯಾಪಕರು ಸಹಾಯಮಾಡುವುದು, ಮಕ್ಕಳಿಗೆ ಉತ್ತಮಪಡಿಸುವ ಅವಕಾಶವನ್ನು ನೀಡುವುದು. ಅಧ್ಯಾಪಕರು ಮೌಲ್ಯನಿರ್ಣಯ ಮಂಡಿಸುವುದು.

### ಪದ ರಚಿಸುವ

ಪಾಠ ಪುಸ್ತಕದಲ್ಲಿ ಕೊಟ್ಟಿರುವ ಪದಗಳನ್ನು ಮಾದರಿಯಂತೆ ಬದಲಾಯಿಸಿ ಬರೆಯುವುದು. ಮೊದಲು ವೈಯಕ್ತಿಕವಾಗಿ ಬರೆದು ಇಬ್ಬರ ಗುಂಪಿನಲ್ಲಿ ಮಂಡಿಸುವುದು. ಇದೇ ರೀತಿಯ ಪದಗಳನ್ನು ಬರೆಯಲು ಅಧ್ಯಾಪಕರು ಸಹಾಯ ಮಾಡುವುದು.

| | | | |
|---|---|---|---|
| ದಿನ | ನದಿ | ವನ | ನವ |
| ರಸ | ಸರ | ವಶ | ಶವ |
| ಜಗ | ಗಜ | ಸರ | ರಸ |
| ಕಸುಬು | ಮಸುಕು | ಮರ | ರಮ |
| ಜನುಮ | ಮನುಜ | | |

### ಕ್ರಮೀಕರಿಸಿ ಬರೆಯುವ

ಅಧ್ಯಾಪಕರು ಮಕ್ಕಳಿಂದ ಪಾಠವನ್ನು ಓದಿಸುವುದು. ಬಳಿಕ ಪದಗಳನ್ನು ಓದಿ ಅವುಗಳನ್ನು ಕ್ರಮೀಕರಿಸಿ ವಾಕ್ಯಗಳನ್ನು ಬರೆಯುವುದು.

1. ರವೀಂದ್ರರು ಎದ್ದು ಕೈಕಾಲು ಮುಖ ತೊಳೆದರು.
2. ನಿಮ್ಮ ಮಕ್ಕಳು ನನಗಾಗಿ ತೋರಣ ಕಟ್ಟಿದ್ದಾರೆ.
3. ವಿಶ್ವವಿದ್ಯಾನಿಲಯದಲ್ಲಿ ಸಾವಿರಾರು ಪ್ರಾಚೀನ ಗ್ರಂಥಗಳಿವೆ.
4. ನನ್ನೊಳಗೆ ಗಾಂಧೀಜಿ ಬಿತ್ತಿದ ಈ ಮೌಲ್ಯ ಅದ್ಭುತವಾದುದು.
5. ಅಂದು ಗಾಂಧೀಜಿಯವರ ವಿಶೇಷ ಭಾಷಣ.

**ಚರ್ಚಿಸುವ, ಬರೆಯುವ**

ನಮ್ಮ ಶಾಲೆ ಮತ್ತು ಪರಿಸರ ಶುಚಿಯಾಗಿರಬೇಕಾದರೆ ನಾವೇನು ಮಾಡಬಹುದು? ಅಧ್ಯಾಪಕರು ತರಗತಿಯಲ್ಲಿ ಪ್ರಶ್ನೆಗಳನ್ನು ಕೇಳುವುದು. ಮಕ್ಕಳು ತಮ್ಮ ಉತ್ತರವನ್ನು ಹೇಳಲಿ. ಅದರ ಆಧಾರದಲ್ಲಿ ಚರ್ಚೆ ನಡೆಸುವುದು. ನಮ್ಮ ಮನೆ ಮತ್ತು ಪರಿಸರ ಮಲಿನವಾಗುವುದು ಹೇಗೆ ಎಂಬ ಪ್ರಶ್ನೆಯನ್ನು ಕೇಳಿ ಆ ಮಾಲಿನ್ಯವನ್ನು ತಡೆಯಲು ನಾವೇನು ಮಾಡಬಹುದೆಂಬ ಪ್ರಶ್ನೆಯೊಂದಿಗೆ ಚರ್ಚೆ ಆರಂಭಿಸುವುದು.

**ಭಾಷಣ ತಯಾರಿಸುವ**

ಗಾಂಧೀಜಿಯವರಿಗೆ ಸಂಬಂಧಿಸಿದ ಪುಸ್ತಕಗಳನ್ನು ಮಕ್ಕಳಿಗೆ ಓದಲು ಕೊಡುವುದು. ಮಕ್ಕಳು ಪುಸ್ತಕಗಳನ್ನು ಓದಿ ಅಗತ್ಯವಾದ ಮಾಹಿತಿಗಳನ್ನು ಸಂಗ್ರಹಿಸಲಿ. ಅದನ್ನು ತರಗತಿಯಲ್ಲಿ ಮಂಡಿಸಲಿ. ಅಧ್ಯಾಪಕರು ಅದನ್ನು ಕ್ರೋಡೀಕರಿಸುವುದು. ಅದರ ಆಧಾರದಲ್ಲಿ ಮಕ್ಕಳು ಗುಂಪಿನಲ್ಲಿ ಭಾಷಣವನ್ನು ತಯಾರಿಸಲಿ. ಅದನ್ನು ತರಗತಿಯಲ್ಲಿ ಮಂಡಿಸಿ ಉತ್ತಮಪಡಿಸಲಿ. ಬಳಿಕ ವೈಯಕ್ತಿಕವಾಗಿ ಭಾಷಣವನ್ನು ತಯಾರಿಸಲಿ. ಸೂಕ್ತ ಸಂದರ್ಭಗಳಲ್ಲಿ ಭಾಷಣ ಮಾಡಲು ಅವಕಾಶ ಒದಗಿಸುವುದು.

**ಘೋಷಣ ವಾಕ್ಯ ತಯಾರಿಸುವ**

ಘೋಷಣವಾಕ್ಯಗಳನ್ನು ತಯಾರಿಸುವ ಎಂದು ಅಧ್ಯಾಪಕರು ತರಗತಿಯಲ್ಲಿ ಸಮಸ್ಯೆಯನ್ನು ಮಂಡಿಸುವುದು. ಘೋಷಣವಾಕ್ಯಗಳು ಹೇಗಿರಬೇಕೆಂಬುದರ ಕುರಿತು ಮಕ್ಕಳಲ್ಲಿ ಪ್ರಶ್ನೆ ಕೇಳುವುದು. ಬಳಿಕ ಮಕ್ಕಳು ವೈಯಕ್ತಿಕವಾಗಿ ಘೋಷಣವಾಕ್ಯಗಳನ್ನು ಬರೆಯಲಿ. ಗುಂಪಿನಲ್ಲಿ ಮಂಡಿಸಲಿ. ಬಳಿಕ ಗುಂಪಿನ ಮಂಡನೆ. ಟೀಚರ್ ವರ್ಷನ್ ಮಂಡಿಸುವುದು ಮಕ್ಕಳು ಅದರ ಆಧಾರದಲ್ಲಿ ತಾವು ಬರೆದುದನ್ನು ಉತ್ತಮಪಡಿಸಿ ಬರೆಯಲಿ.

**ಘೋಷಣ ವಾಕ್ಯ ಹೇಗಿರಬೇಕು?**

- ಸರಳವೂ ಸಂಕ್ಷಿಪ್ತವೂ ಆಗಿರಬೇಕು
- ಆಶಯ ಸ್ಪಷ್ಟತೆ ಇರಬೇಕು
- ಹಿರಿದಾದ ಅರ್ಥವನ್ನು ಕೊಡುವಂತಿರಬೇಕು
- ಪ್ರಾಸ ಬದ್ಧವಾಗಿರಬೇಕು.

**ಮರಗಳ ಬೆಳೆಸಿ, ಪರಿಸರ ಉಳಿಸಿ**

**ಸ್ವಚ್ಛ ಪರಿಸರ, ಸ್ವಚ್ಛ ಸಮಾಜ**

**ಪರಿಸರ ಉಳಿಸಿ, ಸಂತಸ ಗಳಿಸಿ**

**ಓದುವ**

ಇಲ್ಲಿ ರವೀಂದ್ರನಾಥ ಠಾಗೋರರ ವ್ಯಕ್ತಿ ಪರಿಚಯವನ್ನು ಸಂಕ್ಷಿಪ್ತವಾಗಿ ಕೊಡಲಾಗಿದೆ. ಮಕ್ಕಳು ಇದನ್ನು ಓದುವುದು ಇದೇ ರೀತಿ, ಜವಹರಲಾಲ್ ನೆಹರೂ, ವಲ್ಲಭ ಬಾಯಿ ಪಟೇಲ್ ಮೊದಲಾದವರ ವ್ಯಕ್ತಿ ಪರಿಚಯವನ್ನು ಅಧ್ಯಾಪಕರು ಮಕ್ಕಳಿಗೆ ನೀಡುವುದು, ಮುಂದುವರಿದ ಚಟುವಟಿಕೆಯಾಗಿ ಮಹಾತ್ಮರ ಜೀವನ ಚರಿತ್ರೆಯನ್ನು ಓದಲು ನೀಡುವುದು.

### ಸಂಗ್ರಹಿಸಿ ಬರೆಯುವ

ಮಹಾನ್ ವ್ಯಕ್ತಿಗಳ ಜೀವನ ಚರಿತ್ರೆ ಅಥವಾ ಅವರ ಕುರಿತಾದ ಪುಸ್ತಕಗಳನ್ನು ವಾಚನಾಲಯದಿಂದ ಸಂಗ್ರಹಿಸಿ ಮಕ್ಕಳಿಗೆ ನೀಡುವುದು. ಮಕ್ಕಳು ಪುಸ್ತಕವನ್ನು ಓದಿ ಆ ವ್ಯಕ್ತಿಯ ಜೀವನದ ಪ್ರಧಾನ ಘಟನೆಗಳನ್ನು ಆಯ್ದು ಬರೆಯಲಿ. ಅದನ್ನು ತರಗತಿಯಲ್ಲಿ ಮಂಡಿಸಲಿ. ಗುಂಪಿನ ಮಂಡನೆಯ ನಂತರ, ಅದನ್ನು ಉತ್ತಮಪಡಿಸಲಿ. ಅಧ್ಯಾಪಕರು ತಮ್ಮ ರಚನೆಯನ್ನು ಮಂಡಿಸುವುದು. ಮಕ್ಕಳ ರಚನೆಗಳನ್ನು ಒಟ್ಟು ಮಾಡಿ ಸಂಚಿಕೆ ತಯಾರಿಸಿ ತರಗತಿಯಲ್ಲಿ ಪ್ರದರ್ಶಿಸುವುದು.

### ದಿನಚರಿ ಬರೆಯುವ

ಮೂರನೇ ತರಗತಿಯಲ್ಲಿ ದಿನಚರಿಯ ಮಾದರಿಯನ್ನು ನೀಡಲಾಗಿದೆ. ಅದನ್ನು ಮಕ್ಕಳಿಗೆ ಓದಲು ನೀಡುವುದು. ಬಳಿಕ ದಿನಚರಿಯು ಹೇಗಿರಬೇಕು ಎಂಬ ಪ್ರಶ್ನೆಯನ್ನು ತರಗತಿಯಲ್ಲಿ ಕೇಳುವುದು. ಮಕ್ಕಳ ಅಭಿಪ್ರಾಯವನ್ನು ಅಧ್ಯಾಪಕರು ಕ್ರೋಡೀಕರಿಸಿ ಕರಿಹಲಗೆಯಲ್ಲಿ ಬರೆಯುವುದು. ಅದರ ಆಧಾರದಲ್ಲಿ ಮಕ್ಕಳಿಂದ ದಿನಚರಿ ಬರೆಸುವುದು. ಬಳಿಕ ಮಹಾತ್ಮರ ದಿನಚರಿಯ ಭಾಗವನ್ನು ತರಗತಿಯಲ್ಲಿ ಓದಲು ನೀಡುವುದು.

### ದಿನಚರಿ ಹೇಗಿರಬೇಕು?

- ದೈನಂದಿನ ವಿಚಾರಗಳನ್ನು ದಾಖಲಿಸಿರಬೇಕು.
- ಅನುಭವಗಳನ್ನು ತನ್ನದೇ ಆದ ರೀತಿಯಲ್ಲಿ ಬರೆದಿಡಬೇಕು.
- ವಿಚಾರಗಳನ್ನು ವಿಮರ್ಶಾತ್ಮಕ ದೃಷ್ಟಿಯಿಂದ ನೋಡಬೇಕು.
- ವಸ್ತುನಿಷ್ಠವಾಗಿರಬೇಕು.

# 2. ಸತ್ಯನಿಷ್ಠ ಬಾಲಕ

ಸತ್ಯಕ್ಕೆ ಸಾವಿಲ್ಲ. ಸುಳ್ಳಿನಿಂದ ಯಾವತ್ತೂ ಸತ್ಯವನ್ನು ಮುಚ್ಚಿಹಾಕಲು ಸಾಧ್ಯವಿಲ್ಲ. ಸತ್ಯ ಎಂದಾದರೂ ಹೊರಗೆ ಬಂದೇ ಬರುತ್ತದೆ. ಸತ್ಯಕ್ಕಾಗಿ ತಮ್ಮನ್ನೇ ಮುಡಿಪಾಗಿಟ್ಟ ಹಲವು ಮಹಾತ್ಮರು ಬದುಕಿ ಬೆಳೆದ ದೇಶ ನಮ್ಮದು. ನಮ್ಮ ಹಲವು ರಾಷ್ಟ್ರನಾಯಕರು ಸತ್ಯ ಮತ್ತು ಅಹಿಂಸೆಗಾಗಿ ಕಷ್ಟಗಳನ್ನು ಸಹಿಸಿದ್ದಾರೆ.

ಚಿಕ್ಕ ಮಕ್ಕಳಲ್ಲಿ ಸತ್ಯ ಮತ್ತು ಅಹಿಂಸೆಯನ್ನು ಬೆಳೆಸುವ ದೃಷ್ಟಿಕೋನದಿಂದ ಈ ಪಾಠಗಳನ್ನು ಆರಿಸಿಕೊಳ್ಳಲಾಗಿದೆ. ಅಧ್ಯಾಪಕರು ಸತ್ಯಕ್ಕಾಗಿ ತಮ್ಮ ಜೀವನವನ್ನೇ ಮುಡಿಪಾಗಿಟ್ಟ ಮಹಾನುಭಾವರ ಕತೆಗಳನ್ನು, ಜೀವನ ಚರಿತ್ರೆಗಳನ್ನು ಮಕ್ಕಳಿಗೆ ಹೇಳುವುದು, ಪುಸ್ತಕಗಳನ್ನು ಓದುವ ಮೂಲೆಯಲ್ಲಿ ಒದಗಿಸುವುದು

ಉದಾ: ಸತ್ಯ ಹರಿಶ್ಚಂದ್ರ, ಗಾಂಧೀಜಿ, ಶ್ರೀರಾಮ, ಶಿಬಿ ಚಕ್ರವರ್ತಿ ಮುಂತಾದವರು.

ಪಾಠವನ್ನು ಅಧ್ಯಾಪಕರು ಮಕ್ಕಳಿಂದ ಓದಿಸುವುದು. ಬಳಿಕ ಅಧ್ಯಾಪಕರಿಂದ ಓದು, ಮಕ್ಕಳಿಗೆ ಆಶಯಗ್ರಹಣವಾಗಿದೆಯೇ ಎಂದು ತಿಳಿಯುವುದಕ್ಕಾಗಿ ಅಧ್ಯಾಪಕರು ಕೆಲವು ಪ್ರಶ್ನೆಗಳನ್ನು ಕೇಳುವುದು, ಅಧ್ಯಾಪಕರು ಓದಿನ ತಂತ್ರಗಳನ್ನು ಅಳವಡಿಸುವುದು.

### ಪದಕೋಶ ತಯಾರಿಸುವ

ಅಧ್ಯಾಪಕರು ಮಕ್ಕಳಿಗೆ ಪಾಠಭಾಗವನ್ನು ಓದಲು ನೀಡುವುದು ಮಕ್ಕಳು ಪಾಠಭಾಗವನ್ನು ಗುಂಪಿನಲ್ಲಿ ಓದಲಿ ಕಠಿಣ ಪದಗಳಿಗೆ ಗೆರೆಯನ್ನು ಎಳೆಯಲಿ. ಬಳಿಕ ತರಗತಿಯಲ್ಲಿ ಮಂಡಿಸಲಿ. ಅಧ್ಯಾಪಕರು ಆ ಪದಗಳನ್ನು ಕರಿಹಲಗೆಯಲ್ಲಿ ಬರೆಯುವುದು. ಮಕ್ಕಳಿಗೆ ಅರ್ಥಕೋಶವನ್ನು ನೀಡುವುದು. ಮಕ್ಕಳು ಅರ್ಥಕೋಶದ ಸಹಾಯದಿಂದ ಪದಗಳ ಅರ್ಥವನ್ನು ಕಂಡುಹಿಡಿದು ಬರೆಯಲಿ. ಪದಗಳನ್ನು ಅಕಾರಾದಿಯಾಗಿ ಬರೆದು ಅರ್ಥಕೋಶ ತಯಾರಿಸಲಿ.

### ಪದ ಸಂಗ್ರಹಿಸಿ ಬರೆಯುವ

ಬಿಕ್ಕಿ ಬಿಕ್ಕಿ ಅಳು, ಮೆಲ್ಲ ಮೆಲ್ಲನೆ ಬರು, ಬೇಗ ಬೇಗನೆ ನಡೆ ಇತ್ಯಾದಿ ಪದ ಪ್ರಯೋಗವನ್ನು ನಾವು ಕೇಳಿದ್ದೇವೆ. ಈ ರೀತಿಯ ಪದಗಳನ್ನು ಮಕ್ಕಳು ಸಂಗ್ರಹಿಸಲಿ.

ಉದಾ : ಬಿಕ್ಕಿ ಬಿಕ್ಕಿ, ಮೆಲ್ಲ ಮೆಲ್ಲನೆ, ಬೇಗ ಬೇಗನೆ, ಮಾಡಿ ಮಾಡಿ, ಬರ ಬರುತ್ತಾ, ಹೇಳಿ ಹೇಳಿ, ನಡೆ ನಡೆದು, .....

### ವಾಕ್ಯ ರಚಿಸುವ

ಕೊಟ್ಟಿರುವ ಗದ್ಯವನ್ನು ಮಕ್ಕಳೇ ಓದಲಿ. ಅಡಿಗೆರೆ ಎಳೆದ ಪದಗಳ ಅರ್ಥವನ್ನು ತಿಳಿದುಕೊಳ್ಳಲಿ. ಅಧ್ಯಾಪಕರು ಅಗತ್ಯ ಸಹಾಯ ಮಾಡುವುದು, ಬಳಿಕ ಮಕ್ಕಳು ಆ ಪದಗಳನ್ನು ಪ್ರಯೋಗಿಸಿ ಹೊಸ ಪದಗಳನ್ನು ರಚಿಸುವುದು.

| | | |
|---|---|---|
| ಜಾಣ | : | ರಮೇಶನು ಜಾಣ ಹುಡುಗ |
| ಪ್ರಭಾವ | : | ಗಾಂಧೀಜೀಯವರ ಪ್ರಭಾವದಿಂದ ಹಲವಾರು ಮಂದಿ ಅಹಿಂಸೆಯನ್ನು ಸ್ವೀಕರಿಸಿದರು |
| ಅಚ್ಚು ಮೆಚ್ಚು | : | ಗಣೇಶನು ಅಧ್ಯಾಪಕರ ಅಚ್ಚುಮೆಚ್ಚಿನ ವಿಧ್ಯಾರ್ಥಿಯಾಗಿದ್ದನು. |
| ಬಹುಮಾನ | : | ಕಂಬಳದಲ್ಲಿ ಪ್ರಥಮ ಬಹುಮಾನ ಪಡೆದವರಿಗೆ ನಗದು ಹಣ ನೀಡಲಾಗುತ್ತದೆ. |
| ಹೊಗಳಿದರು | : | ಬಾಲಕನ ನಿಷ್ಠೆಯನ್ನು ಕಂಡ ಮುಖ್ಯೋಪಾಧ್ಯಾಯರು ಅವನನ್ನು ಹೊಗಳಿದರು. |

**ಅನುಭವ ಬರೆಯುವ**

ಅಧ್ಯಾಪಕರು ತರಗತಿಯ ಮಕ್ಕಳಲ್ಲಿ ಅವರ ಅನುಭವವನ್ನು ಬರೆಯಲು ಹೇಳುವುದು. ಗುಂಪಿನಲ್ಲಿ ಮಂಡಿಸಲಿ. ಬಳಿಕ ಅಧ್ಯಾಪಕರು ತಮ್ಮ ಬಾಲ್ಯದ ಅನುಭವವನ್ನು ತರಗತಿಯಲ್ಲಿ ಹೇಳುವುದು ಬಳಿಕ ಮಕ್ಕಳು ಅನುಭವವನ್ನು ಉತ್ತಮಪಡಿಸಿ ಬರೆಯಲಿ. ಅದನ್ನು ಕ್ರೋಡೀಕರಿಸಿ ಬಾಲ್ಯದ ಅನುಭವ ಸಂಚಿಕೆ ತಯಾರಿಸುವುದು.

**ಸಂಭಾಷಣೆ ಬರೆಯುವ**

ಮಕ್ಕಳಲ್ಲಿ ಪಾಠಭಾಗವನ್ನು ಓದಲು ಹೇಳುವುದು, ಮಕ್ಕಳು ವಾಕ್ಯಗಳನ್ನು ಗುರುತಿಸಲಿ. ಸನ್ನಿವೇಶಕ್ಕನುಗುಣವಾಗಿ ಪಾತ್ರಗಳು ಏನೇನು ಮಾತನಾಡಿರಬಹುದು ಎಂಬುದನ್ನು ಹೇಳಲಿ. ಗುಂಪಿನಲ್ಲಿ ಬರೆಯಲಿ ಪರಸ್ಪರ ಬದಲಾಯಿಸಿ ಓದಿ ಉತ್ತಮ ಪಡಿಸಲಿ. ಅಧ್ಯಾಪಕರು ಅಗತ್ಯ ಸಹಾಯ ಮಾಡುವುದು.

**ಶೀರ್ಷಿಕೆ ಬರೆಯುವ**

'ಸತ್ಯನಿಷ್ಠ ಬಾಲಕ' ಎಂಬ ಶೀರ್ಷಿಕೆ ಆ ಪಾಠಕ್ಕೆ ಸೂಕ್ತವಾಗಿದೆಯೇ ಯಾಕೆ? ಎಂದು ಅಧ್ಯಾಪಕರು ಮಕ್ಕಳಲ್ಲಿ ಕೇಳುವುದು. ಮಕ್ಕಳು ತರಗತಿಯಲ್ಲಿ ಚರ್ಚೆ ನಡೆಸಲಿ. ಚರ್ಚೆಯಲ್ಲಿ ಪಾಠಕ್ಕೆ ಸೂಕ್ತವಾದ ಬೇರೊಂದು ಶೀರ್ಷಿಕೆಯನ್ನು ಸೂಚಿಸಲು ಹೇಳುವುದು, ಅಧ್ಯಾಪಕರು ಅಗತ್ಯ ಸಹಾಯ ಮಾಡುವುದು.

1. ಸತ್ಯಮೇವ ಜಯತೇ
2. ಬಹುಮಾನ ಅಲ್ಲ ದಂಡ

**ಆಲ್ಬಂ ತಯಾರಿಸುವ**

ಪ್ರಸಿದ್ಧ ವ್ಯಕ್ತಿಗಳ ಬಾಲ್ಯಕಾಲದ ಚಿತ್ರಗಳನ್ನು ಸಂಗ್ರಹಿಸಲು ಮಕ್ಕಳಲ್ಲಿ ಹೇಳುವುದು. ಅಧ್ಯಾಪಕರು ತಮ್ಮ ಸಂಗ್ರಹದಲ್ಲಿದ್ದ ಚಿತ್ರಗಳನ್ನು ತರಗತಿಯಲ್ಲಿ ಪ್ರದರ್ಶಿಸುವುದು. ಮಕ್ಕಳು ತಂದ ಚಿತ್ರಗಳನ್ನು ಒಟ್ಟುಗೂಡಿಸಿ ತರಗತಿ ಆಲ್ಬಂ ತಯಾರಿಸಲಿ.

# 3. ಪುಣ್ಯಕೋಟಿ

ಕೊಟ್ಟ ಮಾತನ್ನು ಪಾಲಿಸುವುದಕ್ಕಾಗಿ ಯಾವುದೇ ಕಷ್ಟವನ್ನೂ ಸಹಿಸಿ ಕೊನೆಗೆ ತನ್ನ ಪ್ರಾಣವನ್ನೂ ಬಿಡಲು ಸಿದ್ಧವಾಗುವಂತಹ ಸನ್ನಿವೇಶಗಳು ಜನಪದ ಕಥೆಗಳಲ್ಲಿ ಕಂಡುಬರುತ್ತವೆ. ಇದಕ್ಕೆ ಸಂಬಂಧಿಸಿದಂತೆ ಹಲವಾರು ಪುರಾಣ ಕಥೆಗಳು ಇವೆ. ಇವನ್ನು ಮಕ್ಕಳು ಕೇಳಿರಬಹುದು. ಉದಾ ದಾನಶೂರ ಕರ್ಣ,ಬಲಿ ಚಕ್ರವರ್ತಿ, ಮೊದಲಾದವರು. ಪುಣ್ಯಕೋಟಿ ಕೂಡಾ ಇಂತಹ ಕಥೆಗಳ ಸಾಲಿಗೆ ಸೇರುತ್ತದೆ. ಕೊಟ್ಟ ಮಾತಿಗಾಗಿ ತನ್ನ ಪ್ರಾಣವನ್ನೂ ಕೊಡಲು ಸಿದ್ಧವಾದ ಮೂಕಪ್ರಾಣಿಯ ಕಥೆಯನ್ನು ಈ ಕಥನಕವನದಲ್ಲಿ ಹೇಳಲಾಗಿದೆ.

### ಹಾಡುವ

ಮಕ್ಕಳು ಪದ್ಯವನ್ನು ಅವರದೇ ಆದ ರಾಗದಲ್ಲಿ ಹಾಡಲಿ. ಒಂದು ಗುಂಪಿನವರು ಹಾಡುವಾಗ ಇನ್ನೊಂದು ಗುಂಪಿನವರು ಮೌಲ್ಯನಿರ್ಣಯ ಮಾಡಲಿ. ಮೌಲ್ಯನಿರ್ಣಯ ಸೂಚಕಗಳನ್ನು ಮಕ್ಕಳೇ ಕಂಡುಹಿಡಿಯಲಿ.

### ಉತ್ತರಿಸುವ

ಪಾಠಭಾಗದ ಪ್ರಶ್ನೆಗಳಿಗೆ ಮಕ್ಕಳು ವೈಯಕ್ತಿಕವಾಗಿ ಉತ್ತರವನ್ನು ಬರೆದು ಮಂಡಿಸಲಿ. ತರಗತಿಯಲ್ಲಿ ಚರ್ಚಿಸಿ ಸರಿಯಾದ ಉತ್ತರವನ್ನು ತಿಳಿಯಲಿ. ಅಧ್ಯಾಪಕರು ಸಹಾಯ ಮಾಡುವುದು.

### ವಿಂಗಡಿಸಿ ಬರೆಯುವ

ಪಾಠಭಾಗದಲ್ಲಿ ನೀಡಿರುವ ಪದಗಳನ್ನು ಮಕ್ಕಳು ಮಾದರಿಯಂತೆ ವಿಂಗಡಿಸಿ ಬರೆಯಲಿ.

1. ತಿನ್ನುವೆನು + ಎಂಬ
2. ಕಂಡೆನು + ಇರುವನು
3. ಕೊಳಲನು + ಊದುತ
4. ಕೊಡುವೆನು + ಎನ್ನುತ
5. ದೊಡ್ಡಿಯ + ಒಳಗೆ

### ಇಷ್ಟವಾದ ಪಾತ್ರ

ಪದ್ಯವನ್ನು ಮಕ್ಕಳು ರಾಗವಾಗಿ ಹಾಡಲಿ. ಅಧ್ಯಾಪಕರು ಆಶಯ ಗ್ರಹಣಕ್ಕಾಗಿ ಕೆಲವು ಪ್ರಶ್ನೆಗಳನ್ನು ಕೇಳುವುದು, ಪದ್ಯದಲ್ಲಿ ಬರುವ ಪಾತ್ರಗಳ ಕುರಿತಾಗಿ ಕೇಳುವುದು. ಅವುಗಳಲ್ಲಿ ನಿಮಗೆ ಇಷ್ಟವಾದ ಪಾತ್ರ ಯಾವುದು ಯಾಕೆ ಎಂದು ಕೇಳುವುದು. ಮಕ್ಕಳು ವೈಯಕ್ತಿಕವಾಗಿ ಬರೆಯಲಿ. ಗುಂಪಿನಲ್ಲಿ ಮಂಡಿಸಲಿ. ಅಧ್ಯಾಪಕರ ಸಹಾಯದೊಂದಿಗೆ ಉತ್ತಮ ಪಡಿಸುವುದು.

**ಊಹಿಸಿ ಹೇಳುವ**

ತರಗತಿಯಲ್ಲಿ ಪುಣ್ಯಕೋಟಿ ತಾನು ಕೊಟ್ಟ ಮಾತಿನಂತೆ ಹುಲಿಯ ಬಳಿಗೆ ಹೋಗದಿರುತ್ತಿದ್ದರೆ ಏನಾಗುತ್ತಿತ್ತು ಎಂಬ ಪ್ರಶ್ನೆಯನ್ನು ಕೇಳುವುದು. ಮಕ್ಕಳ ಉತ್ತರವನ್ನು ಅಧ್ಯಾಪಕರು ಕ್ರೋಡೀಕರಿಸುವುದು. ಮಕ್ಕಳಿಗೆ ವಿಭಿನ್ನ ರೀತಿಯಲ್ಲಿ ಉತ್ತರಿಸಲು ಸಹಾಯಕವಾಗುವ ರೀತಿಯಲ್ಲಿ ಅಧ್ಯಾಪಕರು ಪ್ರಶ್ನೆಗಳನ್ನು ಕೇಳುವುದು.

- ಪುಣ್ಯಕೋಟಿ ಗೊಲ್ಲನನ್ನು ಕರೆದುಕೊಂಡು ಹೋಗುತ್ತಿದ್ದರೆ
- ಪುಣ್ಯಕೋಟಿಯ ಮೊರೆಗೆ ಮೆಚ್ಚಿ ದೇವರು ಪ್ರತ್ಯಕ್ಷನಾದರೆ
- ಪುಣ್ಯಕೋಟಿಯನ್ನು ಕಾಣದೆ ಹುಡುಕುತ್ತಾ ಬರುತ್ತಿದ್ದ ಹುಲಿಯನ್ನು ಬೇಡ ಕೊಲ್ಲುತ್ತಿದ್ದರೆ
- 

**ಕ್ರಮೀಕರಿಸಿ ಬರೆಯುವ**

ಕೊಟ್ಟಿರುವ ವಾಕ್ಯಗಳನ್ನು ಓದಿ ಪದ್ಯದ ಆಶಯಕ್ಕೆ ಅನುಸಾರವಾಗಿ ಮಕ್ಕಳು ಕ್ರಮೀಕರಿಸಿ ಬರೆಯಲಿ. ಮಕ್ಕಳಿಗೆ ಪದ್ಯದ ಆಶಯವನ್ನು ಪೂರ್ತಿಯಾಗಿ ಗ್ರಹಿಸಲು ಅಧ್ಯಾಪಕರು ನೆರವಾಗುವುದು.

- ಗೊಲ್ಲನು ಮಾವಿನ ಮರದ ಕೆಳಗೆ ಕೊಳಲನ್ನೂದುತ್ತಾ ಹಸುಗಳನ್ನು ಬಳಿಗೆ ಕರೆದನು.
- ಗೊಲ್ಲನ ಧ್ವನಿಯನ್ನು ಕೇಳಿ ಎಲ್ಲ ದನಗಳು ಬಂದು ನಿಂತುವು.
- ಪುಣ್ಯಕೋಟಿ ತನ್ನ ಕಂದನ ಬಗ್ಗೆ ಯೋಚಿಸುತ್ತಾ ಕಾಡಿನ ದಾರಿಯಲ್ಲಿ ಬರುತ್ತಿತ್ತು.
- ಹಟ್ಟಿಯಲ್ಲಿರುವ ಕಂದನಿಗೆ ಒಂದು ನಿಮಿಷದಲ್ಲಿ ಹಾಲು ಕೊಟ್ಟು ಬರುತ್ತೇನೆ.
- ಅಮ್ಮ ನೀನು ಸಾಯಬೇಡ ನನ್ನನ್ನು ತಬ್ಬಲಿಯನ್ನಾಗಿ ಮಾಡಬೇಡ.
- ನನ್ನ ದೇಹದಲ್ಲಿರುವ ಮಾಂಸವನ್ನು ತಿಂದು, ರಕ್ತವನ್ನು ಕುಡಿದು ನೀನು ಸಂತೋಷದಿಂದಿರು.
- ಹುಲಿಯು ಹಾರಿ ನೆಗೆದು ತನ್ನ ಪ್ರಾಣವನ್ನು ಬಿಟ್ಟಿತು.

**ಆರಿಸಿ ಬರೆಯುವ**

ಪಾಠಭಾಗದಲ್ಲಿ ಕೊಟ್ಟಿರುವ ಪದಗಳನ್ನು ಮಕ್ಕಳು ಓದಿ ಅದಕ್ಕೆ ಸಮಾನವಾದ ಅರ್ಥ ಕೊಡುವ ಪದಗಳನ್ನು ಆರಿಸಿ ಮಾದರಿಯಂತೆ ಬರೆಯಲಿ.

- ಕಾಡು, ಕಾನನ, ಅರಣ್ಯ
- ಗುಹೆ, ಗವಿ
- ಗೋವು, ಹಸು, ದನ
- ಕಣ್ಣು, ನೇತ್ರ, ನಯನ
- ಜನನಿ, ತಾಯಿ, ಅಮ್ಮ
- ಮಗ, ತನಯ, ಪುತ್ರ

## ಬರೆಯುವ

ಮಕ್ಕಳು ಪದ್ಯ ಭಾಗವನ್ನು ಓದಿ ಕೆಳಗೆ ಕೊಡಲಾದ ಮಾತುಗಳನ್ನು ಯಾರು ಯಾರಿಗೆ ಹೇಳಿದರು ಎಂದು ಗುಂಪಿನಲ್ಲಿ ಚರ್ಚಿಸಿ ಹೇಳಲಿ.

1. ಒಂದು ಬಿನ್ನಹ ಹುಲಿಯ ಕೇಳು ಕಂದನಿರುವನು ದೊಡ್ಡಿಯೊಳಗೆ ಈ ಮಾತನ್ನು ಪುಣ್ಯಕೋಟಿಯ ಹುಲಿಯಲ್ಲಿ ಹೇಳಿತು.
2. ಅಮ್ಮ ನೀನು ಸಾಯಲೇಕೆ ನನ್ನ ತಬ್ಬಲಿ ಮಾಡಲೇಕೆ ಈ ಮಾತನ್ನು ಕರುವು ಪುಣ್ಯಕೋಟಿಯಲ್ಲಿ ಹೇಳಿತು.
3. ಕೊಟ್ಟ ಭಾಷೆಗೆ ತಪ್ಪಲಾರೆನು ಕೆಟ್ಟಯೋಚನೆ ಮಾಡಲಾರೆನು ಈ ಮಾತನ್ನು ಪುಣ್ಯಕೋಟಿಯು ಕರುವಿನಲ್ಲಿ ಹೇಳಿತು.
4. ಎನ್ನ ಒಡಹುಟ್ಟಕ್ಕ ನೀನು ನಿನ್ನ ಕೊಂದು ನಾನೇನ ಪಡೆವೆನು ಈ ಮಾತನ್ನು ಹುಲಿಯು ಪುಣ್ಯಕೋಟಿಯಲ್ಲಿ ಹೇಳಿತು.

## ಮುಖವಾಡ ತಯಾರಿಸಿ ಅಭಿನಯಿಸುವ

ಅಧ್ಯಾಪಕರು ಮುಖವಾಡಕ್ಕೆ ಅಗತ್ಯವಾದ ಸಾಮಗ್ರಿಗಳನ್ನು ಸಿದ್ಧಪಡಿಸುವುದು. ಅಧ್ಯಾಪಕರ ಸಹಾಯದೊಂದಿಗೆ ಮಕ್ಕಳು ಮುಖವಾಡಗಳನ್ನು ತಯಾರಿಸಲಿ. (ಮುಖವಾಡ ತಯಾರಿಸಲು ಸಾಮರ್ಥ್ಯವಿರುವ ಅಧ್ಯಾಪಕರ ಸಹಾಯ ಪಡೆದುಕೊಳ್ಳುವುದು) ಬಳಿಕ ಪಾತ್ರಗಳನ್ನು ಹಂಚಿಕೊಂಡು ಹಿನ್ನೆಲೆ ಗಾಯನದೊಂದಿಗೆ ಅಭಿನಯಿಸುವುದು. ಇದಕ್ಕಾಗಿ ICT ಉಪಯೋಗಿಸುವುದು.

## ಗದ್ಯವಾಗಿ ಬರೆಯುವ

ಪದ್ಯದಲ್ಲಿ ಇಷ್ಟವಾದ ಭಾಗವನ್ನು ಮಕ್ಕಳು ಓದಲಿ ಅದನ್ನು ಗುಂಪಿನಲ್ಲಿ ಗದ್ಯವಾಗಿ ಬರೆದು ತರಗತಿಯಲ್ಲಿ ಮಂಡಿಸಲಿ. ಗುಂಪಿನ ಮಂಡನೆಯ ಬಳಿಕ ಬರೆದುದನ್ನು ಉತ್ತಮಪಡಿಸಲಿ.

## ಮೌಲ್ಯಮಾಪನ ಚಟುವಟಿಕೆಗಳು

## I

1. ಠಾಗೋರರ ವಿಶ್ವವಿದ್ಯಾನಿಲಯದ ಹೆಸರೇನು (1)
2. 'ಸ್ವಚ್ಛ ಪರಿಸರ ಸುಂದರ ಪರಿಸರ' ಈ ವಿಷಯದ ಕುರಿತು ಟಿಪ್ಪಣಿ ಬರೆಯಿರಿ (2)
3. ವ್ಯಕ್ತಿ ಪರಿಚಯ ಬರೆಯಿರಿ.

ಹೆಸರು –

ಬಾಲಗಂಗಾಧರ ತಿಲಕ

ಜನನ– 1856

ಜುಲೈ 23

ಜನ್ಮಸ್ಥಳ –

ರತ್ನಗಿರಿ, ಮಹಾರಾಷ್ಟ್ರ

ಶಿಕ್ಷಣ –ಪದವಿ ಶಿಕ್ಷಣ

ಉದ್ಯೋಗ –

ಗಣಿತ ಶಿಕ್ಷಕರು, ಪತ್ರಕರ್ತರು

ಕಾರ್ಯಕ್ಷೇತ್ರ –

ಸ್ವಾತಂತ್ರ್ಯ ಹೋರಾಟ

## II

1. ಕರ್ನಾಟಕ ದೇಶದಲ್ಲಿದ್ದ ಗೊಲ್ಲನ ಹೆಸರೇನು? (1)

(ಕಾಳಿಂಗ, ಅರ್ಬುದ, ಪುಣ್ಯಕೋಟಿ)

ಕೆಳಗೆ ಕೊಡಲಾದ ಪದ್ಯವನ್ನು ಕಥೆಯಾಗಿ ಬರೆಯಿರಿ (2)

2. ಪುಣ್ಯ ಕೋಟಿ ಎಂಬ ಹಸುವು

ಬಂದು ಸೇರುವೆನಿಲ್ಲಗೆ

3. ಕಥೆಯನ್ನು ಬದಲಾಯಿಸಿ ಬರೆಯಿರಿ

ಕರುವಿನ ಮಾತು ಕೇಳಿ ಪುಣ್ಯ ಕೋಟಿ ಹುಲಿಯು ಬಳಿಗೆ ಹೋಗಲಿಲ್ಲ ಎಂದು ಭಾವಿಸಿರಿ, ಮುಂದೇನಾಗಿರಬಹುದು ಊಹಿಸಿ ಕಥೆಯ ರೂಪದಲ್ಲಿ ಬರೆಯಿರಿ. (2)

# 5. ವ್ಯಕ್ತಿತ್ವ ವಿಕಾಸ

ಆರೋಗ್ಯವೇ ಭಾಗ್ಯ ಎಂಬ ಮಾತು ಆರೋಗ್ಯದ ಮಹತ್ವವನ್ನು ತಿಳಿಸುತ್ತದೆ. ಏನಾದರೂ ಸಾಧನೆ ಮಾಡಬೇಕಿದ್ದರೆ ನಮ್ಮ ಶರೀರ ಹಾಗೂ ಮನಸ್ಸು ಉಲ್ಲಾಸದಾಯಕವಾಗಿರಬೇಕು. ಉತ್ತಮ ಆಹಾರ ಅಭ್ಯಾಸಗಳು, ಕ್ರೀಡೆ, ವ್ಯಾಯಾಮ, ಯೋಗಾಭ್ಯಾಸ, ಸಮಯೋಚಿತವಾದ ವಿಶ್ರಾಂತಿ ಮೊದಲಾದುವುಗಳು ಶಾರೀರಿಕ ಆರೋಗ್ಯ ವರ್ಧನೆಗೆ ಸಹಕಾರಿಯಾದರೆ ಉತ್ತಮ ಹವ್ಯಾಸಗಳು, ಧ್ಯಾನ, ಸಾಹಿತ್ಯ ಕೃತಿಗಳ ಓದು ಮೊದಲಾದುವುಗಳು ಮಾನಸಿಕ ಆರೋಗ್ಯವನ್ನು ಹೆಚ್ಚಿಸಿಕೊಳ್ಳಲು ಸಹಕಾರಿಯಾಗಿವೆ.

ಈ ಘಟಕದಲ್ಲಿ ಕಬಡಿ ಎಂಬ ಪದ್ಯ, ಅಗೋಳಿ ಮಂಜಣ ಎಂಬ ಕಥೆ, ಶಿಸ್ತಿನ ಸಿಪಾಯಿಗಳು ಎಂಬ ಗದ್ಯಭಾಗ ಹಾಗೂ ತಿಲಕಾಷ್ಠ ಮಹಿಷ ಬಂಧನ ಎಂಬ ನಾಟಕವನ್ನು ನೀಡಲಾಗಿದೆ.

ಆರೋಗ್ಯವರ್ಧನೆಗೆ ಸಹಕಾರಿಯಾಗುವ ಕ್ರೀಡೆಗಳು, ಜೀವನಕ್ರಮಗಳು, ಆಹಾರ ಅಭ್ಯಾಸಗಳು ಮೊದಲಾದುವುಗಳ ಕುರಿತು ಪಾಠಭಾಗದಲ್ಲಿ ತಿಳಿಸಲಾಗಿದೆ.

## ಕಲಿಕಾ ಸಾಧನೆಗಳು

- ಹೊಸ ಪ್ರಯೋಗಗಳು, ಪದಗಳು, ಗಾದೆಗಳು, ನುಡಿಗಟ್ಟುಗಳು ಮೊದಲಾದುವುಗಳನ್ನು ಉಪಯೋಗಿಸಿಕೊಂಡು ಸಂದರ್ಭಾನುಸಾರ ಮಾತನಾಡುವುದು.
- ಘಟನೆಗಳು, ದೃಶ್ಯಗಳು ಮೊದಲಾದುವುಗಳನ್ನು ವಿಶ್ಲೇಷಿಸಿ ಸೂಕ್ತವಾದ ಭಾಷೆಯಲ್ಲಿ ವಿವರಿಸುವುದು ಮತ್ತು ಬರೆಯುವುದು.
- ಕಥೆ, ಕವಿತೆ, ವಿವರಣೆ, ವರ್ಣನೆ ಮೊದಲಾದವುಗಳನ್ನು ಆಲಿಸಿ ಮತ್ತು ಓದಿ ತನ್ನದೇ ಆದ ರೀತಿಯಲ್ಲಿ ಹೇಳುವುದು ಮತ್ತು ಬರೆಯುವುದು.
- ಕವಿತೆಯನ್ನು ಅರ್ಥೈಸಿಕೊಂಡು ರಾಗ, ತಾಳ, ಭಾವಗಳನ್ನು ಪರಿಗಣಿಸಿ ಹಾಡುವುದು.
- ಪಾಠಭಾಗವನ್ನು ವ್ಯವಹಾರ ರೂಪಕ್ಕೆ ತಕ್ಕಂತೆ ನಿರರ್ಗಳವಾಗಿ ಸ್ವರಭಾರ ಮತ್ತು ಉಚ್ಚಾರಸ್ಪಷ್ಟತೆಯೊಂದಿಗೆ ಓದುವುದು.
- ಕಥೆ, ಕವಿತೆ, ವಿವರಣೆ, ಭಿತ್ತಿಪತ್ರಿಕೆ ಮೊದಲಾದ ಸೃಜನಾತ್ಮಕ ರಚನೆಗಳಲ್ಲಿ ತೊಡಗುವುದು ಮತ್ತು ಅವುಗಳನ್ನು ಸಂಗ್ರಹಿಸಿ ಸಂಚಿಕೆ, ಹಸ್ತಪತ್ರಿಕೆ, ಭಿತ್ತಿಪತ್ರಿಕೆಗಳನ್ನು ತಯಾರಿಸುವುದು.
- ಕಥೆ ಮತ್ತು ಕವಿತೆಗಳ ಸಾಲುಗಳ ಅರ್ಥವನ್ನು ತಿಳಿದುಕೊಂಡು ಪದಸೌಂದರ್ಯವನ್ನು ಆಸ್ವಾದಿಸಿ ಆಶಯವನ್ನು ಹೇಳುವುದು ಮತ್ತು ಬರೆಯುವುದು.
- ಓದಿ ಆಸ್ವಾದಿಸಿದ ಕಥೆ, ಕವಿತೆ ಮೊದಲಾದುವುಗಳನ್ನು ಪಾತ್ರಾಭಿನಯ, ಮೂಕಾಭಿನಯ ಸಂಭಾಷಣೆಗಳ ಮೂಲಕ ಮಂಡಿಸುವುದು.
- ಪದಪ್ರಯೋಗ, ಭಾಷಾಪ್ರಯೋಗ, ಆಶಯ ಮೊದಲಾದವುಗಳನ್ನು ತನ್ನ ರಚನೆಯಲ್ಲಿ ಬಳಸಿಕೊಳ್ಳುವುದು.
- ಕೃತಿ ರಚನೆಯಲ್ಲಿ ಇತರರು ಬಳಸಿದ ಆಶಯ, ಪ್ರಯೋಗ, ನುಡಿಗಟ್ಟು ಮೊದಲಾದುವುಗಳೊಂದಿಗೆ ಹೋಲಿಸಿ ತನ್ನ ರಚನೆಗಳನ್ನು ಉತ್ತಮಪಡಿಸುವುದು.
- ಬರವಣಿಗೆಯಲ್ಲಿ ಬಳಕೆಯಾಗುವ ಲೇಖನ ಚಿಹ್ನೆಗಳನ್ನು ಗುರುತಿಸಿಕೊಂಡು ಅವುಗಳನ್ನು ತನ್ನ ರಚನೆಯಲ್ಲಿ ಬಳಸುವುದು.
- ಓದಿದ, ಆಲಿಸಿದ ವ್ಯವಹಾರ ರೂಪದ ಆಶಯವನ್ನು ತಿಳಿದುಕೊಂಡು ಇನ್ನೊಂದು ವ್ಯವಹಾರ ರೂಪವಾಗಿ ಬದಲಾಯಿಸುವುದು.
- ಮಾಹಿತಿ ತಂತ್ರಜ್ಞಾನವನ್ನು (ICT) ಉಪಯೋಗಿಸಿ, ಕೇಳಿಯೂ ನೋಡಿಯೂ ಆಶಯವನ್ನು ತಿಳಿದುಕೊಂಡು ಸ್ವಂತ ರಚನೆ ಮಾಡುವುದು ಮತ್ತು ಮಂಡಿಸುವುದು.

# ಯೂನಿಟ್ ಗ್ರಿಡ್

**ಯೂನಿಟ್ 5 : ವ್ಯಕ್ತಿತ್ವ ವಿಕಾಸ** ಸಮಯ : 8+15 ಪೀರಿಯಡ್‌ಗಳು

| ಪಾಠದ ಹೆಸರು | ಆಶಯ/ ಉದ್ದೇಶಗಳು | ಪ್ರಕ್ರಿಯೆ | ಪೂರಕ ಸಾಮಗ್ರಿಗಳು | ಮೌಲ್ಯನಿರ್ಣಯ |
|---|---|---|---|---|
| 1. ಕಬಡಿ (ಕವಿತೆ) | • ಆಟಗಳಿಂದ ದೈಹಿಕ ಹಾಗೂ ಮಾನಸಿಕ ವೃದ್ಧಿಯಾಗುವುದು.<br>• ಒಳಾಂಗಣ, ಹೊರಾಂಗಣ, ಗ್ರಾಮೀಣ, ರಾಷ್ಟ್ರೀಯ, ಅಂತಾರಾಷ್ಟ್ರೀಯ ಮೊದಲಾದ ಆಟಗಳಿವೆ ಎಂದು ತಿಳಿಯುವುದು.<br>• ಕಬಡಿ ಆಟದ ವಿಧಾನವನ್ನು ತಿಳಿಯುವುದು.<br>• ಸೋಲು ಗೆಲವುಗಳನ್ನು ಸಮಾನವಾಗಿ ಸ್ವೀಕರಿಸಬೇಕು ಎಂದು ತಿಳಿಯುವುದು.<br>• ಕವಿತೆಯನ್ನು ರಾಗ, ತಾಳ, ಭಾವಗಳೊಂದಿಗೆ ಹಾಡುವುದು. | • ಇಷ್ಟವಾದ ಸಾಲು ಬರೆಯುವುದು.<br>• ಆಟಗಳ ಹೆಸರುಗಳನ್ನು ಪಟ್ಟಿ ಮಾಡುವುದು.<br>• ಗ್ರಾಮೀಣ ಆಟದ ವಿವರಣೆ ಬರೆಯುವುದು.<br>• ಅಡಿಟಿಪ್ಪಣಿ<br>• ವೀಕ್ಷಕ ವಿವರಣೆ ಹೇಳುವುದು.<br>• ಕವಿತೆಯನ್ನು ಹಾಡುವುದು. | • ದಾರಿದೀಪ ಸಿ.ಡಿ.<br>• ಆಟಗಳಿಗೆ ಸಂಬಂಧಿಸಿದಂತಹ ಲೇಖನಗಳು | • ಆಟಗಳ ಪಟ್ಟಿ<br>• ವಿವರಣೆ<br>• ಅಡಿಟಿಪ್ಪಣಿ<br>• ಹಾಡುವಿಕೆ |
| 2. ಅಗೋಳಿ ಮಂಜಣ | • ಆರೋಗ್ಯವಂತ ವ್ಯಕ್ತಿಗಳು ಸಾಧನೆಯನ್ನು ಮಾಡುತ್ತಾರೆ.<br>• ಉತ್ತಮ ಆಹಾರ ಸೇವನೆ ಹಾಗೂ ವ್ಯಾಯಾಮಗಳು ಉತ್ತಮ ಆರೋಗ್ಯಕ್ಕೆ ಸಹಕಾರಿಯಾಗಿದೆ. | • ಕಥೆಯನ್ನು ಸ್ವರಭಾರದೊಂದಿಗೆ ಓದಿ ಆಶಯವನ್ನು ತಿಳಿಯುವುದು.<br>• ಶೀರ್ಷಿಕೆ ಬರೆಯುವುದು.<br>• ವಿವರಣೆ ಬರೆಯುವುದು | • ದಾರಿದೀಪ ಸಿ.ಡಿ.<br>• ತುಳುನಾಡಿನ ವೀರರಿಗೆ ಸಂಬಂಧಿಸಿದ ಪುಸ್ತಕಗಳು | • ಶೀರ್ಷಿಕೆ<br>• ವಿವರಣೆ |

# ಯೂನಿಟ್ ಗ್ರಿಡ್

**ಯೂನಿಟ್ 5 : ವ್ಯಕ್ತಿತ್ವ ವಿಕಾಸ** ಸಮಯ : 8+15 ಪೀರಿಯಡ್‌ಗಳು

| ಪಾಠದ ಹೆಸರು | ಆಶಯ/ ಉದ್ದೇಶಗಳು | ಪ್ರಕ್ರಿಯೆ | ಪೂರಕ ಸಾಮಗ್ರಿಗಳು | ಮೌಲ್ಯನಿರ್ಣಯ |
|---|---|---|---|---|
| 3. ಶಿಸ್ತಿನ ಸಿಪಾಯಿಗಳು (ಲೇಖನ) | • ಸೇವಾಮನೋಭಾವವನ್ನು ಬೆಳೆಸಿಕೊಳ್ಳಲು ಕಬ್, ಬುಲ್‌ಬುಲ್‌ಗಳು ಸಹಕಾರಿಯಾಗಿದೆ.<br>• ಬಾಲ್ಯದಿಂದಲೇ ಶಿಸ್ತನ್ನು ರೂಢಿಸಿಕೊಳ್ಳಲು ಸೇವಾದಳಗಳು ಸಹಕಾರಿಯಾಗಿವೆ.<br>• ಸೇವಾದಳಗಳಿಗೆ ಸಂಬಂಧಿಸಿದ ಪ್ರಯೋಜನಗಳನ್ನು ತಿಳಿಯುವುದು.<br>• ಲೇಖನದ ಆಶಯಗಳನ್ನು ತಿಳಿಯುವುದು. | • ಪದಗಳ ಅರ್ಥ ಕಂಡುಹಿಡಿಯುವುದು.<br>• ಕಥೆಯನ್ನು ಮುಂದುವರಿಸುವುದು.<br>• ಲೇಖನವನ್ನು ಉಚ್ಛಾರ ಸ್ಪಷ್ಟತೆಯೊಂದಿಗೆ ಓದುವುದು. | • ದಾರಿದೀಪ ಸಿ.ಡಿ.<br>• ಸೇವಾದಳಕ್ಕೆ ಸಂಬಂಧಿಸಿದ ಪುಸ್ತಕಗಳು | • ಅರ್ಥಕೋಶ<br>• ಕಥೆ |
| 4. ತಿಲಕಾಷ್ಠ ಮಹಿಷ ಬಂಧನ | • ಬುದ್ಧಿವಂತಿಕೆಯಿಂದ ಸಮಸ್ಯೆಗಳನ್ನು ಪರಿಹರಿಸಿಕೊಳ್ಳಬಹುದು.<br>• ಹಾಸ್ಯವು ಮನುಷ್ಯನ ಮಾನಸಿಕ ಆರೋಗ್ಯ ವೃದ್ಧಿಸಲು ಸಹಕಾರಿಯಾಗಿದೆ.<br>• ಲೇಖನ ಚಿಹ್ನೆಗಳ ಬಳಕೆಯು ಅರ್ಥ ಪೂರ್ಣವಾದ ಓದುವಿಕೆ ಮತ್ತು ಬರವಣಿಗೆಗೆ ಸಹಕಾರಿಯಾಗಿದೆ. | • ನಾಟಕವನ್ನು ಕಥೆಯಾಗಿ ಹೇಳುವುದು.<br>• ಲೇಖನ ಚಿಹ್ನೆಯನ್ನು ಉಪಯೋಗಿಸಿ ಬರೆಯುವುದು.<br>• ಪಾತ್ರಗಳನ್ನು ಹಂಚಿಕೊಂಡು ನಾಟಕವನ್ನು ಅಭಿನಯಿಸುವುದು. | • ದಾರಿದೀಪ ಸಿ.ಡಿ.<br>• ವಿಕ್ರಮಾದಿತ್ಯ ಬೇತಾಳ, ಅಕ್ಬರ ಚಕ್ರವರ್ತಿ, ಪಂಚತಂತ್ರ<br>• ತೆನ್ನಾಲಿ ರಾಮಕೃಷ್ಣ ಮೊದಲಾದ ಪುಸ್ತಕಗಳು | • ಕಥೆ ಹೇಳುವುದು.<br>• ಲೇಖನ ಚಿಹ್ನೆಯನ್ನುಪಯೋಗಿಸಿ ಬರೆದ ಲೇಖನ.<br>• ಅಭಿನಯ |

# 1. ಕಬಡಿ

ಲಕ್ಷ್ಮೀಸುತ ಎಡನೀರು ಇವರು ಬರೆದ ಕಬಡಿ ಎಂಬ ಕವಿತೆಯು ಕ್ರೀಡೆಯ ಮಹತ್ವವನ್ನು ತಿಳಿಸುವುದರೊಂದಿಗೆ 'ಸೋಲೇ ಗೆಲುವಿನ ಸೋಪಾನ' ಎಂಬ ನೀತಿಯನ್ನು ಸಾರುತ್ತದೆ. ಗೆಲುವಿನಲ್ಲಿ ಹಿಗ್ಗದೇ ಸೋಲಿನಲ್ಲಿ ಕುಗ್ಗದೇ ಸಮಚಿತ್ತದಿಂದ ಸೋಲುಗೆಲುವುಗಳನ್ನು ಸ್ವೀಕರಿಸಬೇಕು. ಆರೋಗ್ಯವಂತರಾಗಿ ಯಶಸ್ಸಿನೆಡೆಗೆ ಸಾಗಬೇಕು. ಪರಸ್ಪರ ಪ್ರೀತಿ ವಿಶ್ವಾಸಗಳಿಂದ ಬಾಳಬೇಕು ಎಂಬ ಉತ್ತಮ ಆಶಯವನ್ನು ನೀಡುತ್ತದೆ.

## ಚಟುವಟಿಕೆಗಳು

### ಚಿತ್ರ ವೀಕ್ಷಣೆ

ಮಕ್ಕಳು ಪಾಠಪುಸ್ತಕದಲ್ಲಿರುವ ಚಿತ್ರವನ್ನು ವೀಕ್ಷಿಸಲಿ. ಈ ಚಿತ್ರಕ್ಕೆ ಸಂಬಂಧಪಟ್ಟಂತಹ ಕೆಲವು ಪ್ರಶ್ನೆಗಳನ್ನು ಅಧ್ಯಾಪಕರು ಕೇಳುವುದು.

ಉದಾ : ಚಿತ್ರದಲ್ಲಿ ಏನೇನು ಕಾಣಿಸುತ್ತದೆ?

ಮಕ್ಕಳು ಏನು ಮಾಡುತ್ತಾರೆ?

ಮಕ್ಕಳು ಆಡುವ ಆಟ ಯಾವುದು?

ಮಕ್ಕಳು ತಮ್ಮ ಪ್ರತಿಕ್ರಿಯೆಯನ್ನು ನೀಡಲಿ. ಅವುಗಳನ್ನು ಕ್ರೋಡೀಕರಿಸಿ ಪಾಠ ಪ್ರವೇಶಕ್ಕೆ ಮಕ್ಕಳನ್ನು ಸಿದ್ಧರಾಗಿಸುವುದು.

### ಹಾಡುವ

ಕಬಡಿ ಆಟದ ಬಗ್ಗೆ ಕವಿತೆಯಲ್ಲಿ ಏನು ಹೇಳಿದ್ದಾರೆಂದು ತಿಳಿಯಲು ಮಕ್ಕಳು ಪದ್ಯವನ್ನು ವೈಯಕ್ತಿಕವಾಗಿ ಹಾಡಲಿ. ಆಶಯಗಳನ್ನು ಕಂಡುಕೊಳ್ಳಲಿ. ಕೆಲವರು ಪದ್ಯದ ಆಶಯವನ್ನು ಹೇಳಲಿ. ಮಕ್ಕಳು ಹೇಳಿದ ಆಶಯವನ್ನು ಅಧ್ಯಾಪಕರು ಕರಿಹಲಗೆಯಲ್ಲಿ ಕ್ರೋಡೀಕರಿಸುವುದು. ಬಿಟ್ಟು ಹೋದ ಆಶಯವನ್ನು ಅಧ್ಯಾಪಕರೇ ಹೇಳುವುದು.

ಬಳಿಕ ಮಕ್ಕಳನ್ನು ಗುಂಪುಗಳಾಗಿ ಮಾಡುವುದು. ಗುಂಪುಗಳಲ್ಲಿ ರಾಗಹಾಕಿ ಹಾಡಲು ತಯಾರಾಗುವಂತೆ ಸೂಚಿಸುವುದು. ಪ್ರತಿಯೊಂದು ತಂಡದಿಂದಲೂ ಒಬ್ಬೊಬ್ಬ ನಿರ್ಣಾಯಕರನ್ನು ಮಕ್ಕಳೇ ಆಯ್ಕೆ ಮಾಡಲಿ. ಮೌಲ್ಯನಿರ್ಣಯ ಸೂಚಕಗಳನ್ನೂ ಕಂಡುಕೊಳ್ಳಲಿ. ಪ್ರತಿಯೊಂದು ಗುಂಪಿನವರೂ ಸರದಿಯಂತೆ ಬಂದು ಪದ್ಯವನ್ನು ಹಾಡಲಿ. ಬಳಿಕ ಚೆನ್ನಾಗಿ ಹಾಡಿದ ಗುಂಪು ಯಾವುದೆಂದು ನಿರ್ಣಾಯಕರು ತಿಳಿಸಲಿ. ಬಳಿಕ ಮಕ್ಕಳನ್ನು ಗುಂಪುಗಳಾಗಿ ಮಾಡುವುದು. ಗುಂಪುಗಳಲ್ಲಿ ರಾಗ ಹಾಕಿ ಹಾಡಲು ತಯಾರಾಗುವಂತೆ ಸೂಚಿಸುವುದು. ಪ್ರತಿಯೊಂದು ತಂಡದಿಂದಲೂ ಒಬ್ಬೊಬ್ಬ ನಿರ್ಣಾಯಕರನ್ನು ಮಕ್ಕಳೇ ಆಯ್ಕೆ ಮಾಡಲಿ. ಮೌಲ್ಯನಿರ್ಣಯ ಸೂಚಕಗಳನ್ನೂ ಕಂಡುಕೊಳ್ಳಲಿ. ಪ್ರತಿಯೊಂದು ಗುಂಪಿನವರೂ ಸರದಿಯಂತೆ ಬಂದು ಪದ್ಯವನ್ನು ಹಾಡಲಿ. ಬಳಿಕ ಚೆನ್ನಾಗಿ ಹಾಡಿದ ಗುಂಪು ಯಾವುದೆಂದು ನಿರ್ಣಾಯಕರು ತಿಳಿಸಲಿ.

ಬಳಿಕ ಅಧ್ಯಾಪಕರೂ ಮಕ್ಕಳೂ ಜೊತೆಯಾಗಿ ಹಾಡಲಿ.

## ಉತ್ತರ ಬರೆಯುವ

'ಉತ್ತರ ಬರೆಯುವ' ಚಟುವಟಿಕೆಯಲ್ಲಿ ಕೆಲವು ಪ್ರಶ್ನೆಗಳನ್ನು ನೀಡಲಾಗಿದೆ. ಮಕ್ಕಳು ಅದನ್ನು ಓದಲಿ. ಉತ್ತರಗಳನ್ನು ಪದ್ಯಭಾಗದಿಂದ ಕಂಡುಹಿಡಿದು ಹೇಳಲಿ. ಅನಂತರ ಅಧ್ಯಾಪಕರ ಸಹಾಯದಿಂದ ಉತ್ತಮಪಡಿಸಿ ಅಭ್ಯಾಸ ಪುಸ್ತಕದಲ್ಲಿ ಬರೆಯಲಿ.

## ಪ್ರಾಸಪದ ಬರೆಯುವ

ಅಧ್ಯಾಪಕರು ಪದ್ಯದಲ್ಲಿ ಬಂದಿರುವ ಯಾವುದಾದರೊಂದು ಪ್ರಾಸಾಕ್ಷರವಿರುವ ಪದವನ್ನು ಕರಿಹಲಗೆಯಲ್ಲಿ ಬರೆಯುವುದು.

ಉದಾ : ಬಡಿಯಲೆಂದು – ಹೊರಗೆ ಬಂದು

ಉಳಿದ ಪ್ರಾಸಪದಗಳನ್ನು ಪದ್ಯದಿಂದ ಕಂಡುಹಿಡಿದು ಮಕ್ಕಳು ವೈಯಕ್ತಿಕವಾಗಿ ಬರೆಯಲಿ. ಅಗತ್ಯವಿದ್ದಲ್ಲಿ ಅಧ್ಯಾಪಕರು ಸಹಕರಿಸುವುದು.

**ಪ್ರಾಸಪದಗಳು :**

ಗೆಳೆಯರೆಲ್ಲ – ಬಳಗವೆಲ್ಲ

ಎಂದು – ಬಂದು

ದಾಳಿಯಿಟ್ಟನು – ಓಡಿ ಬಿಟ್ಟನು

ಗೆಳೆಯರೆಲ್ಲ – ನಗುವರಲ್ಲ

ಹಿಡಿದು – ತಡೆದು

ತಂಡ – ದಂಡ

ತಂದುಕೊಟ್ಟನು – ಜರೆದು ಬಿಟ್ಟನು

ಕರೆದು – ಹಿಡಿದು

ನಿಮಗೆ – ನಮಗೆ

ನುಡಿದನು – ನಡೆದನು

## ಇಷ್ಟವಾದ ಸಾಲು ಬರೆಯುವ

ಮಕ್ಕಳಿಗೆ ಪದ್ಯದ ಆಶಯವನ್ನು ತಿಳಿಯುವ ಸಾಮರ್ಥ್ಯವನ್ನು ಬೆಳೆಸಲು ಈ ಚಟುವಟಿಕೆಯನ್ನು ನೀಡಲಾಗಿದೆ. ಮಕ್ಕಳಲ್ಲಿ ಪದ್ಯದ ಬಗ್ಗೆ ಚರ್ಚಿಸಿ ಪೂರ್ಣ ಆಶಯವನ್ನು ತಿಳಿಯುವಂತೆ ಮಾಡುವುದು. ಪದ್ಯದಲ್ಲಿ ಇಷ್ಟವಾದ ಸಾಲು ಯಾವುದು? ಯಾಕೆ? ಎಂದು ಮಕ್ಕಳು ವೈಯಕ್ತಿಕವಾಗಿ ಬರೆಯಲಿ. ಕೆಲವರು ಮಂಡಿಸಲಿ. ಗುಂಪಿನಲ್ಲಿ ಪರಸ್ಪರ ಮೌಲ್ಯನಿರ್ಣಯ ನಡೆಸಿ ಉತ್ತಮವಾದುದನ್ನು ಮಕ್ಕಳೇ ಗುರುತಿಸಿ ಮಂಡಿಸಲಿ. ಪದ್ಯದಲ್ಲಿ ತಮಗೆ ಇಷ್ಟವಾದ ಸಾಲು ಯಾವುದು? ಯಾಕೆ ಎಂದು ಅಧ್ಯಾಪಕರು ಬರೆದು ತರಗತಿಯಲ್ಲಿ ಪ್ರದರ್ಶಿಸುವುದು. ಇದರ ಆಧಾರದಲ್ಲಿ ಮಕ್ಕಳಿಗೆ ತಮ್ಮ ಬರವಣಿಗೆಯನ್ನು ಉತ್ತಮಪಡಿಸಲು ಅವಕಾಶ ನೀಡುವುದು. ಅಧ್ಯಾಪಕರು ಮೌಲ್ಯನಿರ್ಣಯ ಮಾಡುವುದು.

## ನನಗೆ ಇಷ್ಟವಾದ ಸಾಲು

ಕಬಡಿ ಪದ್ಯದಲ್ಲಿ 'ಇಂದು ನಮಗೆ ನಾಳೆ ನಿಮಗೆ ಗೆಲುವು ಇಹುದು ಸತತ ನಮಗೆ' ಎಂಬ ಸಾಲು ನನಗೆ ಇಷ್ಟವಾಯಿತು. ಈ ಸಾಲನ್ನು ಓದಿದಾಗ ಆಟದಲ್ಲಿ ಸೋಲು ಗೆಲುವು ಸ್ವಾಭಾವಿಕ ಗೆಲುವಿಗೆ ಹಿಗ್ಗದೇ ಸೋಲಿಗೆ ಕುಗ್ಗದೇ ಮುನ್ನಡೆಯಬೇಕು. ಮುಂದಿನ ದಿನಗಳಲ್ಲಿ ಗೆಲುವಿಗಾಗಿ ಪ್ರಯತ್ನಿಸಬೇಕು. ಸೋಲೇ ಗೆಲುವಿನ ಸೋಪಾನ ಮೊದಲಾದ ವಿಚಾರಗಳು ತಿಳಿಯುತ್ತವೆ. ಆದುದರಿಂದ ಈ ಸಾಲು ನನಗೆ ಇಷ್ಟವಾಯಿತು.

## ಸಾಲುಗಳನ್ನು ಆರಿಸಿ ಬರೆಯುವ

ಪದ್ಯದ ಆಶಯವು ಇನ್ನಷ್ಟು ಮನದಟ್ಟಾಗುವಂತೆ ಮಾಡಲು ಈ ಚಟುವಟಿಕೆಯನ್ನು ನೀಡಲಾಗಿದೆ. ಕೊಟ್ಟಿರುವ ವಾಕ್ಯಗಳನ್ನು ಮಕ್ಕಳು ಎರಡೋ ಮೂರೋ ಬಾರಿ ಓದಲಿ. ಕೊಟ್ಟಿರುವ ವಾಕ್ಯಗಳಿಗೆ ಸಮಾನವಾದ ಅರ್ಥ ಬರುವಂತಹ ಸಾಲುಗಳನ್ನು ಕವನದಿಂದ ಆರಿಸಿ ಬರೆಯಲಿ. ತರಗತಿಯಲ್ಲಿ ಮಂಡಿಸಲಿ. ಮಕ್ಕಳು ಹೇಳಿದ ಸಾಲುಗಳನ್ನು ಅಧ್ಯಾಪಕರು ಕರಿಹಲಗೆಯಲ್ಲಿ ಬರೆಯುವುದು. ಉತ್ತಮಪಡಿಸಲು ಅವಕಾಶವನ್ನು ನೀಡುವುದು. ಅಧ್ಯಾಪಕರು ಮೌಲ್ಯನಿರ್ಣಯ ಮಾಡುವುದು.

ಕಬಡಿ ಕಬಡಿ ಕಬಡಿ ಎಂದು
ನಾಣಿ ಹಾರಿ ಮುಂದೆ ಬಂದು
ಆಡ ಬನ್ನಿ ಗೆಳೆಯರೆಲ್ಲ
ಕೂಡಿ ಬನ್ನಿ ಬಳಗವೆಲ್ಲ
ಸುತ್ತ ನೆರೆದ ಗೆಳೆಯರೆಲ್ಲ
ಕೇಕೆ ಹಾಕಿ ನಗುವರಲ್ಲ
ಇಂದು ನಮಗೆ ನಾಳೆ ನಿಮಗೆ
ಗೆಲುವು ಇಹುದು ಸತತ ನಮಗೆ

## ಹೆಸರು ಬರೆಯುವ

ಭಾಷಾ ಕಲಿಕೆಯಲ್ಲಿ ಭಾಷಾ ಆಟಗಳಿಗೆ ವಿಶೇಷ ಸ್ಥಾನವಿದೆ. ಪ್ರಾಥಮಿಕ ಹಂತದಲ್ಲಿ ಇದಕ್ಕೆ ಮತ್ತಷ್ಟು ಅವಕಾಶವಿದೆ. ಆದುದರಿಂದ ಸಂದರ್ಭ ಸಿಕ್ಕಿದಾಗ ಭಾಷಾ ಆಟಗಳಿಗೆ ಅನುವು ಮಾಡಿಕೊಡಬೇಕು.

ಹೆಸರು ಬರೆಯುವ ಎಂಬ ಚಟುವಟಿಕೆಯನ್ನು ಈ ಉದ್ದೇಶಕ್ಕಾಗಿ ರೂಪಿಸಲಾಗಿದೆ. ಮಕ್ಕಳ ಸಂಖ್ಯೆಗನುಸಾರವಾಗಿ ಗುಂಪುಗಳನ್ನು ಮಾಡುವುದು. ಪ್ರತಿಯೊಂದು ಗುಂಪಿನವರೂ ಪಟ್ಟಿಯಲ್ಲಿರುವ ಅಕ್ಷರಗಳನ್ನುಪಯೋಗಿಸಿ ಆಟಗಳ ಹೆಸರುಗಳನ್ನು ಬರೆಯಲಿ. ನೀಡಿದ ಸಮಯದಲ್ಲಿ ಯಾವ ಗುಂಪಿನವರು ಅತೀ ಹೆಚ್ಚು ಆಟಗಳನ್ನು ಬರೆದಿರುತ್ತಾರೋ ಅವರು ಜಯಶಾಲಿಗಳಾಗುತ್ತಾರೆ.

ಮಕ್ಕಳು ಬರೆದ ಆಟಗಳ ಹೆಸರುಗಳನ್ನು ಅಧ್ಯಾಪಕರು ಕ್ರೋಡೀಕರಿಸಿ ಕರಿಹಲಗೆಯಲ್ಲಿ ಬರೆಯುವುದು. ಬಿಟ್ಟು ಹೋದ ಹೆಸರುಗಳನ್ನು ಬರೆಯುವುದು. ಬಳಿಕ ಈ ಆಟಗಳಿಂದ ಗ್ರಾಮೀಣ ಆಟಗಳು ಯಾವುವು ಎಂದು ಆರಿಸಿ ಬರೆಯಲಿ. ಗುಂಪಿನಲ್ಲಿ ಮಂಡಿಸಲಿ ಅಗತ್ಯವಿದ್ದಲ್ಲಿ ಅಧ್ಯಾಪಕರು ಸಹಾಯ ನೀಡುವುದು.

**ಆಟಗಳ ಪಟ್ಟಿ**

| | |
|---|---|
| 1. ಕಬಡಿ | 7. ಹುಲಿದನ |
| 2. ಕುಟ್ಟಿ ದೊಣ್ಣೆ | 8. ಕ್ರಿಕೆಟ್ |
| 3. ಕಣ್ಣು ಮುಚ್ಚಾಲೆ | 9. ಡೊಂಕಾಟ |
| 4. ವಾಲಿಬಾಲ್ | 10. ಸೊಪ್ಪಾಟ |
| 5. ಫೂಟ್ ಬಾಲ್ | 11. ಕೊಕ್ಕೋ |
| 6. ಚೆನ್ನೆಮಣೆ | |

**ಗ್ರಾಮೀಣ ಆಟಗಳು**

| | | |
|---|---|---|
| 1. ಕುಟ್ಟಿದೊಣ್ಣೆ | 2. ಕಣ್ಣು ಮುಚ್ಚಾಲೆ | 3. ಚೆನ್ನೆಮಣೆ |
| 4. ಹುಲಿದನ | 5. ಡೊಂಕಾಟ | 6. ಸೊಪ್ಪಾಟ |

ಇವುಗಳಲ್ಲದೇ ಇನ್ನಿತರ ಗ್ರಾಮೀಣ ಆಟಗಳ ಕುರಿತು ಕೇಳಿ ಅಥವಾ ಓದಿ ತಿಳಿದು ವಿವರಗಳನ್ನು ಸಂಗ್ರಹಿಸಲಿ.

**ಓದಿ ತಿಳಿಯುವ**

ಮಕ್ಕಳಲ್ಲಿ ಓದುವ ಹವ್ಯಾಸವನ್ನು ಬೆಳೆಸಲು ಈ ಚಟುವಟಿಕೆಯು ಪೂರಕವಾಗಿದೆ. ಪತ್ರಿಕೆಗಳಲ್ಲಿ ಬರುವ ಕಿರು ವಿವರಣೆಗಳನ್ನು ಸರಳ ಲೇಖನಗಳನ್ನು ಓದುವುದರ ಮೂಲಕ ಮಕ್ಕಳು ತಮ್ಮ ಜ್ಞಾನವನ್ನು ಅಭಿವೃದ್ಧಿಪಡಿಸಿಕೊಳ್ಳಬಹುದು.

ಪಾಠಪುಸ್ತಕದಲ್ಲಿ ನೀಡಲಾದ ವಿವರಣೆಯನ್ನು ಮಕ್ಕಳು ವೈಯಕ್ತಿಕವಾಗಿ ಓದಲಿ. ಕೆಲವರಲ್ಲಿ ಗಟ್ಟಿಯಾಗಿ ಓದಲು ಹೇಳುವುದು. ಈ ವಿವರಣೆಯಲ್ಲಿ ಡೊಂಕಾಟದ ಕುರಿತು ಹೇಳಲಾಗಿದೆ. ಅದೇ ರೀತಿ ಮಕ್ಕಳು ತಾವು ಆಡುವ ಯಾವುದಾದರೂ ಒಂದು ಗ್ರಾಮೀಣ ಆಟದ ವಿವರಣೆಯನ್ನು ವೈಯಕ್ತಿಕವಾಗಿ ಬರೆಯಲಿ. ಕೆಲವರು ಮಂಡಿಸಲಿ. ಗುಂಪಿನಲ್ಲಿ ಉತ್ತಮಪಡಿಸಲಿ. ಅಧ್ಯಾಪಕರು ಒಂದು ಗ್ರಾಮೀಣ ಆಟದ ವಿವರಣೆಯನ್ನು ನೀಡುವುದು. ಬಳಿಕ ಮಕ್ಕಳಿಗೆ ತಮ್ಮ ಬರವಣಿಗೆಯನ್ನು ಉತ್ತಮಪಡಿಸಲು ಅವಕಾಶವನ್ನು ನೀಡುವುದು. ಅಧ್ಯಾಪಕರು ಮೌಲ್ಯನಿರ್ಣಯಮಾಡುವುದು.

**ಅಡಿಟಿಪ್ಪಣಿ ಬರೆಯುವ**

ಚಿತ್ರವನ್ನು ವೀಕ್ಷಿಸಿ, ಚಿಂತನೆಯ ಮೂಲಕ ವಿಶಾಲವಾದ ಆಶಯವನ್ನು ಚುಟುಕಾಗಿ ಹಾಗೂ ಸೃಜನಾತ್ಮಕವಾಗಿ ಬರೆಯುವ ಸಾಮರ್ಥ್ಯವನ್ನು ಮಕ್ಕಳಲ್ಲಿ ಬೆಳೆಸುವ ಉದ್ದೇಶದಿಂದ ಈ ಚಟುವಟಿಕೆಯನ್ನು ನೀಡಲಾಗಿದೆ.

ಮಕ್ಕಳು ಚಿತ್ರವನ್ನು ಸೂಕ್ಷ್ಮವಾಗಿ ಗಮನಿಸಲಿ. ಅಧ್ಯಾಪಕರು ಚಿತ್ರಕ್ಕೆ ಸಂಬಂಧಿಸಿದಂತಹ ಕೆಲವು ಪ್ರಶ್ನೆಗಳನ್ನು ಕೇಳುವುದು.

ಉದಾ : ಚಿತ್ರದಲ್ಲಿ ಏನೇನಿದೆ?

ಮಕ್ಕಳು ಗದ್ದೆಯಲ್ಲಿ ಏನು ಮಾಡುತ್ತಿದ್ದಾರೆ?

ಗದ್ದೆಯ ನಡುವಿನಲ್ಲಿರುವ ವ್ಯಕ್ತಿಯು ಯಾವ ಕೆಲಸದಲ್ಲಿ ನಿರತನಾಗಿದ್ದಾನೆ? ಈ ರೀತಿಯ ಪ್ರಶ್ನೆಗಳ ಮೂಲಕ ಚಿತ್ರದ ಆಶಯವನ್ನು ಸ್ಪಷ್ಟಪಡಿಸುವುದು. ಅಡಿಟಿಪ್ಪಣಿಗೆ ಸಂಬಂಧಿಸಿದ ಮಾಹಿತಿಗಳನ್ನು ಅಧ್ಯಾಪಕರು ನೀಡುವುದು. ಇವುಗಳ ಆಧಾರದಲ್ಲಿ ಮಕ್ಕಳು ವೈಯಕ್ತಿಕವಾಗಿ ಅಡಿಟಿಪ್ಪಣಿ ಬರೆಯಲಿ. ಕೆಲವರು ಮಂಡಿಸಲಿ. ಗುಂಪಿನಲ್ಲಿ ಉತ್ತಮಪಡಿಸಲಿ ಮಕ್ಕಳು ಹೇಳಿದ

ಅಡಿಟಿಪ್ಪಣಿಯನ್ನು ಅಧ್ಯಾಪಕರು ಕರಿಹಲಗೆಯಲ್ಲಿ ಬರೆಯುವುದು. ಯಾವುದು ಉತ್ತಮವಾಗಿದೆ ಎಂದು ಮಕ್ಕಳು ಕಂಡುಕೊಳ್ಳಲಿ. ಅಧ್ಯಾಪಕರು ಕೆಲವು ಅಡಿಟಿಪ್ಪಣಿಯನ್ನು ನೀಡುವುದು. ಇದರ ಆಧಾರದಲ್ಲಿ ಮಕ್ಕಳು ತಮ್ಮ ಬರವಣಿಗೆಯನ್ನು ಇನ್ನಷ್ಟು ಉತ್ತಮಪಡಿಸಲಿ.

**ಅಡಿಟಿಪ್ಪಣಿಗಳು**

- ಗದ್ದೆಯಲ್ಲೇ ಆಟ, ಗದ್ದೆಯಿಂದಲೇ ಊಟ
- ಕೆಸರಿನ ಆಟದ ಗಮ್ಮತ್ತು, ಮರೆಯೆವು ನಾವು ಯಾವತ್ತು.
- ಮಣ್ಣಿನಿಂದ ಜೀವನ. ಮಣ್ಣೇ ನಮಗೆ ಪಾವನ.
- ಕೆಸರಿನ ಆಟದ ಆನಂದ ಪಡೆಯಲು ಬಾರೋ ನೀ ಕಂದ.

**ವೀಕ್ಷಕ ವಿವರಣೆ ಹೇಳುವ**

ಮಕ್ಕಳಲ್ಲಿ ಮಾತುಗಾರಿಕೆಯ ಸಾಮರ್ಥ್ಯವನ್ನು ಹೆಚ್ಚಿಸಲು ಈ ಚಟುವಟಿಕೆಯನ್ನು ನೀಡಲಾಗಿದೆ.

ಮಕ್ಕಳು ಬಯಲಿನಲ್ಲಿ ಆಟವಾಡುತ್ತಿರುವ ಸಂದರ್ಭದಲ್ಲಿ ವೀಕ್ಷಕ ವಿವರಣೆ ಹೇಳುವ ಸಂದರ್ಭ ಒದಗಿಸುವುದು.

ಉದಾ : ಡೊಂಕಾಟದ ವೀಕ್ಷಕ ವಿವರಣೆಯನ್ನು ಅಧ್ಯಾಪಕರು ಆರಂಭಿಸುವುದು. ಮಕ್ಕಳು ಅದನ್ನು ಮುಂದುವರಿಸಿ ಹೇಳಲಿ.

ಉದಾ : ತೇಜ, ಅನು, ಸಲೀಂ, ವೃತ್ತದೊಳಗೆ ಓಡುತ್ತಿದ್ದಾರೆ. ತೇಜನ ಗುಂಪಿನ ಉಳಿದವರು ವೃತ್ತದ ಹೊರಗೆ ತಮ್ಮ ಸರದಿಗಾಗಿ ಕಾಯುತ್ತಿದ್ದಾರೆ. ಜಾನ್ ಒಂಟಿಕಾಲಿನಲ್ಲಿ ಹಾರುತ್ತಾ ಬರುತ್ತಿದ್ದಾನೆ. ವೃತ್ತದೊಳಗಿನವರನ್ನು ಹಿಡಿಯಲು ಪ್ರಯತ್ನಿಸುತ್ತಿದ್ದಾನೆ. ಅನುವಿನ ಸಮೀಪಕ್ಕೆ ಬಂದೇ ಬಿಟ್ಟ..... ಹಿಡಿದೇ ಬಿಟ್ಟ....... ಇಲ್ಲ. ಅನು ಬಗ್ಗಿ ತಪ್ಪಿಸಿಕೊಂಡಳು......

ಮಕ್ಕಳು ಕಬಡಿ ಆಟವನ್ನು ICT ಯಲ್ಲಿ ನೋಡಲಿ. ಬಳಿಕ ಕಬಡಿ ಆಟವನ್ನು ಆಡಲಿ. ಉಳಿದ ತರಗತಿಯ ಮಕ್ಕಳು ಆಡುತ್ತಿರುವ ಸಂದರ್ಭದಲ್ಲಿ ವೀಕ್ಷಕ ವಿವರಣೆಯನ್ನು ನೀಡಲಿ. ವೀಕ್ಷಕ ವಿವರಣೆ ಹೇಳಲು ಅಧ್ಯಾಪಕರು ಪ್ರತಿಯೊಬ್ಬರಿಗೂ ಅವಕಾಶ ಮಾಡಿಕೊಡುವುದು.

# 2. ಅಗೊಳಿ ಮಂಜಣ

'ರಟ್ಟೆಯಲ್ಲಿ ಬಲ' ಹಾಗೂ 'ಹೋರಾಡುವ ಛಲ' ಇದ್ದರೆ ಏನಾದರೂ ಸಾಹಸ ಮಾಡಬಹುದು. ನಮ್ಮ ನಾಡು ಇಂತಹ ಅನೇಕ ಸಾಹಸಿಗಳಿಗೆ ಜನ್ಮ ನೀಡಿದೆ. ಉತ್ತಮ ಆಹಾರವನ್ನು ಸೇವಿಸಿ, ಅದನ್ನು ಜೀರ್ಣಿಸಿಕೊಂಡು, ಒಳ್ಳೆಯ ದೇಹದಾರ್ಢ್ಯವನ್ನು ಹೊಂದಿ, ಅನೇಕ ಶೌರ್ಯ ಸಾಹಸಗಳನ್ನು ಪ್ರದರ್ಶಿಸಿ ಪ್ರಶಂಸೆಗೆ ಒಳಗಾಗುತ್ತಿದ್ದವರಲ್ಲಿ ಮಂಜಣನೂ ಒಬ್ಬ. ಇವನ ಸಾಹಸ ಶೌರ್ಯಗಳನ್ನು ಪಾಠಭಾಗದಲ್ಲಿ ಹೇಳಲಾಗಿದೆ.

## ಚಟುವಟಿಕೆಗಳು

### ಓದುವ

ಮಕ್ಕಳು ಗುಂಪಿನಲ್ಲಿ ಪಾಠಭಾಗವನ್ನು ಓದಲಿ. ಓದಿನ ಬಳಿಕ ಅಧ್ಯಾಪಿಕೆ ಪಾಠಭಾಗದಲ್ಲಿ ಬರುವ ಕೆಲವು ಆಶಯಗಳನ್ನು ಹೇಳುವುದು. ಆ ಆಶಯಕ್ಕೆ ಸಂಬಂಧಿಸಿದ ವಾಕ್ಯ ಯಾವುದೆಂದು ಪ್ರತಿಯೊಂದು ಗುಂಪಿನವರೂ ಹೇಳಲಿ. ಮೊದಲು ಉತ್ತರ ನೀಡಿದ ಗುಂಪಿಗೆ 20 ಅಂಕ. ಎರಡನೆಯದಾಗಿ ಉತ್ತರ ನೀಡಿದ ಮಕ್ಕಳಿಗೆ 15 ಅಂಕ. ಹೀಗೆ ಅಂಕಗಳನ್ನು ನೀಡುವುದು. ಆಟದ ಕೊನೆಯಲ್ಲಿ ಯಾವ ಗುಂಪು ಹೆಚ್ಚು ಅಂಕಗಳಿಸುವುದೋ ಆ ಗುಂಪು ಗೆಲ್ಲುವುದು.

ಈ ಚಟುವಟಿಕೆಯ ಅನಂತರ ಮಕ್ಕಳು ಪಾಠಭಾಗವನ್ನು ಹಂಚಿಕೊಂಡು ಗಟ್ಟಿಯಾಗಿ ಓದಲಿ. ಮಕ್ಕಳು ಓದಿನೆಡೆಗೆ ಗಮನ ಕೊಡುವಂತೆ ಸರದಿ ತಪ್ಪಿಸಿ ಓದಿಸುವುದು. ಓದುವಾಗ ತಪ್ಪುಗಳುಂಟಾದಲ್ಲಿ ಇತರ ಮಕ್ಕಳು ಅಥವಾ ಅಧ್ಯಾಪಕರು ನೆರವು ನೀಡುವುದು.

### ಸಂಕ್ಷಿಪ್ತವಾಗಿ ಹೇಳುವ

ಕಥೆಯನ್ನು ಓದಿದ ಬಳಿಕ ಕಥೆಯನ್ನು ಸಂಕ್ಷಿಪ್ತವಾಗಿ ಕೆಲವರು ಹೇಳಲಿ. ಈ ಚಟುವಟಿಕೆಯ ಅನಂತರವೂ ಆಶಯ ಸ್ಪಷ್ಟವಾಗದಿದ್ದಲ್ಲಿ ಅಧ್ಯಾಪಕರು ಸೂಕ್ತ ಸ್ವರಭಾರ, ಹಾವಭಾವಗಳೊಂದಿಗೆ ಓದುವುದು.

### ಪ್ರಶ್ನೆ ತಯಾರಿಸುವ

ಪಾಠಭಾಗದ ಆಶಯವನ್ನು ತಿಳಿದುಕೊಂಡು ಕೇಳಿದ ಪ್ರಶ್ನೆಗಳಿಗೆ ಉತ್ತರ ಹೇಳುವುದು ಕಲಿಕೆಯ ಒಂದು ವಿಧಾನವಾದರೆ ಆಶಯಕ್ಕೆ ಸಂಬಂಧಿಸಿದಂತಹ ಪ್ರಶ್ನೆಗಳನ್ನು ತಯಾರಿಸುವುದು ಇನ್ನೊಂದು ವಿಧಾನ. ಸಾಮಾನ್ಯವಾಗಿ ಮಕ್ಕಳಿಗೆ ಪಾಠಭಾಗದೆಡೆಯಲ್ಲಿ ಪ್ರಶ್ನೆಗಳನ್ನು ಕೇಳುವ ಸಂದರ್ಭಗಳು ಲಭಿಸುವುದು ವಿರಳ. ಪ್ರಶ್ನಿಸುವ ಸಾಮರ್ಥ್ಯವನ್ನು ಮಕ್ಕಳಲ್ಲಿ ಬೆಳೆಸುವ ಉದ್ದೇಶದಿಂದ ಈ ಚಟುವಟಿಕೆಯನ್ನು ನೀಡಲಾಗಿದೆ.

ಪಾಠಭಾಗವನ್ನು ಓದಿದ ಬಳಿಕ ಪ್ರತಿಯೊಬ್ಬ ಮಗುವೂ ಸಾಧ್ಯವಿರುವಷ್ಟು ಪ್ರಶ್ನೆಗಳನ್ನು ರಚಿಸಲಿ. ಕೆಲವರು ಮಂಡಿಸಲಿ. ಬಳಿಕ ಗುಂಪಿನಲ್ಲಿ ಉತ್ತಮಪಡಿಸಿ ಪ್ರಶ್ನೋತ್ತರ ಸ್ಪರ್ಧೆಯನ್ನು ಏರ್ಪಡಿಸುವುದು.

### ಪ್ರಶ್ನೆಗಳು

- ಮಂಜಣನಿಗೆ ಅಗೊಳಿ ಮಂಜಣ ಎಂಬ ಹೆಸರು ಬರಲು ಕಾರಣವೇನು?
- ಮಂಜಣನು ಯಾವೆಲ್ಲ ಕೆಲಸಗಳಲ್ಲಿ ನಿಷ್ಣಾತನಾಗಿದ್ದನು?
- ಮಂಜಣನ ಊಟದ ರೀತಿ ಹೇಗಿತ್ತು?
- ಮಂಜಣನು ಕಬ್ಬನ್ನು ಮುರಿಯುವ ಪಂಥ ಕಟ್ಟಿದ್ದು ಯಾವ ಊರಿನಲ್ಲಿ?
- ಮಂಜಣ ಹಾಗೂ ಪಡಂಬೂರಿನ ಯುವಕರೊಳಗೆ ಏನೆಂದು ಪಂಥವಾಯಿತು?

### ಶೀರ್ಷಿಕೆ ಬರೆಯುವ

ಶೀರ್ಷಿಕೆಗಳು ಆಕರ್ಷಕ ಹಾಗೂ ಆಶಯ ಭರಿತವಾಗಿರಬೇಕು. ಯಾವುದೇ ಲೇಖನದ ಶೀರ್ಷಿಕೆ ಮತ್ತು ಆಶಯದೊಳಗೆ ಸಂಬಂಧವಿರಬೇಕು. ಮಕ್ಕಳಲ್ಲಿ ಉತ್ತಮವಾದಂತಹ ಶೀರ್ಷಿಕೆಯನ್ನು ನೀಡುವ ಸಾಮರ್ಥ್ಯಗಳನ್ನು ಬೆಳೆಸಲು ಈ

ಚಟುವಟಿಕೆಯನ್ನು ನೀಡಲಾಗಿದೆ.

'ಅಗೊಳಿ ಮಂಜಣ' ಪಾಠಭಾಗವನ್ನು ಓದಿದ ಬಳಿಕ ಮಕ್ಕಳು ಮತ್ತು ಅಧ್ಯಾಪಕರು ಶೀರ್ಷಿಕೆಯ ಬಗೆ ಚರ್ಚೆ ನಡೆಸುವುದು, ಈ ಶೀರ್ಷಿಕೆಯ ಪಾಠ ಭಾಗಕ್ಕೆ ಹೊಂದಿಕೆಯಾಗುವುದೇ? ಹೇಗೆ? ಕಥೆಯ ಪ್ರಧಾನ ಆಶಯ ಯಾವುದು? ಮುಂತಾದ ಪ್ರಶ್ನೆಗಳನ್ನು ಚರ್ಚೆ ನಡೆಸುವ ಸಂದರ್ಭದಲ್ಲಿ ಕೇಳುವುದು. ಬಳಿಕ ಮಕ್ಕಳು ಈ ಕಥೆಗೆ ಯೋಗ್ಯವಾದ ಇತರ ಶೀರ್ಷಿಕೆಗಳನ್ನು ಬರೆಯಲಿ. ತರಗತಿಯಲ್ಲಿ ಮಂಡಿಸಲಿ. ಶೀರ್ಷಿಕೆಯನ್ನು ಬರೆಯಲು ಇರುವ ಕಾರಣಗಳನ್ನು ತಿಳಿಸಲಿ. ಮೌಲ್ಯನಿರ್ಣಯ ಸೂಚಕಗಳ ಆಧಾರದಲ್ಲಿ ಉತ್ತಮವಾದುದನ್ನು ಕಂಡುಕೊಳ್ಳಿರಿ.

## ಶೀರ್ಷಿಕೆ ಹೇಗಿರಬೇಕು?

ಕುತೂಹಲ ಕೆರಳಿಸುವಂತಿರಬೇಕು.

ಆಕರ್ಷಕ ಹಾಗೂ ಆಶಯ ಭರಿತವಾಗಿರಬೇಕು.

ಯೋಗ್ಯ ಪದಗಳ ಜೋಡಣೆ ಇರಬೇಕು.

## ಮಾದರಿ ಶೀರ್ಷಿಕೆಗಳು

ಮಹಾಸಾಹಸಿ – ಮಂಜಣನು ಕೇವಲ ತಿಂಡಿಬಾಕ ಮಾತ್ರವಲ್ಲ ಕಬ್ಬಿಣವನ್ನೇ ಮುರಿಯುವಷ್ಟು ಶೂರ ಆದುದರಿಂದ ಈ ಶೀರ್ಷಿಕೆ ಸೂಕ್ತವಾಗಿದೆ.

ಛಲದಂಕಮಲ್ಲ – ಮಂಜಣನು "ನಾನು ಕಬ್ಬನ್ನು ಮುರಿಯುವವನು ಆಡಿದ ಮಾತನ್ನು ಮುರಿಯುವವನಲ್ಲ" ಎಂದು ಹೇಳಿದ ಮಾತು ಆತನ ಛಲಕ್ಕೆ ಸಾಕ್ಷಿಯಾಗಿದೆ. ಆದುದರಿಂದ ಈ ಶೀರ್ಷಿಕೆ ಸೂಕ್ತವಾಗಿದೆ.

ಮೋಸಕ್ಕೆ ತಕ್ಕ ಶಾಸ್ತಿ – ಮಂಜಣನನ್ನು ಮೋಸದಿಂದ ಸೋಲಿಸಲು ಪಡಂಬೂರಿನ ಯುವಕರು ಪ್ರಯತ್ನಿಸಿದರು. ಆದರೆ ಮಂಜಣನ ಶೌರ್ಯದೆದುರು ಅದು ನಡೆಯಲಿಲ್ಲ. ಅವರು ಮೋಸಮಾಡಿದರೂ ಪಂಥಗೆಲ್ಲಲಾಗಲಿಲ್ಲ.

ಇದಕ್ಕಿಂತಲೂ ಯೋಗ್ಯವಾದ ಶೀರ್ಷಿಕೆಗಳನ್ನು ಅಧ್ಯಾಪಕರು ನೀಡಬಹುದು.

## ಸರಿತಪ್ಪು ಬರೆಯುವ

ಮಕ್ಕಳಿಗೆ ಕಥೆಯ ಆಶಯವು ಸ್ಪಷ್ಟವಾಗಿದೆಯೇ ಎಂದು ತಿಳಿಯಲು ಈ ಚಟುವಟಿಕೆಯನ್ನು ನೀಡಲಾಗಿದೆ.

ಪಾಠಪುಸ್ತಕದಲ್ಲಿ ನೀಡಿರುವ ಹೇಳಿಕೆಗಳು ಸರಿಯೇ ತಪ್ಪೇ ಎಂದು ಮಕ್ಕಳು ಓದಿನ ಆಧಾರದಲ್ಲಿ ಬರೆಯಲಿ. ತಪ್ಪಾದ ಹೇಳಿಕೆಗಳನ್ನು ಸರಿಪಡಿಸಲಿ. ಬಳಿಕ ಮಂಡಿಸಲಿ. ತಪ್ಪಿದ್ದಲ್ಲಿ ಅಧ್ಯಾಪಕರ ಸಹಾಯದಿಂದ ಬರವಣಿಗೆ ಪುಸ್ತಕದಲ್ಲಿ ಸರಿಪಡಿಸಿ ಬರೆಯಲಿ.

**ಸಮಾನಾರ್ಥ ಪದ ಬರೆಯುವ**

ಮಕ್ಕಳು ಪಠ್ಯದಲ್ಲಿ ನೀಡಲಾದ ವಾಕ್ಯಗಳನ್ನು ಗಮನವಿಟ್ಟು ಓದಲಿ.

ಬಳಿಕ ಅಡಿಗೆರೆ ಎಳೆದ ಪದಗಳನ್ನು ಬರವಣಿಗೆ ಪುಸ್ತಕದಲ್ಲಿ ಬರೆಯಲಿ.

ಪಾಠಭಾಗದಿಂದ ಇದೇ ಅರ್ಥ ಕೊಡುವ ಪದಗಳು ಯಾವುವೆಂದು ಕಂಡುಹಿಡಿದು ಬರೆಯಲಿ. ಆ ಪದಗಳಿಂದ ಹೊಸವಾಕ್ಯವನ್ನು ಬರೆಯಲಿ. ಕೆಲವರು ಮಂಡಿಸಲಿ. ಅಧ್ಯಾಪಕರು ಪದಗಳ ಅರ್ಥ ಹಾಗೂ ಹೊಸವಾಕ್ಯಗಳನ್ನು ಬರೆಯುವುದು. ಇದರ ಆಧಾರದಲ್ಲಿ ಮಕ್ಕಳು ತಮ್ಮ ವಾಕ್ಯಗಳನ್ನು ಉತ್ತಮಪಡಿಸಲಿ.

ಪ್ರೀತಿ – ಅಕ್ಕರೆ – ತಂದೆ ತಾಯಿಗಳ ಮಕ್ಕಳನ್ನು ಅಕ್ಕರೆಯಿಂದ ಬೆಳೆಸುತ್ತಾರೆ.

ಜಲ – ನೀರು – ಜೀವಜಾಲಗಳ ಬದುಕಿಗೆ ನೀರು ಅತೀ ಅಗತ್ಯ

ಪಟ್ಟಣ – ಪೇಟೆ – ಪೇಟೆಯಲ್ಲಿ ವಾಹನಗಳ ಗದ್ದಲ ತುಂಬಿರುತ್ತದೆ.

ಸಮೂಹ – ಗುಂಪು – ಸರ್ಕಸ್ ನೋಡಲುಜನರ ಗುಂಪು ನೆರೆದಿತ್ತು.

ಸಮಯ – ಹೊತ್ತು – ಹೊತ್ತಿಗೆ ಸರಿಯಾಗಿ ಆಹಾರ ಸೇವಿಸಬೇಕು.

ವಂಚನೆ – ಮೋಸ – ನಾವು ಯಾರಿಗೂ ಮೋಸ ಮಾಡಬಾರದು.

ಉದಾ : ಪುಳ್ಳೂರು ಬಾಚ

ರಾಣಾ ಪ್ರತಾಪ ಸಿಂಹ

## 3. ಶಿಸ್ತಿನ ಸಿಪಾಯಿಗಳು

ಜವಾಬ್ದಾರಿಯನ್ನು ವಹಿಸಿಕೊಂಡು ನಿರ್ವಹಿಸುವ ಛಲಯುವ ಪೀಳಿಗೆಯಲ್ಲಿರಬೇಕು. 'ಇಂದಿನ ಮಕ್ಕಳೇ ಮುಂದಿನ ಜನಾಂಗ' ಆದುದರಿಂದ ಚಿಕ್ಕಂದಿನಲ್ಲಿಯೇ ಮಕ್ಕಳಿಗೆ ಇಂತಹ ಸಣ್ಣ ಪುಟ್ಟ ಜವಾಬ್ದಾರಿಗಳನ್ನು ನೀಡಬೇಕು. ಶಾಲೆಯ ಎಲ್ಲಾ ಚಟುವಟಿಕೆಗಳಲ್ಲಿಯೂ ಮಕ್ಕಳಿಗೆ ಜವಾಬ್ದಾರಿಯನ್ನು ನೀಡಿದರೆ ಮಕ್ಕಳು ಅದನ್ನು ಸಮರ್ಥವಾಗಿ ನಿರ್ವಹಿಸಬಲ್ಲರು. ಅವರ ಉತ್ಸಾಹವೂ ವೃದ್ಧಿಸುತ್ತದೆ. ಚಟುವಟಿಕೆಗಳೂ ಸಮರ್ಪಕವಾಗಿ ನಡೆಯುತ್ತವೆ. ಶಾಲಾ ಚಟುವಟಿಕೆಗಳಲ್ಲಿ ಸಮರ್ಥವಾಗಿ ಕಾರ್ಯನಿರ್ವಹಿಸಲು ಸಧ್ಧರಾಗಿರುವವರೇ ಸೇವಾದಳದವರು. ಮಕ್ಕಳ ಸೇವಾಸಳವಾದ ರಬ್ ಮತ್ತು ಬುಲ್ ಬುಲ್‌ನ ಬಗ್ಗೆ ಪಾಠಭಾಗದಲ್ಲಿ ನೀಡಲಾಗಿದೆ. ಅಧ್ಯಾಪಕರು ಸೇವಾದಳದ ಮಹತ್ವವನ್ನು ಮಕ್ಕಳಿಗೆ ತಿಳಿಯಪಡಿಸುವುದು ಪಾಠದ ಉದ್ದೇಶವಾಗಿದೆ.

**ಪಾಠಭಾಗದೆಡೆಗೆ**

ನೀವು ಯಾವುದಾದರೂ ಶಾಲೆಗಳಲ್ಲಿ ತಲೆಗೆ ಟೋಪಿ, ಸಮವಸ್ತ್ರ, ಕೊರಳ ಪಟ್ಟಿ ಶೂಗಳನ್ನು ಧರಿಸಿ ಸದಾ ಚಟುವಟಿಕೆಯಿಂದಿರುವ ಮಕ್ಕಳ ಸಮೂಹವನ್ನು ಕಂಡಿದ್ದೀರಾ? ಎಂದು ಮಕ್ಕಳಲ್ಲಿ ಪ್ರಶ್ನಿಸುವುದು. ನಿಮ್ಮ ಶಾಲೆಯಲ್ಲಿಯೂ ಇಂತಹ ಮಕ್ಕಳು ಇರುವರೇ ಅವರನ್ನು ಏನೆಂದು ಕರೆಯುತ್ತಾರೆ? ಅವರು ಯಾವೆಲ್ಲ ಕೆಲಸಗಳನ್ನು ಮಾಡುತ್ತಾರೆ? ಎಂದು

ಪ್ರಶ್ನಿಸುವುದು. ಇಂತಹ ಮಕ್ಕಳು ಕುರಿತು ಅವರು ನಡೆಸುವ ಕಾರ್ಯ ಚಟುವಟಿಕೆಗಳ ಕುರಿತು ಹೆಚ್ಚಿನ ವಿವರಗಳನ್ನು ತಿಳಿಯಲು ಪಾಠಭಾಗವನ್ನು ಓದಲು ಹೇಳುವುದು.

## ಉತ್ತರ ಬರೆಯುವ

ಓದಿನ ಬಳಿಕ ಮಕ್ಕಳು ಪಾಠಭಾಗದಲ್ಲಿ ನೀಡಲಾದ ಪ್ರಶ್ನೆಗಳಿಗೆ ವೈಯಕ್ತಿಕವಾಗಿ ಉತ್ತರವನ್ನು ಬರೆಯಲಿ. ಗುಂಪಿನಲ್ಲಿ ಮಂಡಿಸಲಿ. ಚರ್ಚಿಸಿ ಉತ್ತಮಪಡಿಸಲಿ. ಅಧ್ಯಾಪಕರು ಉತ್ತರವನ್ನು ಕ್ರೋಡೀಕರಿಸಿ ಬರೆಯುವುದು. ಇದರ ಆಧಾರದಲ್ಲಿ ಮಕ್ಕಳು ತಮ್ಮ ಉತ್ತರಗಳನಮ್ಮು ಉತ್ತಮಪಡಿಸುವುದು.

## ಸರಿಯಾದ ಪದ ಬರೆಯುವ

ಪಠ್ಯದಲ್ಲಿ ಸರಿಯಾದ ಪದ ಬರೆಯವ ಚಟುವಟಿಕೆಯನ್ನು ನೀಡಲಾಗಿದೆ. ಮಕ್ಕಳಲ್ಲಿ ಅಕ್ಷರ ತಪ್ಪುಗಳನ್ನು ಗುರುತಿಸುವ ಸಾಮರ್ಥ್ಯ ಬೆಳೆಸುವ ಉದ್ದೇಶದಿಂದ ಈ ಚಟುವಟಿಕೆಯನ್ನು ನೀಡಲಾಗಿದೆ.

ಕೊಟ್ಟಿರುವ ಪದಗಳನ್ನು ಮಕ್ಕಳು ಗಮನಿಸಿ ಗಟ್ಟಿಯಾಗಿ ಓದಲಿ. ಬಳಿಕ ಪದಗಳ ಸರಿಯಾದ ರೂಪ ಯಾವುದೆಂದು ಕಂಡುಕೊಳ್ಳಲು ಬರವಣಿಗೆಯ ಪುಸ್ತಕದಲ್ಲಿ ಬರಯಲಿ.

- ವಾರ್ಷಿಕೋತ್ಸವ
- ಸಮವಸ್ತ್ರ
- ಸಂಭ್ರಮ
- ಮುಖ್ಯೋಪಾಧ್ಯಾಯರು

## ಕಥೆಯನ್ನು ಮುಂದುವರಿಸುವ

ಮಕ್ಕಳಲ್ಲಿ ಸೃಜನಶೀಲ ಬರವಣಿಗೆಯ ಸಾಮರ್ಥ್ಯವನ್ನು ಬೆಳೆಸುವ ಉದ್ದೇಶದಿಂದ ಈ ಚಟುವಟಿಕೆಯನ್ನು ನೀಡಲಾಗಿದೆ.

ಪಾಠಪುಸ್ತಕದಲ್ಲಿ ಕೊಟ್ಟಿರುವ ಕಥಾಭಾಗವನ್ನು ಮಕ್ಕಳು ಓದಲಿ. ಕೊಟ್ಟಿರುವ ಭಾಗದ ಸಂಪೂರ್ಣ ಆಶಯಗ್ರಹಣವಾಗಿದೆಯೇ ಎಂದು ತಿಳಿಯಲು ಕೆಲವು ಪ್ರಶ್ನೆಗಳನ್ನು ಕೇಳುವುದು.

ಉದಾ :

- ಬಡವನು ದಾರಿಯಲ್ಲಿ ಹೋಗುತ್ತಿರುವಾಗ ಏನನ್ನು ಕಂಡನು?
- ಪೆಟ್ಟಿಗೆಯಲ್ಲಿ ಏನಿರಬಹುದು ಎಂದು ಬಡವನು ಊಹಿಸಿದನು?
- ಬಡವನ ಹೆಂಡತಿ ಮಕ್ಕಳೆಲ್ಲ ಪೆಟ್ಟಿಗೆಯ ಸುತ್ತ ನೆರೆಯಲು ಕಾರಣವೇನು?

ಮಕ್ಕಳಲ್ಲಿ ಸಂಪೂರ್ಣ ಆಶಯಗ್ರಹಣವಾದ ಬಳಿಕ ಕಥೆಯನ್ನು ವೈಯಕ್ತಿಕವಾಗಿ ಮುಂದುವರಿಸಿ ಬರೆದು ಯೋಗ್ಯವಾದ ಶೀರ್ಷಿಕೆಯನ್ನು ನೀಡಲಿ. ತರಗತಿಯಲ್ಲಿ ಮಂಡಿಸಲಿ. ಉತ್ತಮವಾದ ಕಥೆಯನ್ನು ಸೂಚಕಗಳ ಆಧಾರದಲ್ಲಿ ಕಂಡುಕೊಳ್ಳಲಿ. ಸೂಚಕಗಳ ಹಾಗೂ ಇತರರ ಕಥೆಗಳ ಆಧಾರದಲ್ಲಿ ತಮ್ಮ ಕಥೆಗಳನ್ನು ಉತ್ತಮಪಡಿಸಲಿ. ಉತ್ತಮಪಡಿಸಿದ ಕಥೆಗಳನ್ನು ಸಂಗ್ರಹಿಸಿ ಸಂಚಿಕೆ ತಯಾರಿಸುವುದು.

**ಕಥೆ ಮುಂದುವರಿಸುವ ಸೂಚಕಗಳು :**

- ಕಥೆಯ ಮೊದಲ ಭಾಗಕ್ಕೆ ಹೊಂದಿಕೆಯಾಗುವಂತೆ ಮುಂದಿನ ಭಾಗ
- ಕುತೂಹಲವಾದ ಮುಂದುವರಿಕೆ
- ಅರ್ಥಪೂರ್ಣ ಮುಕ್ತಾಯ
- ಯೋಗ್ಯವೂ ಆಕರ್ಷಕವೂ ಆದ ಶೀರ್ಷಿಕೆ

# 4. ತಿಲಕಾಷ್ಠ ಮಹಿಷ ಬಂಧನ

ಜೀವನದಲ್ಲಿ ಹಲವಾರು ಸಮಸ್ಯೆಗಳು ಎದುರಾಗುತ್ತವೆ. ಕೆಲವನ್ನು ಶಕ್ತಿಸಾಮರ್ಥ್ಯದಿಂದ ಪರಿಹರಿಸಿಕೊಂಡರೆ ಇನ್ನೂ ಕೆಲವನ್ನೂ ಬುದ್ಧಿವಂತಿಕೆಯಿಂದ ಪರಿಹರಿಸಬಹುದು. ಕೃಷ್ಣದೇವರಾಯನ ಆಸ್ಥಾನದಲ್ಲಿದ್ದ ತೆನಾಲಿ ರಾಮಕೃಷ್ಣನು ಬುದ್ಧಿವಂತಿಕೆಯಿಂದ ಸಮಸ್ಯೆಯನ್ನು ಪರಿಹರಿಸಿಕೊಳ್ಳುವುದರಲ್ಲಿ ಹೆಸರುವಾಸಿ. ಅವನ ಚಾತುರ್ಯಕ್ಕೆ ಸಂಬಂಧಿಸಿದ ನಾಟಕವನ್ನು ಪಾಠಭಾಗದಲ್ಲಿ ನೀಡಲಾಗಿದೆ.

ನಾಟಕದ ಮೂಲಕ ಅಭಿನಯ, ಮಾತುಗಾರಿಕೆ, ಸೃಜನಶೀಲತೆ ಮೊದಲಾದವುಗಳನ್ನು ಉತ್ತಮಪಡಿಸುವುದು ಈ ಪಾಠದ ಉದ್ದೇಶ.

**ಪಾಠಭಾಗದೆಡೆಗೆ**

ಅಧ್ಯಾಪಕರು ತೆನಾಲಿ ರಾಮಕೃಷ್ಣನ ಬುದ್ಧಿವಂತಿಕೆಗೆ ಸಂಬಂಧಿಸಿದ ಕಥೆಯೊಂದನ್ನು 'ತೆನಾಲಿ ರಾಮಕೃಷ್ಣನ ಕಥೆಗಳು' ಎಂಬ ಪುಸ್ತಕದಿಂದ ಆರಿಸಿ ಹೇಳುವುದು. ಅನಂತರ ಇದೇ ರೀತಿ ಬುದ್ಧಿವಂತಿಕೆಯಿಂದ ಸಮಸ್ಯೆಯನ್ನು ಪರಿಹರಿಸಿಕೊಂಡ ನಾಟಕವೊಂದನ್ನು ಪಾಠಭಾಗದಲ್ಲಿ ನೀಡಲಾಗಿದೆ. ಅದರ ಒಂದನೇ ದೃಶ್ಯವನ್ನು ಅಧ್ಯಾಪಕರು ಸೂಕ್ತ ಹಾವಭಾವ ಸ್ವರಭಾವದೊಂದಿಗೆ ತರಗತಿಯಲ್ಲಿ ಮಂಡಿಸುವುದು. ಅದೇ ರೀತಿ ಉಳಿದ ದೃಶ್ಯಗಳನ್ನು ಮಕ್ಕಳು ಮಂಡಿಸಲಿ. ನಾಟಕದ ಮಂಡನೆಯ ಬಳಿಕ ಮಕ್ಕಳಿಗೆ ಆಶಯಗ್ರಹಣವಾಗಿದೆಯೇ ಎಂದು ತಿಳಿಯಲು ಅಧ್ಯಾಪಕರು ಕೆಲವು ಸರಳ ಪ್ರಶ್ನೆಗಳನ್ನು ಕೇಳವುದು.

ಉದಾ :

- ವಿದ್ಯಾನಿಧಿಯು ಕೃಷ್ಣದೇವರಾಯನ ಆಸ್ಥಾನಕ್ಕೆ ಬರಲು ಕಾರಣವೇನು?
- ಪೆದ್ದಣ್ಣ ಹಾಗೂ ತಿಮ್ಮಣ್ಣರು ವಿದ್ಯಾನಿಧಿಯ ಸವಾಲಿನಿಂದ ತಪ್ಪಿಸಿಕೊಳ್ಳಲು ಹೇಳಿದ ಸಬೂಬುಗಳು ಯಾವುವು?
- ತೆನಾಲಿ ರಾಮನು ಮನೆಯಲ್ಲಿ ಯೋಚಿಸುತ್ತಾ ಕುಳಿತುಕೊಳ್ಳಲು ಕಾರಣವೇನು?

ಮಕ್ಕಳು ಅಧ್ಯಾಪಕರು ಕೇಳಿದ ಪ್ರಶ್ನೆಗೆ ಉತ್ತರ ಹೇಳಲಿ. ಮಕ್ಕಳಿಗೆ ಸರಿಯಾದ ಆಶಯಗ್ರಹಣವಾದ ಬಳಿಕ ಮುಂದಿನ

ಚಟುವಟಿಕೆ ನಡೆಸುವುದು.

### ಉತ್ತರ ಬರೆಯುವ

ಮಕ್ಕಳು ಪಾಠಭಾಗವನ್ನು ಓದಿ ನೀಡಲಾದ ಪ್ರಶ್ನೆಗಳಿಗೆ ವೈಯಕ್ತಿಕವಾಗಿ ಉತ್ತರ ಬರೆಯಲಿ. ಗುಂಪಿನಲ್ಲಿ ಉತ್ತಮಪಡಿಸಿ ಮಂಡಿಸಲಿ. ಬಳಿಕ ಬರವಣಿಗೆಯ ಪುಸ್ತಕದಲ್ಲಿ ಸರಿಪಡಿಸಿ ಬರೆಯಲಿ. ಅಧ್ಯಾಪಕರು ಸಹಾಯ ನೀಡುವುದು.

### ಬರೆಯುವ

ಪಠ್ಯದಲ್ಲಿ ನೀಡಿರುವ ಹೇಳಿಕೆಯನ್ನು ಯಾರು ಯಾರಿಗೆ ಹೇಳಿದರು ಎಂಬುದನ್ನು ಮಕ್ಕಳು ವೈಯಕ್ತಿಕವಾಗಿ ಬರೆದು ಮಂಡಿಸಲಿ. ಅಧ್ಯಾಪಕರು ಕರಿಹಲಗೆಯಲ್ಲಿ ಕ್ರೋಡೀಕರಿಸಲಿ. ಇದರ ಆಧಾರದಲ್ಲಿ ಮಕ್ಕಳು ತಮ್ಮ ಬರವಣಿಗೆಯನ್ನು ಇನ್ನಷ್ಟು ಉತ್ತಮಪಡಿಸಲಿ.

### ಊಹಿಸಿ ಹೇಳುವ

ಭಾಷಾ ಸಾಮರ್ಥ್ಯದೊಂದಿಗೆ ಚಿಂತನಾ ಸಾಮರ್ಥ್ಯವು ಮಕ್ಕಳಲ್ಲಿ ಬೆಳೆಯಲು ಈ ಚಟುವಟಿಕೆಯನ್ನು ನೀಡಲಾಗಿದೆ.

ವಿದ್ಯಾನಿಧಿಗಳು ರಾಮಕೃಷ್ಣನೊಂದಿಗೆ 'ತಿಲಕಾಷ್ಠ ಮಹಿಷ ಬಂಧನ' ದ ಕುರಿತು ವಾದಮಾಡಲು ಒಪ್ಪಿಕೊಂಡಿದ್ದರೆ ಏನಾಗುತ್ತಿತ್ತು? ಆ ಗ್ರಂಥದಲ್ಲಿ ಯಾವ ವಿಚಾರವಿದೆ? ಎಂದು ವಿದ್ಯಾನಿಧಿಗಳು ಕೇಳಿದರೆ ರಾಮಕೃಷ್ಣನು ಏನೆಂದು ಉತ್ತರಿಸುತ್ತಿದ್ದನು? ಆ ಗ್ರಂಥವನ್ನು ಒಮ್ಮೆ ಓದಲು ಕೊಡುವಿರಾ? ಎಂದರೆ ರಾಮಕೃಷ್ಣನ ಅವಸ್ಥೆ ಏನಾಗುತ್ತಿತ್ತು? ಎಂಬುದನ್ನು ಮಕ್ಕಳು ಊಹಿಸಿ ಹೇಳಲಿ.

### ವಿರೋಧಾರ್ಥ ಪದ ಬರೆಯುವ

ಮಕ್ಕಳು ಪಠ್ಯದಲ್ಲಿ ನೀಡಿರುವ ವಾಕ್ಯಗಳನ್ನು ಓದಲಿ. ಆ ವಾಕ್ಯದಲ್ಲಿ ಅಡಿಗೆರೆ ಎಳೆದ ಪದಗಳನ್ನು ಗಮನಿಸಿಕೊಂಡು ಅವುಗಳ ವಿರೋಧಾರ್ಥ ಪದ ಬರೆಯಲಿ. ಬಳಿಕ ಮಂಡಿಸಲಿ.

### ವಿರೋಧಾರ್ಥ ಪದಗಳು

| | | |
|---|---|---|
| ಸುಲಭ | – | ಕಷ್ಟ |
| ಗೆಲುವು | – | ಸೋಲು |
| ಅಸಾಮಾನ್ಯ | – | ಸಾಮಾನ್ಯ |
| ತಪ್ಪು | – | ಸರಿ |
| ಅಗೌರವ | – | ಗೌರವ |

## ಲೇಖನ ಚಿಹ್ನೆಗಳನ್ನುಪಯೋಗಿಸಿ ಬರೆಯುವ

ಯಾವುದೇ ಲೇಖನ, ಕಥೆ, ಕವಿತೆ, ಸಂಭಾಷಣೆ, ನಾಟಕ ಇತ್ಯಾದಿಗಳನ್ನು ಬರೆಯುವಾಗ ಲೇಖನ ಚಿಹ್ನೆಗಳನ್ನು ಬಳಸುತ್ತಾರೆ. ಈ ಚಿಹ್ನೆಗಳನ್ನು ಬಳಸಿಕೊಂಡು ಓದುವುದರಿಂದ ಓದುವಿಕೆಯು ಅರ್ಥಪೂರ್ಣವೆನಿಸುತ್ತದೆ.

ಲೇಖನ ಚಿಹ್ನೆಗಳ ಪ್ರಾಧಾನ್ಯವನ್ನು ಮಕ್ಕಳು ತಿಳಿಯುವುದಕ್ಕಾಗಿ ಈ ಚಟುವಟಿಕೆಯನ್ನು ನೀಡಲಾಗಿದೆ.

ಮಕ್ಕಳು ತಮ್ಮ ಪೂರ್ವಜ್ಞಾನದ ಆಧಾರದಲ್ಲಿ ಕೊಟ್ಟಿರುವ ವಾಕ್ಯಗಳಿಗೆ ಲೇಖನ ಚಿಹ್ನೆಗಳನ್ನುಪಯೋಗಿಸಿ ಬರೆಯಲಿ. ಗುಂಪಿನಲ್ಲಿ ಉತ್ತಮಪಡಿಸಿ ಮಂಡಿಸಲಿ. ಬಳಿಕ ಅಧ್ಯಾಪಕರು ಕೊಟ್ಟಿರುವ ವಾಕ್ಯಗಳಿಗೆ ಲೇಖನ ಚಿಹ್ನೆಗಳನ್ನುಪಯೋಗಿಸಿ ಬರೆಯುವುದು. ಅನಂತರ ಮಕ್ಕಳು ತಮ್ಮ ಬರವಣಿಗೆಯನ್ನು ಉತ್ತಮಪಡಿಸುವುದು.

“ಕಾಗೆರಾಯ, ದಯವಿಟ್ಟು ನನಗೆ ನಿನ್ನ ಗೂಡಿನಲ್ಲಿ ಸ್ವಲ್ಪ ಜಾಗ ಕೊಡುವೆಯಾ? ಈ ಚಳಿಗೆ ನಾನು ಬದುಕಲಾರೆ” ಎಂದು ಗುಬ್ಬಿ. “ಛೀ! ಹೋಗಾಚೆ!! ನಿನಗಿಲ್ಲಿ ಜಾಗವಿಲ್ಲ” ಎಂದು ಗದರಿಸಿತು ಕಾಗೆ. ಗುಬ್ಬಿಯು ಇನ್ನೇನು ಮಾಡುವುದು? ಎಂದು ಚಿಂತಿಸುತ್ತಾ ಅಲ್ಲಿಂದ ಹಾರಿ ಹೋಯಿತು.

## ಅಭಿನಯ

ನಾಟಕವನ್ನು ಅಭಿನಯ ಮಾಡುವುದಕ್ಕಿಂತ ಮೊದಲು ಮಕ್ಕಳನ್ನು 4 ಗುಂಪುಗಳಾಗಿ ಮಾಡುವುದು. ಪ್ರತಿಯೊಂದು ಗುಂಪುಗಳಿಗೂ ಒಂದೊಂದು ದೃಶ್ಯವನ್ನು ನೀಡುವುದು. ಮಕ್ಕಳು ತಮಗೆ ದೊರೆತ ದೃಶ್ಯವನ್ನು ಗುಂಪಿನಲ್ಲಿ ಓದಲಿ. ಅದನ್ನು ತರಗತಿಯಲ್ಲಿ ಅಭಿನಯಿಸಲು ಅಗತ್ಯವಾದ ತಯಾರಿ ನಡೆಸಲಿ. ಅಭಿನಯಿಸುವ ಸಂದರ್ಭದಲ್ಲಿ ಮಕ್ಕಳು ಪಠ್ಯದಲ್ಲಿರುವ ಅದೇ ವಾಕ್ಯಗಳನ್ನು ಹೇಳಬೇಕೆಂದಿಲ್ಲ. ಆ ಆಶಯಗಳು ಬರುವಂತಹ ವಾಕ್ಯಗಳನ್ನು ಹೇಳುತ್ತಾ ಅಭಿನಯಿಸಲಿ. ಅಗತ್ಯವಿದ್ದಲ್ಲಿ ಪುಸ್ತಕಗಳನ್ನು ಬಳಸಿಕೊಳ್ಳಲಿ. ಉತ್ತಮವಾಗಿ ಅಭಿನಯಿಸಿದ ಗುಂಪು ಯಾವುದೆಂದು ಮಕ್ಕಳೇ ಸೂಚಕಗಳ ಸಹಾಯದಿಂದ ಕಂಡುಕೊಳ್ಳಲಿ. ಚೆನ್ನಾಗಿ ಅಭಿನಯಿಸಿದ ಗುಂಪನ್ನು ಅಭಿನಂದಿಸುವುದು.

## ನಾಟಕದ ವಿಶೇಷತೆ

ನಾಟಕವು ಸಾಹಿತ್ಯದ ಒಂದು ವಿಶಿಷ್ಟ ಪ್ರಕಾರವಾಗಿದೆ. ಇದು ಭಾಷಾಜ್ಞಾನದ ಬೆಳವಣಿಗೆಯಲ್ಲಿ ಮಾತ್ರವಲ್ಲ ಮಕ್ಕಳ ವ್ಯಕ್ತಿತ್ವದ ವಿಕಾಸದಲ್ಲಿ ಪ್ರಧಾನ ಪಾತ್ರವನ್ನು ವಹಿಸುತ್ತದೆ. ಸಾಹಿತ್ಯ, ಸಂಭಾಷಣೆ, ಅಭಿನಯ ಇತ್ಯಾದಿ ಒಳಗೊಂಡಿರುವುದರಿಂದ ಮಕ್ಕಳಲ್ಲಿರುವ ಸುಪ್ತ ಪ್ರತಿಭೆಯ ಪ್ರಕಟಣೆಗೆ ಒಂದು ಒಳ್ಳೆಯ ಮಾಧ್ಯಮವಾಗುತ್ತದೆ. ಆದುದರಿಂದ ಅದನ್ನು ಕೇವಲ ಒಂದು ಪಾಠವೆಂಬುದಕ್ಕಿಂತಲೂ ಮಿಗಿಲಾಗಿ ಕಾಣಬೇಕಾಗುತ್ತದೆ. ಪ್ರಾರಂಭದ ಹಂತದಲ್ಲಿ ಓದುವಿಕೆಗೆ ಹೆಚ್ಚು ಪ್ರಾಧಾನ್ಯ ನೀಡಿದರೆ ಎರಡನೆಯ ಹಂತದಲ್ಲಿ ಪಾತ್ರದ ಚಿತ್ರಣಕ್ಕೆ ಹೆಚ್ಚು ಪ್ರಾಧಾನ್ಯವನ್ನು ಕೊಡಲು ಗಮನಿಸಬೇಕು. ಇಲ್ಲಿ ಮಕ್ಕಳ ಸಂಭಾಕಂಪನದ ನಿವಾರಣೆಗೂ ಅವಕಾಶ ದೊರೆತಂತಾಗುತ್ತದೆ. ಮಕ್ಕಳು ಸಭೆಯ ಮುಂದೆ ಬಂದು ತಮ್ಮ ಪ್ರತಿಭೆಯನ್ನು ಪ್ರಕಟಿಸುವ ಕ್ರಿಯೆಯಲ್ಲಿ ತಮಗೆ ಅರಿವಿಲ್ಲದೇ ತೊಡಗುತ್ತಾರೆ.

**ನಾಟಕ ಅಭಿನಯ ಹೇಗಿರಬೇಕು?**

**ಮೌಲ್ಯನಿರ್ಣಯ ಸೂಚಕಗಳು :**

- ಅಭಿನಯ
- ಸೂಕ್ತ ಸ್ವರಭಾವದೊಂದಿಗೆ ಸಂಭಾಷಣೆ
- ವೇಷಭೂಷಣಗಳು
- 

**ಕಥೆ ಹೇಳುವ**

ಮಕ್ಕಳಿಗೆ ಪಾಠಭಾಗದ ಆಶಯವು ಸ್ಪಷ್ಟವಾಗಿದೆಯೇ ಎಂದು ತಿಳಿಯುವುದರೊಂದಿಗೆ ಅವರಲ್ಲಿ ಮಾತುಗಾರಿಕೆ ಹಾಗೂ ಸೃಜನಶೀಲತೆಯ ಕೌಶಲ್ಯವನ್ನು ಹೆಚ್ಚಿಸುವ ಉದ್ದೇಶದಿಂದ ಈ ಚಟುವಟಿಕೆಯನ್ನು ನೀಡಲಾಗಿದೆ.

ಮಕ್ಕಳು ಒಬ್ಬೊಬ್ಬರಂತೆ 'ತಿಲಕಾಷ್ಠ ಮಹಿಷಬಂಧನ' ವೆಂಬ ನಾಟಕವನ್ನು ಕಥೆಯಾಗಿ ಹೇಳಲಿ. ಮೌಲ್ಯನಿರ್ಣಯ ಸೂಚಕಗಳನ್ನು ಮಕ್ಕಳೇ ಕಂಡುಕೊಳ್ಳಲಿ. ಉತ್ತಮವಾಗಿ ಕಥೆ ಹೇಳಿದವರನ್ನು ಅಭಿನಂದಿಸುವುದು.

**ಸಂಗ್ರಹಿಸುವ**

ಬುದ್ಧಿವಂತಿಕೆಯಿಂದ ಸಮಸ್ಯೆಗಳನ್ನು ಪರಿಹರಿಸಿಕೊಂಡವರ ಕಥೆಗಳನ್ನು ಹಿರಿಯರಿಂದ ಕೇಳಿ ತಿಳಿದು ಅಥವಾ ಪುಸ್ತಕಗಳಿಂದ ಓದಿ ಬಾಲಸಭೆಯಲ್ಲಿ ಮಂಡಿಸಲಿ. ಸಂಗ್ರಹಿಸಿದ ಕಥೆಗಳನ್ನುಪಯೋಗಿಸಿ ಸಂಚಿಕೆ ತಯಾರಿಸಲಿ.

## ಈ ಜಲಾಶಯದ ನೀರು ಹೇಗೆ ನಿಂತಿದೆ?

ಒಂದು ಸಲ ಕೃಷ್ಣ ದೇವರಾಯನು ತನ್ನ ಎಂಟೂ ಜನ ವಿದ್ವಾಂಸರೊಂದಿಗೆ ವಾಯು ವಿಹಾರಕ್ಕೆಂದು ತಾನೇ ಕಟ್ಟಿಸಿದ್ದ ಜಲಾಶಯದ ದಂಡೆಗೆ ಹೋದನು. ಕೃಷ್ಣ ದೇವರಾಯನು ತನ್ನ ಆಸ್ಥಾನದ ವಿದ್ವಾಂಸರೊಡನೆ ಈ ಮಾತು ಈ ಮಾತು ಆಡುತ್ತಾ ಸೃಷ್ಟಿಯ ಸೌಂದರ್ಯವನ್ನು ಸವಿಯುತ್ತ ಜಲಾಶಯದ ದಂಡೆಯ ಮೇಲೆ ಸಂತೋಷದಿಂದ ಅಡ್ಡಾಡುತ್ತಿದ್ದನು. ತೆನ್ನಾಲಿ ರಾಮಕೃಷ್ಣನೂ ಆ ವಿದ್ವಾಂಸರಲ್ಲಿ ಒಬ್ಬನಾಗಿ ಎಲ್ಲರಿಗಿಂತಲೂ ಹಿಂದಿದ್ದು ಅರಸನ ಭಾವನೆಯನ್ನು ನಿರೀಕ್ಷಿಸುತ್ತಿದ್ದನು.

ಅರಸನು ತಾನು ಕಟ್ಟಿಸಿದ್ದ ಜಲಾಶಯವನ್ನು ಕಂಡು ಏನೋ ವಿಚಾರಿಸಿ ತನ್ನ ಆಸ್ಥಾನ ವಿದ್ವಾಂಸರನ್ನು ಪರೀಕ್ಷಿಸಬೇಕೆಂದು ಒಂದು ಸಲ ತನ್ನ ವಿದ್ವಾಂಸರನ್ನು ಪರೀಕ್ಷಾ ದೃಷ್ಟಿಯಿಂದ ನೋಡಿ – ವಿದ್ವಾಂಸರೇ, ಆ ಜಲಾಶಯದ ನೀರು ಹೇಗೆ ನಿಂತಿದೆ? ಎಂದು ಕೇಳಿದನು. ಆಗ ಒಬ್ಬ ವಿಧ್ವಾಂಸನು ಈ ಜಲಾಶಯದ ನೀರು ನಿರ್ಮಲ ಮನದ ಅಪ್ಸರೆಯಂತೆ ಶಾಂತವಾಗಿ ನಿಂತಿದೆ ಎಂದನು. ಈ ಉತ್ತರದಿಂದ ಅರಸನ ಮನಸ್ಸಿಗೆ ಸಮಾಧಾನವಾಗಲಿಲ್ಲ. ಆಗ ಮತ್ತೊಬ್ಬ ವಿದ್ವಾಂಸನು – ಪ್ರಭೂ, ಈ ಜಲಾಶಯದ ನೀರು ಶುಭ್ರ ಸ್ಫಟಿಕದಂತೆ ಥಳಥಳಿಸುತ್ತ ನಿಂತಿದೆ, ಎಂದನು. ಈ ಉತ್ತರವೂ ರಾಯರಿಗೆ ಅಷ್ಟೊಂದು ರುಚಿಸಲಿಲ್ಲ. ಆಗ ಮತ್ತೊಬ್ಬನ್ನು – ಪ್ರಭ, ಈ ಜಲಾಶಯದ ನೀರು ನಿರ್ಮಲ ಮನದ ಮನುಷ್ಯನಂತೆ ಶಾಂತವಾಗಿ ನಿಂತಿದೆ ಎಂದನು. ಈ ರೀತಿ ಎಲ್ಲರೂ ಏನೇನೋ ಉದಾಹರಣೆ ಕೊಟ್ಟು ನೀರು ನಿಂತ ಬಗೆಯನ್ನು ವರ್ಣಿಸಿ ಹೇಳಿದರು. ಈ ಯಾವ ಉತ್ತರದಿಂದಲೂ ಕೃಷ್ಣ ದೇವರಾಯರು ಸಂತೃಪ್ತನಾಗದೆ ತೆನ್ನಾಲಿ ರಾಮಕೃಷ್ಣನ ಕಡೆಗೆ ನೋಡುತ್ತಾ – ರಾಮಕೃಷ್ಣಯ್ಯ, ಈ ಜಲಾಶಯದ ನೀರು ಹೇಗೆ ನಿಂತಿದೆ? ಎಂದು ಕೇಳಲು ರಾಮಕೃಷ್ಣನು ಒಂದಿಷ್ಟೂ ವಿಚಾರ ಮಾಡದೇ ಪ್ರಭೂ, ಈ ಜಲಾಶಯದ ನೀರು ನಾವು ಕಟ್ಟಿಸಿದ ಅಣೆಕಟ್ಟಿನ ಪ್ರಭಾವದಿಂದ ಇಲ್ಲಿ ನಿಂತಿದೆ. ಆ ಅಣೆಕಟ್ಟು ಇಲ್ಲದಿದ್ದರೆ ಈ ನೀರು ಇಲ್ಲಿ ನಿಲ್ಲಲಿಕ್ಕೆ ಸಾಧ್ಯವಿಲ್ಲ ಎಂದು ಹೇಳಲು, ಕೃಷ್ಣ ದೇವರಾಯನು ತೆನ್ನಾಲಿ ರಾಮಕೃಷ್ಣನು ಹೇಳಿದ ಈ ಸಮಂಜಸ ಉತ್ತರದಿಂದ ಅತ್ಯಂತ ಸಂತೋಷಿತನಾದನು.

ಕೃಷ್ಣ ದೇವರಾಯನೂ ಇದೇ ಉತ್ತರವನ್ನು ಕೇಳಬೇಕೆಂದು ಇಚ್ಛಿಸಿದ್ದನು. ಕೃಷ್ಣ ದೇವರಾಯನ ಈ ಮನದ ಇಂಗಿತವನ್ನು ತೆನ್ನಾಲಿ ರಾಮಕೃಷ್ಣನು ನಿರೀಕ್ಷಿಸಿದನು. ಅದು ಹೇಗೆಂದರೆ – ಕೃಷ್ಣದೇವರಾಯನು ತಾನು ಕಟ್ಟಿಸಿದ ಅಣೆಕಟ್ಟನ್ನು ನೋಡುತ್ತಲೂ, ಆ ಅಣೆ ಕಟ್ಟನಿಂದ ಅಪಾರ ಜಲ ರಾಶಿಯನ್ನು ಅಭಿಮಾನದಿಂದ ನೋಡುತ್ತಲೇ ಈ ಪ್ರಶ್ನೆಯನ್ನು ಮಾಡಿದ್ದನು. ತೆನ್ನಾಲಿ ರಾಮಕೃಷ್ಣನು ಸೂಕ್ಷ್ಮ ದೃಷ್ಟಿಯಿಂದ ಅರಸನ ಈ ಭಾವನೆಯನ್ನು ಅರಿತು ಆತನ ಪ್ರಶ್ನೆಗೆ ಸಮಂಜಸವಾದ ಉತ್ತರವನ್ನು ಕೊಟ್ಟಿದ್ದನು.

ತೆನ್ನಾಲಿ ರಾಮಕೃಷ್ಣನು ಯೋಗ್ಯವಾದ ಉತ್ತರ ಕೊಟ್ಟಿದ್ದನು ಕಂಡು ಕೃಷ್ಣ ದೇವರಾಯನು ರಾಮಕೃಷ್ಣನಿಗೆ ತನ್ನ ಕೊರಳಲ್ಲಿದ್ದ ರತ್ನಹಾರವನ್ನು ಬಹುಮಾನವಾಗಿ ಕೊಡುತ್ತ ರಾಮಕೃಷ್ಣಯ್ಯಾ ನನ್ನ ಮನದಲ್ಲಿದ್ದ ಇಂಗಿತಾರ್ಥವನ್ನೇ ನೀನು ಹೇಳಿ, ನನ್ನ ಮನವನ್ನು ಸಂತೋಷಗೊಳಿಸಿದಿರಿ. ಅಂತೂ ನೀನು ಮಹಾ ಮುತ್ಸದ್ದಿಯೇ ಸರಿ, ಎಂದು ರಾಮಕೃಷ್ಣನನ್ನು ಹೊಗಳುತ್ತಾ ಅಂತಃಪುರದತ್ತ ಸಾಗಿದನು. ರಾಮಕೃಷ್ಣನನ್ನು ನಗುತ್ತಾ ತನ್ನ ಮನೆಗೆ ಹೋದನು.

## ಮೌಲ್ಯಮಾಪನ ಚಟುವಟಿಕೆಗಳು

### I

1. ಖಾಲಿ ಬಿಟ್ಟ ಸ್ಥಳವನ್ನು ಪೂರ್ತಿಗೊಳಿಸಿರಿ. ಆಡ ಬನ್ನಿ ಗೆಳೆಯರೆಲ್ಲ ಕೂಡಿಬನ್ನಿ ಬಳಗವೆಲ್ಲ
   ಕೋಟೆ ಬರೆದು ತಂಡ ಕಟ್ಟಿ
   ಯಾಡುವ
   (ಕ್ರಿಕೆಟ್, ಹಾಕಿ, ಕಬಡಿ) (1)
2. ಕೆಳಗೆ ಕೊಟ್ಟಿರುವ ಪದ್ಯದ ಸಾಲುಗಳ ಆಶಯವನ್ನು ಬರೆಯಿರಿ.
   ಸೋತು ಹೋಯಿತಲ್ಲ ತಂಡ
   ಹೋಗಿರೆಲ್ಲ ನೀವು ದಂಡ
   ಎಂದು ಗೋಪಿ ಗೆಳೆಯರನ್ನು ಜರೆಯಬಿಟ್ಟನು (1)
3. ನೀವು ಆಡುವ ಒಂದು ಆಟದ ವಿವರಣೆಯನ್ನು ಬರೆಯಿರಿ? (3)

### II

1. ಕೆಳಗಿನ ಹೇಳಿಕೆ ಸರಿಯೋ/ತಪ್ಪೋ ಎಂದು ಬರೆಯಿರಿ.
   –ಮಂಜಣ್ಣನು ಹಲವು ಸಲ ಪಂಥ ಕಟ್ಟಿ ಸೋತಿದ್ದನು (1)
2. ಕೆಳಗೆ ಕೊಟ್ಟಿರುವ ವಾಕ್ಯವು ಉತ್ತರವಾಗಿ ಬರುವವರಿಗೆ ಪ್ರಶ್ನೆಯನ್ನು ತಯಾರಿಸಿರಿ?
   –'ಅಗೋಳಿ'ಎಂದರೆ ತುಳುಭಾಷೆಯಲ್ಲಿ 'ದೊಡ್ಡ ಚೆರಿಗೆ'ಎಂದು ಅರ್ಥ (1)
3. ಮಂಜಣ್ಣನಿಗೆ, ಯುವಕರು ಪಂಥದಲ್ಲಿ ಮಾಡಿದ ಮೋಸವೇನು? ವಿವರಿಸಿ ಉತ್ತರ ಬರೆಯಿರಿ. (3)

### III

1. ಆರರಿಂದ ಹತ್ತು ವರ್ಷದೊಳಗಿನ ಮಕ್ಕಳಿಗೆ ಇರುವ ಸೇವಾ ಸಂಸ್ಥೆ
   (ಕಬ್–ಬುಲ್‌ಬುಲ್, ಸ್ಕೌಟ್– ಗೈಡ್, ಎನ್.ಸಿ.ಸಿ.) (1)
2. ಸಮವಸ್ತ್ರ ಧರಿಸಿ ಮಕ್ಕಳು ಮಾಡುತ್ತಿದ್ದ ಕೆಲಸಗಳು ಯಾವುವು? (1)
3. 'ತಿಲಕಾಷ್ಟಮಹಿಷ ಬಂಧನ' ಕಥೆಯನ್ನು ಸಂಕ್ಷಿಪ್ತವಾಗಿ ಬರೆಯಿರಿ (3)

# 6. ನಾವು ಸಮಾನ

ನಾವೆಲ್ಲ ಭಾರತೀಯರು ಭಾರತೀಯರೆಲ್ಲ ಸೋದರ ಸೋದರಿಯರು ಎಂಬ ಭಾವ ನಮ್ಮ ಮಕ್ಕಳಲ್ಲಿ ಮೂಡಬೇಕು. ದುರ್ಬಲರಿಗೆ ಸಹಾಯಮಾಡಿ ನಮ್ಮೊಂದಿಗೆ ಕರೆದೊಯ್ಯಬೇಕು, ದುಷ್ಟ ಸಂಪ್ರದಾಯಗಳನ್ನು ಕೈಬಿಡಬೇಕು, ಎಲ್ಲರೂ ಒಂದಾಗಿ ನಮ್ಮ ಶತ್ರುಗಳನ್ನು ಸೋಲಿಸಬೇಕು, ಹಾಗಾದಾಗ ಎಲ್ಲರಿಗೂ ನೆಮ್ಮದಿಯಿಂದ ಸುಖಜೀವನ ನಡೆಸಲು ಸಾಧ್ಯವಾಗುತ್ತದೆ ಸಾಮಾಜಿಕ ಆರೋಗ್ಯವು ಸಿದ್ಧಿಸುತ್ತದೆ. ಇದನ್ನು ತಿಳಿಸುವ ಉದ್ದೇಶದಿಂದ ಎಲ್ಲಾ ಭೇದ ಮರೆತು (ಪದ್ಯ), ವೀರ ವೇಲುತಂಬಿ (ಕಥೆ), ಖಾನ್ ಅಬ್ದುಲ್ ಗಫಾರ್ ಖಾನ್ (ವ್ಯಕ್ತಿ ಪರಿಚಯ) ಎಂಬ ಪಾಠಗಳನ್ನು ನೀಡಲಾಗಿದೆ. ಈ ಪಾಠಗಳ ಮೂಲಕ ಉದ್ದೇಶಿತ ಕಲಿಕಾ ಸಾಧನೆಗಳನ್ನು ಮಕ್ಕಳು ಗಳಿಸಲು ಸಾಧ್ಯವಾಗುವಂತೆ ಶ್ರಮಿಸುವಿರಲ್ಲವೇ?

## ಕಲಿಕಾ ಸಾಧನೆಗಳು

- ಹೊಸ ಪ್ರಯೋಗಗಳು, ಪದಗಳು, ಗಾದೆಗಳು, ನುಡಿಗಟ್ಟುಗಳು ಮೊದಲಾದುವುಗಳನ್ನು ಉಪಯೋಗಿಸಿಕೊಂಡು ಸಂದರ್ಭಾನುಸಾರ ಮಾತನಾಡುವುದು.
- ಘಟನೆಗಳು, ದೃಶ್ಯಗಳು ಮೊದಲಾದುವುಗಳನ್ನು ವಿಶ್ಲೇಷಿಸಿ ಸೂಕ್ತವಾದ ಭಾಷೆಯಲ್ಲಿ ವಿವರಿಸುವುದು ಮತ್ತು ಬರೆಯುವುದು.
- ಕಥೆ, ಕವಿತೆ, ವಿವರಣೆ, ವರ್ಣನೆ, ಮೊದಲಾದವುಗಳನ್ನು ಆಲಿಸಿ ಮತ್ತು ಓದಿ ತನ್ನದೇ ಆದ ರೀತಿಯಲ್ಲಿ ಹೇಳುವುದು ಮತ್ತು ಬರೆಯುವುದು.
- ಕವಿತೆಯನ್ನು ಅರ್ಥೈಸಿಕೊಂಡು ರಾಗ, ತಾಳ, ಭಾವಗಳನ್ನು ಪರಿಗಣಿಸಿ ಹಾಡುವುದು.
- ಕವಿತೆಯ ಆಶಯವನ್ನು ಅರಿತು ಆಸ್ವಾದಿಸುವುದು ಮತ್ತು ಆಸ್ವಾದನ ಟಿಪ್ಪಣಿಯನ್ನು ಬರೆಯುವುದು.
- ವಿಶೇಷಣಗಳು, ವಿಶೇಷ ಪ್ರಯೋಗಗಳು ಮೊದಲಾದುವುಗಳನ್ನು ಸೂಕ್ತವಾಗಿ ಸೇರಿಸಿ ವಾಕ್ಯವನ್ನು ಬರೆಯುವುದು.
- ಪಾಠಭಾಗವನ್ನು ವ್ಯವಹಾರ ರೂಪಕ್ಕೆ ತಕ್ಕಂತೆ ನಿರರ್ಗಳವಾಗಿ ಸ್ವರಭಾರ ಮತ್ತು ಉಚ್ಚಾರಸ್ಪಷ್ಟತೆಯೊಂದಿಗೆ ಓದುವುದು.
- ಕಥೆ, ಕವಿತೆ, ವಿವರಣೆ, ಭಿತ್ತಿಪತ್ರಿಕೆ ಮೊದಲಾದ ಸೃಜನಾತ್ಮಕ ರಚನೆಯಲ್ಲಿ ತೊಡಗುವುದು ಮತ್ತು ಅವುಗಳನ್ನು ಸಂಗ್ರಹಿಸಿ ಸಂಚಿಕೆ, ಹಸ್ತಪತ್ರಿಕೆ, ಭಿತ್ತಿಪತ್ರಿಕೆಗಳನ್ನು ತಯಾರಿಸುವುದು.
- ಕಥೆ ಮತ್ತು ಕವಿತೆಗಳ ಸಾಲುಗಳ ಅರ್ಥವನ್ನು ತಿಳಿದುಕೊಂಡು ಪದಸೌಂದರ್ಯವನ್ನು ಆಸ್ವಾದಿಸಿ ಆಶಯವನ್ನು ಹೇಳುವುದು ಮತ್ತು ಬರೆಯುವುದು.
- ಪದಪ್ರಯೋಗ, ಭಾಷಾಪ್ರಯೋಗ, ಆಶಯ ಮೊದಲಾದವುಗಳನ್ನು ತನ್ನ ರಚನೆಯಲ್ಲಿ ಬಳಸಿಕೊಳ್ಳುವುದು.
- ಪಾಠಭಾಗದಲ್ಲಿ ಬಳಕೆಯಾದ ಪದಗಳನ್ನು ವಿಂಗಡಿಸಿ ಬರೆಯುವುದು ಮತ್ತು ಸೇರಿಸಿ ಬರೆಯುವುದು.
- ಓದುವ ಮೂಲೆ, ವಾಚನಾಲಯ ಮತ್ತು ಇತರೆಡೆಗಳಿಂದ ಲಭಿಸುವ ಓದುವ ಸಾಮಾಗ್ರಿಗಳನ್ನು ಓದಿ ದೊರೆತ ಅನುಭವಗಳನ್ನು ವಿಭಿನ್ನ ರೀತಿಯಲ್ಲಿ ಹಂಚಿಕೊಳ್ಳುವುದು.
- ಓದಿದ, ಆಲಿಸಿದ ವ್ಯವಹಾರ ರೂಪದ ಆಶಯವನ್ನು ತಿಳಿದುಕೊಂಡು ಇನ್ನೊಂದು ವ್ಯವಹಾರ ರೂಪವಾಗಿ ಬದಲಾಯಿಸುವುದು.
- ಮಾಹಿತಿ ತಂತ್ರಜ್ಞಾನವನ್ನು (ICT) ಉಪಯೋಗಿಸಿ, ಕೇಳಿಯೂ ನೋಡಿಯೂ ಆಶಯವನ್ನು ತಿಳಿದುಕೊಂಡು ಸ್ವಂತ ರಚನೆ ಮಾಡುವುದು ಮತ್ತು ಮಂಡಿಸುವುದು.

## ಯೂನಿಟ್ ಗ್ರಿಡ್

**ಯೂನಿಟ್ 6 : ನಾವು ಸಮಾನ** ಸಮಯ : 6 ಗಂಟೆ

| ಪಾಠದ ಹೆಸರು | ಆಶಯ/ ಉದ್ದೇಶಗಳು | ಪ್ರಕ್ರಿಯೆ | ಪೂರಕ ಸಾಮಗ್ರಿಗಳು | ಮೌಲ್ಯನಿರ್ಣಯ |
|---|---|---|---|---|
| 1. ಎಲ್ಲಾ ಭೇದ ಮರೆತು (ಪದ್ಯ) | • ಭಾರತೀಯರೆಲ್ಲರೂ ಸಮಾನರು ಭಾರತೀಯರಲ್ಲಿ ಜಾತಿ, ಮತ, ಧನಿಕ ಬಡವ ಭೇದ ಸರಿಯಲ್ಲ.<br>• ದೇಶ ಭಕ್ತಿಗೀತೆಗಳನ್ನು ಹಾಡುವುದರಿಂದ ದೇಶ ಪ್ರೇಮ ಬೆಳೆಯುವುದು. | • ಪದ್ಯವನ್ನು ರಾಗವಾಗಿ ಹಾಡುವುದು<br>• ಆಸ್ವಾದನಾ ಟಿಪ್ಪಣಿಯನ್ನು ಬರೆಯುವುದು.<br>• ಪದ್ಯಮುಂದುವರಿಸಿ ಬರೆಯುವುದು.<br>• ಟಿಪ್ಪಣಿ ಬರೆಯುವುದು | • ದಾರಿದೀಪ ಸಿ.ಡಿ.<br>• ಆಸ್ವಾದನಾ ಟಿಪ್ಪಣಿಯ ಮಾದರಿಗಳು<br>• ದೇಶಭಕ್ತಿ ಗೀತೆಗಳ ಸಂಗ್ರಹ | • ಆಸ್ವಾದನಾ ಟಿಪ್ಪಣಿ<br>• ಟಿಪ್ಪಣಿ<br>• ಪದ್ಯ |
| 2. ವೀರ ವೇಲುತಂಬಿ | • ಭಾರತದ ಸ್ವಾತಂತ್ರ್ಯಕ್ಕಾಗಿ ಹಲವಾರು ವೀರ ಯೋಧರು ಹೋರಾಡಿ ಅಮರರಾಗಿದ್ದಾರೆ.<br>• ಮಾನವನಿಗೆ ಸ್ವಾತಂತ್ರ್ಯವಿಲ್ಲದೆ ಬದುಕಲು ಅಸಾಧ್ಯ.<br>• ಹಣದಾಸೆಗೆ ಬಲಿಯಾಗಿ ದೇಶದ ಹಿತಾಸಕ್ತಿಗಳನ್ನು ಬಲಿಕೊಡುವವರೂ ಇದ್ದಾರೆ. | | | |
| 3. ಖಾನ್ ಅಬ್ದುಲ್ ಗಫಾರ್ ಖಾನ್ | • ದೇಶದ ಐಕ್ಯಕ್ಕಾಗಿ ಹಲವಾರು ಮಹಾನುಭಾವರು ಹೋರಾಡಿದ್ದಾರೆ.<br>• ಗಾಂಧೀ ತತ್ವವನ್ನು ಪಾಲಿಸುವವರು ಪ್ರಪಂಚದಾದ್ಯಂತ ಇದ್ದಾರೆ. | • ವ್ಯಕ್ತಿ ಪರಿಚಯ | • ದಾರಿದೀಪ<br>• ಸ್ವಾತಂತ್ರ್ಯ ಹೋರಾಟಗಾರರ ಚಿತ್ರ ಸಂಗ್ರಹ | • ವ್ಯಕ್ತಿ ಪರಿಚಯ |

# 1. ಎಲ್ಲಾ ಭೇದ ಮರೆತು

ನಾವು ಒಗ್ಗಟ್ಟಿನಿಂದ ಇರಬೇಕು, ಯಾವುದೇ ಭೇದಭಾವಗಳನ್ನು ಮುಂದೊಡ್ಡಿ ಬಿಕ್ಕಟ್ಟು ಉಂಟುಮಾಡುವುದರಿಂದ ಸಮಾಜದ ಆರೋಗ್ಯ ಹಾಳಾಗುವುದು. ಅದಕ್ಕಾಗಿ ಎಲ್ಲ ಭೇದ ಮರೆತು ಒಗ್ಗಟಿನಿಂದ ಇರೋಣ ಎಂದು ತಿಳಿಹೇಳುವ ಹಲವಾರು ಕವನಗಳು ಕನ್ನಡ ಭಾಷೆಯಲ್ಲಿವೆ. ಅಂತಹ ಕವನಗಳು ನಿಮಗೆ ತಿಳಿದಿದೆಯೇ? ಎಂದು ಪ್ರಶ್ನಿಸಿ ಬಳಿಕ ' ಎಲ್ಲ ಭೇದ ಮರೆತು' ಅಂತಹ ಒಂದು ದೇಶಭಕ್ತಿಗೀತೆ ಎಂದು ಪಾಠಪ್ರವೇಶ ಮಾಡಬಹುದು.

## ಚಟುವಟಿಕೆಗಳು

### ಹಾಡುವ

ಮಕ್ಕಳನ್ನು ಗುಂಪನ್ನಾಗಿಸುವುದು ಬಳಿಕ ಗುಂಪಿನಲ್ಲಿ ಕುಳಿತು ತಮಗೆ ಇಷ್ಟವಾದ ರಾಗವನ್ನು ಸಂಯೋಜಿಸಿ ಹಾಡಲಿ. ಯಾವ ಗುಂಪು ಚೆನ್ನಾಗಿ ಹಾಡಿದೆ ಎಂದು ತಿಳಿಯುವುದು ಹೇಗೆ? ಸೂಚಕಗಳನ್ನು ಮಕ್ಕಳೇ ಸೂಚಿಸಿ ಮೌಲ್ಯನಿರ್ಣಯ ಮಾಡಲಿ.

- ರಾಗ, ತಾಳ
- ಉಚ್ಚಾರ ಸ್ಪಷ್ಟತೆ
- ಎಲ್ಲರ ಪಾಲುದಾರಿಕೆ
- ಭಾವ, ಉಚಿತ ಸ್ವರಭಾರ

### ಉತ್ತರ ಬರೆಯುವ

ಕೊಟ್ಟಿರುವ ಪ್ರಶ್ನೆಗಳಿಗೆ ಗುಂಪಿನಲ್ಲಿ ಚರ್ಚಿಸಿ ಮಕ್ಕಳು ಉತ್ತರ ಬರೆಯಲಿ. ತರಗತಿಯಲ್ಲಿ ಮಂಡಿಸಿ ಅಧ್ಯಾಪಕರ ಸಲಹೆಗಳೊಂದಿಗೆ ಉತ್ತಮಪಡಿಸಿ ಬರೆಯಲಿ.

### ಸಮಾನಾರ್ಥ ಪದ ಬರೆಯುವ

ಅಡಿಗೆರೆ ಎಳೆದ ಪದಗಳ ಸಮಾನಾರ್ಥ ಪದಗಳು ಪದ್ಯಭಾಗದಲ್ಲಿದೆ. ಅದನ್ನು ಪದಕೋಶದ ಸಹಾಯದಿಂದ ಹುಡುಕಿ ಬರೆಯಲಿ.

ಶ್ರೀಮಂತ – ಧನಿಕ

ದೊಡ್ಡ – ಹಿರಿಯ

ಚಿನ್ನ – ಬಂಗಾರ

### ಪ್ರಾಸಪದ ಬರೆಯುವ

ಪದ್ಯದಲ್ಲಿ ಬಂದಿರುವ ಪ್ರಾಸಪದಗಳನ್ನು ಮಕ್ಕಳಲ್ಲಿ ಗುರುತಿಸಿ ಬರೆಯಲು ಹೇಳುವುದು. ಪ್ರಾಸ ಎಂದರೇನು ಎಂದು ಚರ್ಚಿಸಿ ಮಕ್ಕಳಿಗೆ ನೆರವಾಗುವಿರಲ್ಲವೇ?

| | | |
|---|---|---|
| ಸಮಾನ | – | ನವಗಾನ |
| ಕನಸು | – | ನನಸು |
| ತರಬೇಡಿ | – | ಕೈನೀಡಿ |
| ಎಂದೂ | – | ತಿಂದು |
| ಬೆಳೆಯನ್ನು | – | ಕೊಳೆಯನ್ನು |
| ಇಂದು | – | ಎಂದೆಂದೂ |

## ಆಶಯ ಬರೆಯುವ

ಮಕ್ಕಳನ್ನು ಗುಂಪುಗಳಾಗಿಸುವುದು. ಒಂದೊಂದು ಗುಂಪಿಗೆ ಒಂದೊಂದು ಪಾರಾವನ್ನು ನೀಡಿ ಆಶಯವನ್ನು ಚರ್ಚಿಸಿ ಹೇಳಿಸುವುದು. ಬಳಿಕ ಪಾಠಭಾಗದಲ್ಲಿ ನೀಡಿದ ಆಶಯವಿರುವ ಸಾಲುಗಳನ್ನು ಕಂಡುಹಿಡಿಯಲು ತಿಳಿಸುವಿರಲ್ಲವೇ?

## ಆಸ್ವಾದನ ಟಿಪ್ಪಣಿ ಬರೆಯುವ

ಪದ್ಯದ ಆಸ್ವಾದನ ಟಿಪ್ಪಣಿ ಬರೆಯಬೇಕಾದರೆ ನಡೆಸಬೇಕಾದ ಹಂತಗಳನ್ನು ನೆನಪಿಸಿರಿ.

- ಕವನವನ್ನು ಓದುವುದು, ಹಾಡುವುದು
- ಪದಗಳ ಅರ್ಥವನ್ನು ತಿಳಿಯುವುದು.
- ಕವನದ ಸಾಲುಗಳ ಅರ್ಥ ಆಶಯವನ್ನು ತಿಳಿಯುವುದು.
- ಇಷ್ಟವಾದ ಸಾಲು ಯಾವುದು? ಎಂದು ತಿಳಿಯುವುದು
- ಸಾಲುಗಳ ಕುರಿತಾದ ವಿಶೇಷಗಳನ್ನು ತಿಳಿಯುವುದು ಪ್ರಾಸ, ಪದ ವಿನ್ಯಾಸ
- ಕವನದ ಆಶಯವನ್ನು ತಿಳಿಯುವುದು
- ಕವನದ ಲೇಖಕರನ್ನು ತಿಳಿಯುವುದು.
- ಕವನದ ಕುರಿತು ಸ್ವಂತ ಅಭಿಪ್ರಾಯ ರೂಪಿಸುವುದು

ಬಳಿಕ ಗುಂಪಿನಲ್ಲಿ ಕುಳಿತು ಕವನದ ಆಸ್ವಾದನ ಟಿಪ್ಪಣಿ ಬರೆಯಲಿ. ಬರೆದ ಟಿಪ್ಪಣಿಯನ್ನು ತರಗತಿಯಲ್ಲಿ ಮಂಡಿಸಿ ಅಧ್ಯಾಪಕರ ಟಿಪ್ಪಣಿಯ ಸಹಾಯದೊಂದಿಗೆ ಉತ್ತಮಪಡಿಸಿ ಬರೆಯಲು ಹೇಳುವುದು. ಆಸ್ವಾದನ ಟಿಪ್ಪಣಿಯನ್ನು ಸಂಗ್ರಹಿಸಿ ತರಗತಿಯಲ್ಲಿ ಪ್ರದರ್ಶಿಸುವುದರ ಮೂಲಕ ಮಕ್ಕಳ ಸ್ವಯಂ ಮೌಲ್ಯನಿರ್ಣಯ ನಡೆಸಲು ನೆರವಾಗುವುದು.

## ಆಸ್ವಾದನ ಟಿಪ್ಪಣಿ ಹೀಗೂ ಇರಬಹುದಲ್ಲವೇ?

### ಆಸ್ವಾದನ ಟಿಪ್ಪಣಿ

ಎಲ್ಲ ಭೇದ ಮರೆತು ಕವನವನ್ನು ಡಾ. ನಾರಾಯಣ ಭಟ್ ರಚಿಸಿದ್ದಾರೆ. ಇದು ಒಂದು ಐಕ್ಯವನ್ನು ಸಾರುವ ಕವನವಾಗಿದೆ. ಇದರಲ್ಲಿ 28 ಸಾಲುಗಳಿವೆ. ಹಾಡಲು ಸುಲಭವಾಗಿದೆ, ಪ್ರಾಸಪದಗಳಿವೆ, ನನಗೆ ಪದ್ಯ ಇಷ್ಟವಾಗಿದೆ. ಎಲ್ಲಾ ಭೇದವನ್ನು ಮರೆತು ಬನ್ನಿ, ನಾವೆಲ್ಲ ಒಂದೇ ಎಂದು ಸಾರೋಣ, ನಮ್ಮ ಹಿರಿಯರು ಕಂಡ ಐಕ್ಯದ ಕನಸನ್ನು

ನನಸಾಗಿಸೋಣ. ಜಾತಿ, ಮತ, ಬಡವ ಶ್ರೀಮಂತ ಎಂಬ ಭೇದವನ್ನು ಮಾಡದೆ ಎಲ್ಲರೂ ಒಂದಾಗಿ ದುಡಿಯೋಣ ಆಲಸ್ಯವನ್ನು ಬಿಡೋಣ.

ಕೆಟ್ಟ ನಡತೆಗಳೆಲ್ಲ ಕೊನೆಯಾಗಲಿ, ಸ್ನೇಹ, ಸಹೋದರತೆ, ಬೆಳೆಯಲಿ, ಕುಡಿಯುವ ನೀರು, ಉಸಿರಾಡುವ ಗಾಳಿ, ಹರಿಯುವ ರಕ್ತವು ಒಂದೇ ಇರುವಾಗ ನಮ್ಮಲ್ಲಿ ಭೇದವು ಸಲ್ಲದು ಎಂದು ಕವಿಗಳು ಹೇಳುತ್ತಾರೆ. ಸ್ನೇಹದ ಪ್ರೇಮದ ಭ್ರಾತೃತ್ವದ ಸೆಳೆ  ಹರಿಯಲಿ ಎಂಬ ಸಾಲು ನನಗೆ ಇಷ್ಟವಾಯಿತು.

## ಪರ್ಯಾಯ ಪದ ಬರೆಯುವ

ಕೆಳಗೆ ಕೊಡಲಾದ ಪದಗಳಿಗೆ  ಪರ್ಯಾಯ ಪದಗಳನ್ನು ಪದಕೋಶದ ಸಹಾಯದಿಂದ ಮಕ್ಕಳೇ ಕಂಡುಕೊಳ್ಳಲಿ. ಬಳಿಕ ವಾಕ್ಯರಚನೆ ಮಾಡಿ ತರಗತಿಯಲ್ಲಿ ಓದಲಿ. ಇತರ ವಿದ್ಯಾರ್ಥಿಗಳು ವಾಕ್ಯರಚನೆ ಸರಿಯೋ ಎಂದು ಪರಿಶೋಧಿಸಲಿ. ಅಗತ್ಯವಿದ್ದರೆ ಅಧ್ಯಾಪಕರು ಸಹಕರಿಸುವುದು.

| | | | |
|---|---|---|---|
| ಸಲಿಲ | – | ನೀರು | ನಮಗೆ ಕುಡಿಯಲು ನೀರು ಬೇಕು |
| ಅನಿಲ | – | ವಾಯು | ನಮಗೆ ಉಸಿರಾಡಲು ವಾಯು ಬೇಕು |
| ಕನಕ | – | ಬಂಗಾರ | ಆಭರಣ ತಯಾರಿಸಲು ಬಂಗಾರ ಬೇಕು |
| ಸಾಗರ | – | ಸಮುದ್ರ | ಸಮುದ್ರದ ನೀರು ಉಪ್ಪಾಗಿದೆ |
| ನಕ್ಷತ್ರ | – | ತಾರೆ | ತಾರೆಗಳು ರಾತ್ರಿಕಾಲದಲ್ಲಿ ಕಾಣಿಸುತ್ತವೆ. |

## ವಿಂಗಡಿಸಿ ಬರೆಯುವ

ಕೊಟ್ಟಿರುವ ಪದಗಳನ್ನು ಮಕ್ಕಳು ವಿಂಗಡಿಸಿ ಹೇಳಲಿ. ಆ ಬಳಿಕ ಸರಿಯೆಂದು ದೃಢಪಡಿಸಿ ಬರೆಯುವುದು.

| | | |
|---|---|---|
| ಮಾಡುವೆನೆಂದು | – | ಮಾಡುವೆನು + ಎಂದು |
| ಮೇಲೆತ್ತುವ | – | ಮೇಲೆ + ಎತ್ತುವ |
| ನಮಗಾಗಿಯೆ | – | ನಮಗೆ +ಆಗಿಯೆ |
| ಕೊನೆಯಾಗಲಿ | – | ಕೊನೆ + ಆಗಲಿ |
| ಕುಡಿಯುವುದೊಂದೆ | – | ಕುಡಿಯುವುದು + ಒಂದೆ |

## ಇಷ್ಟವಾದ ಸಾಲು ಬರೆಯುವ

ಮಕ್ಕಳು ಪದ್ಯದಲ್ಲಿ ಅವರಿಗೆ ಇಷ್ಟವಾದ ಸಾಲುಗಳನ್ನು ಗುರುತಿಸಲಿ. ಅದು ಯಾಕೆ ಇಷ್ಟವಾಯಿತೆಂದು ತಮ್ಮದೇ ಮಾತುಗಳಲ್ಲಿ ಹೇಳಲಿ. ಆ ಬಳಿಕ ಸ್ವಂತವಾಗಿ ಬರೆದು ಮಂಡಿಸಲು ಸೂಚಿಸುವುದು. ಅಧ್ಯಾಪಕರ ಸಹಾಯದಿಂದ ಉತ್ತಮಪಡಿಸಲಿ.

## ಸಾಲು ಸೇರಿಸುವ

ಪದ್ಯಕ್ಕೆ ಸಾಲು ಸೇರಿಸಿ ಮುಂದುವರಿಸುವುದು ಪದ್ಯರಚನೆಯ ಒಂದು ತಂತ್ರವಾಗಿದೆ. ಕೊಡಲಾದ ಪದ್ಯದಲ್ಲಿ ದೇಶ

ನಮ್ಮ ಭಾರತ ಎಂಬ ಸಾಲು ಮತ್ತೆ ಮತ್ತೆ ಆವರ್ತಿಸುವುದು ಮಕ್ಕಳು ಮೂರು ಪದಗಳ ಒಂದೊಂದು ಸಾಲು ಸೇರಿಸುತ್ತ ಹೋಗಬೇಕಲ್ಲವೇ? ಈ ಸಾಲುಗಳು ದೇಶದ ವಿಶೇಷತೆಯನ್ನು ಸಾರುವ ಸಾಲುಗಳಾಗಿವೆ ಎಂಬುದನ್ನು ಮಕ್ಕಳು ಮೊದಲಿಗೆ ಕಂಡುಕೊಳ್ಳಲು ಸಹಕರಿಸಿರಿ. ಬಳಿಕ ಅಂತಹ ವಿಶೇಷತೆಗಳನ್ನು ಪಟ್ಟಿಮಾಡಲಿ. ಅನಂತರ ಅವುಗಳನ್ನು ಸರಿಯಾದ ರೀತಿಯಲ್ಲಿ ಪ್ರಾಸಬದ್ಧವಾಗಿ ಬಳಸಲು, ಕವನ ರಚಿಸಲು ಪ್ರಯತ್ನಿಸಲಿ. ಮಕ್ಕಳನ್ನು ನಿರುತ್ಸಾಹಗೊಳಿಸದೆ, ಒಂದೊಂದು ಸಾಲು ಸೇರಿಸಿದಾಗಲೂ, 'ಭೇಷ್' ಎಂದು ಹೊಗಳಿ ಕವನ ಪೂರ್ತಿಗೊಳಿಸಲು ನೆರವಾಗುವುದು. ಹನ್ನೆರಡೋ ಹದಿನಾರೋ ಸಾಲುಗಳ ರಚನೆಯಾದ ಬಳಿಕ ಮಕ್ಕಳು ತರಗತಿಯಲ್ಲಿ ರಾಗ, ತಾಳಗಳೊಂದಿಗೆ ಹಾಡಲಿ ಯಾರ ಕವನ ಉತ್ತಮವಾಗಿದೆ? ಯಾಕೆ ಎಂದು ಪ್ರಶ್ನಿಸಿ ಮಕ್ಕಳು ಸ್ವಯಂ ಮೌಲ್ಯನಿರ್ಣಯ ಮಾಡಲು ಪ್ರೇರೇಪಿಸುವುದು.

### ಟಿಪ್ಪಣಿ ಬರೆಯುವ

ಪದ್ಯಭಾಗವನ್ನು ಮಕ್ಕಳಿಂದ ಹೇಳಿಸಿ ಅದರ ಆಶಯವನ್ನು ಕೇಳುವುದು. ಮಕ್ಕಳು ವಿವರಿಸಲಿ. ಬಳಿಕ ಸಂದೇಶದ ಕುರಿತು ಚರ್ಚಿಸಿ ಕ್ರೋಡೀಕರಿಸಬೇಕು. ಅನಂತರ ಗುಂಪಲ್ಲಿ ಕುಳಿತು ಮಕ್ಕಳು ಟಿಪ್ಪಣಿ ಬರೆಯುವುದು. ಟಿಪ್ಪಣಿಯನ್ನು ತರಗತಿಯಲ್ಲಿ ಮಂಡಿಸಿ ಉತ್ತಮಪಡಿಸಲಿ.

ಈ ಪದ್ಯಭಾಗವನ್ನು ನಾರಾಯಣ ಭಟ್ಟರು ಬರೆದ 'ಎಲ್ಲಾ ಭೇದ ಮರೆತು' ಪದ್ಯದಿಂದ ಆಯ್ದುಕೊಳ್ಳಲಾಗಿದೆ. ದುರಾಚಾರಗಳು ಕೊನೆಯಾಗಿ ಎಲ್ಲರೂ ಪ್ರೀತಿಯಿಂದ ಬಾಳುವಂತಾಗಲಿ ಎಂಬುದೇ ಈ ಪದ್ಯಭಾಗ ನೀಡುವ ಸಂದೇಶವಾಗಿದೆ.

### ಸಂಗ್ರಹಿಸುವ

ವೈವಿಧ್ಯಪೂರ್ಣವಾದ ದೇಶಭಕ್ತಿಗೀತೆಗಳನ್ನು ಮಕ್ಕಳು ಸಂಗ್ರಹಿಸಿ ಬರೆಯಲಿ, ತರಗತಿಯಲ್ಲಿ ಪ್ರದರ್ಶಿಸಲಿ. ಕೆಲವನ್ನಾದರೂ ತರಗತಿಯಲ್ಲಿ ಹಾಡಲು ಅವಕಾಶ ನೀಡುವಿರಲ್ಲವೇ? ಕೆಲವು ದೇಶಭಕ್ತಿಗೀತೆಗಳನ್ನು / ದೇಶಭಕ್ತಿಗೀತೆಗಳ ಪುಸ್ತಕಗಳನ್ನು ಓದುವ ಮೂಲೆಯಲ್ಲಿ ಒದಗಿಸುವುದು.

## 2. ವೀರ ವೇಲುತಂಬಿ

ಸ್ವಾತಂತ್ರ್ಯಕ್ಕಾಗಿ ಅನೇಕರು ಹೋರಾಡಿದ್ದಾರೆ. ಅದೆಷ್ಟೋ ಜನರ ಸಾಹಸ ಚರಿತ್ರೆಯ ಪುಟಗಳಲ್ಲಿ ದಾಖಲಾಗಿಲ್ಲ. ಭಾರತದ ದಕ್ಷಿಣ ತುದಿಯ ತಿರುವಾಂಕೂರಿನಲ್ಲಿದ್ದುಕೊಂಡು ಬ್ರಿಟಿಷರ ಯುದ್ಧ ದಂಗೆಯೆದ್ದ ಸಾಹಸಿ ವೇಲುತಂಬಿ. ಅವರ ಕುರಿತು ತಿಳಿಯೋಣ ಎಂದು ಪಾಠ ಪ್ರವೇಶ ಮಾಡಬಹುದು.

### ಚಟುವಟಿಕೆಗಳು

### ರಸಪ್ರಶ್ನೆ ನಡೆಸುವ

ಮಕ್ಕಳನ್ನು ನಾಲ್ಕು ಗುಂಪುಗಳಾಗಿ ಮಾಡುವುದು. ಬಳಿಕ ಮೌನವಾಗಿ ಪಾಠಭಾಗವನ್ನು ಓದಿ ರಸಪ್ರಶ್ನೆಗೆ ತಕ್ಕಂತಹ ಹತ್ತು ಪ್ರಶ್ನೆಗಳನ್ನು ತಯಾರಿಸಲು ಹೇಳುವುದು ಅನಂತರ ಗುಂಪುಗಳೊಳಗೆ ರಸಪ್ರಶ್ನೆ ನಡೆಯಲಿ.

ಉದಾ : ಪ್ರಶ್ನೆಗಳು

- ತಿರುವಾಂಕೂರಿನ ಮಹಾರಾಜ ಯಾರು?
- ಬಾಲರಾಮವರ್ಮನ ಮುಖ್ಯಮಂತ್ರಿಯ ಹೆಸರೇನು?
- ನಿಮ್ಮ ಕಂದಾಯವನ್ನು ಎರಡು ಪಟ್ಟು ಹೆಚ್ಚಿಸಲಾಗಿದೆ ಎಂದು ಆಜ್ಞೆ ಮಾಡಿದವರು ಯಾರು?
- ಬಾಲರಾಮವರ್ಮನ ಆಜ್ಞೆಯಂತೆ ವೇಲುತಂಬಿ ಭೇಟಿಯಾದುದು ಯಾರನ್ನು?
- 'ಕೂಡದು, ಪಾಠಕಲಿಸಬೇಕು' ಎಂದವರು ಯಾರು?
- ಬ್ರಿಟಿಷರ ವಿರುದ್ಧ ಯುದ್ಧ ನಡೆದುದು ಎಲ್ಲಿ?
- ಬ್ರಿಟಿಷರನ್ನು ಹೊರದೂಡಲು ವೇಲುತಂಬಿ ಕರೆನೀಡಿದ್ದು ಯಾವಾಗ?
- ವೀರ ವೇಲುತಂಬಿಯ ತಲೆಗೆ ಆಂಗ್ಲರು ಘೋಷಿಸಿದ ಬಹುಮಾನದ ಮೊತ್ತ ಎಷ್ಟು?
- ವೇಲುತಂಬಿ ಅಡಗಿಕೊಂಡಿದ್ದ ಸ್ಥಳದ ಹೆಸರೇನು?
- ವೇಲುತಂಬಿ ಪ್ರಾಣತ್ಯಾಗ ಮಾಡಿದ್ದು ಹೇಗೆ?
- ಬ್ರಿಟಿಷ್ ಸೈನಿಕರಿಗೆ ಒಗಟಾದುದು ಯಾವುದು?
- ವೇಲುತಂಬಿಯ ಸಮಾಧಿ ಎಲ್ಲಿದೆ?

**ಉತ್ತರಿಸುವ**

ಪಾಠವನ್ನು ಓದಿ ಪ್ರಶ್ನೆಗಳಿಗೆ ಉತ್ತರವನ್ನು ವೈಯಕ್ತಿಕವಾಗಿ ಬರೆಯಲು ಹೇಳುವುದು. ಬಳಿಕ ಒಂದಿಬ್ಬರಿಂದ ತರಗತಿಯಲ್ಲಿ ಓದಿಸಿ ಉತ್ತಮಪಡಿಸಬಹುದು.

**ವಿರೋದಾರ್ಥ ಪದ ಬರೆಯುವ**

ಅಡಿಗೆರೆಯೆಳೆದ ಪದದ ವಿರೋದಾರ್ಥ ಪದವನ್ನು ಮಕ್ಕಳು ಪಾಠಭಾಗದಿಂದ ಆಯ್ದು ಬರೆಯಲಿ.

| | | |
|---|---|---|
| ಹೇಡಿ | X | ಶೂರ |
| ಅಪರಾಧಿ | X | ನಿರಪರಾಧಿ |
| ಗೆದ್ದರು | X | ಸೋತರು |
| ಅಂತ್ಯಗೊಂಡಿತು | X | ಆರಂಭಗೊಂಡಿತು |
| ನಾಪತ್ತೆಯಾರನು | X | ಪತ್ತೆಯಾದನು |

**ಸಂಭಾಷಣೆ ಬರೆಯುವ**

ಸಂಭಾಷಣೆ ಬರೆಯುವ ಕ್ರಮವನ್ನು ಮಕ್ಕಳೊಂದಿಗೆ ಚರ್ಚಿಸುವುದು.

- ಪಾತ್ರಗಳು ಯಾವುವು?

- ಯಾರು ಯಾರಿಗೆ ಹೇಳುವುದು?
- ಏನೇನು ಹೇಳುವುದು?
- ಹೇಗೆ ಹೇಳುವುದು?
- ಯಾಕೆ ಹೇಳುವುದು?
- ಎಷ್ಟು ಹೇಳುವುದು?
- ಯಾವಾಗ ಹೇಳುವುದು?

ಪ್ರಶ್ನೆಗಳ ಮೂಲಕ ಸಂಭಾಷಣೆಯ ಮಾತುಗಳನ್ನು ಸ್ವಯಂ ರಚಿಸಲು ಪ್ರೇರೇಪಿಸಬೇಕು. ಬಳಿಕ ಸನ್ನಿವೇಶದ ಕ್ರಮೀಕರಣದೊಂದಿಗೆ ಪಾತ್ರಾಪಾತ್ರ ವಿವೇಚನೆಯಿಂದ ಸಂಭಾಷಣೆ ಬರೆಯುವುದು. ತರಗತಿಯಲ್ಲಿ ಮಂಡಿಸಿ ಉತ್ತಮಪಡಿಸಲಿ, ಮೌಲ್ಯನಿರ್ಣಯಿಸುವುದು ಹೇಗೆ? ಸೂಕ್ತ ಮಾನದಂಡಗಳನ್ನು ಮಕ್ಕಳೇ ನಿರ್ಧರಿಸಲಿ.

- ವಾಕ್ಯ ರಚನಾ ಶೈಲಿ
- ಆಶಯ ಕ್ರಮೀಕರಣ
- ಆಶಯ ಸ್ಪಷ್ಟತೆ
- ಸರಳ ಸೂಕ್ತ ಸಂಭಾಷಣೆ

ಸಂಭಾಷಣೆಗಳನ್ನು ಸಂಗ್ರಹಿಸಿ ಸಂಚಿಕೆ ತಯಾರಿಸಿ ತರಗತಿಯಲ್ಲಿ ಪ್ರದರ್ಶಿಸುವುದು.

### ಊಹಿಸಿ ಬರೆಯುವ

ಸನ್ನಿವೇಶವನ್ನು ಊಹಿಸುವುದು ಮಕ್ಕಳಿಗೆ ಅಭ್ಯಾಸವಾಗಬೇಕಾದ ಒಂದು ಆಶಯವಾಗಿದೆ. ವೇಲುತಂಬಿ ಬ್ರಿಟಿಷರ ಕೈಗೆ ಸಿಗದಿರುತ್ತಿದ್ದರೆ ಏನಾಗುತ್ತಿತ್ತು? ಎಂಬ ಪ್ರಶ್ನೆಯನ್ನು ಮಕ್ಕಳ ಮುಂದಿರಿಸಿ ಚಿಂತನೆಗೆ ಅವಕಾಶ ಮಾಡುವುದು. ಬ್ರಿಟಿಷರು ಏನೇನು ಮಾಡಬಹುದು? ಮತ್ತಷ್ಟು ಸೈನ್ಯದೊಂದಿಗೆ ಒಂದು ಊರಿನ ಜನರಿಗೆ ತೊಂದರೆ ಕೊಡಬಹುದು, ತಿರುವಾಂಕೂರಿನ ಮಹಾರಾಜನಿಗೆ ಹಿಡಿದು ಕೊಂಡಲು ಒತ್ತಾಯಿಸಬಹುದು, ಏನಾದರಾಗಲಿ ಎಂದು ಸುಮ್ಮನೇ ಬಿಡಬಹುದು, ಹೀಗೆ ವಿಧ ವಿಧ ಉತ್ತರಗಳು ಬರಬಹುದು. ಅವುಗಳನ್ನು ಕ್ರೋಡೀಕರಿಸಿ ಟಿಪ್ಪಣಿ ರೂಪದಲ್ಲಿ ಬರೆಯಲು ಹೇಳುವುದು.

### ಅನುಕ್ರಮವಾಗಿ ಬರೆಯುವ

ಮಕ್ಕಳು ಪಾಠಭಾಗದಿಂದ ಕೊಡಲಾದ ವಾಕ್ಯಗಳನ್ನು ಓದಲಿ ಬಳಿಕ ಅನುಕ್ರಮವಾಗಿ ಬರೆದು ಓದಲಿ. ಗುಂಪಿನ ಇತರರು ಸರಿತಪ್ಪು ಗುರುತಿಸಲಿ. ಬಳಿಕ ತಪ್ಪಿದ್ದಲ್ಲಿ ಸರಿಪಡಿಸಿ ಬರೆಯಲಿ.

### ವಾಕ್ಯ ರಚಿಸುವ

ಪದಗಳನ್ನು ಕ್ರಮತಪ್ಪಿಸಿ ಕೊಟ್ಟಿರುವುದನ್ನು ಮಕ್ಕಳ ಗಮನಕ್ಕೆ ತರುವುದು. ಅದನ್ನು ಸರಿಪಡಿಸುವುದು ಹೇಗೆ? ಎಂದು ಪ್ರಶ್ನಿಸಿ ಆಶಯವು ಅರ್ಥವಾಗುವಂತೆ ಸರಿಯಾದ ವಾಕ್ಯವನ್ನು ಜೋಡಿಸಲು ಹೇಳುವುದು. ಸಾಧ್ಯವಾಗದಿದ್ದರೆ ಪಾಠಭಾಗದಲ್ಲಿ ಆ ವಾಕ್ಯವನ್ನು ಹುಡುಕಿ ಕ್ರಮೀಕರಿಸಿ ಬರೆಯಲು ಹೇಳಬಹುದು.

1. ಸಮಾಧಿಯ ಮುಂದೆ ಜನರು ಸೇರಿ ಅವನ ಗುಣಗಾನ ಮಾಡುತ್ತಾರೆ.
2. ವೇಲುತಂಬಿ ಊರೂರು ಸುತ್ತಾಡಲು ಆರಂಭಿಸಿದ
3. ಆಂಗ್ಲರನ್ನು ಭಾರತದಿಂದ ಹೊರದೂಡಲು ಕರೆನೀಡಿದ
4. ಅವನು ವಾಸಿಸುತ್ತಿದ್ದ ಬಂಗಲೆಗೆ ಮುತ್ತಿಗೆ ಹಾಕಿದರು.
5. ರಾಜನು ಮಂತ್ರಿಗಳೊಡನೆ ಸಮಾಲೋಚನೆ ನಡೆಸಿದ

**ಸಂಗ್ರಹಿಸುವ**

ಕೇರಳದಲ್ಲಿ ಬ್ರಿಟಿಷರ ವಿರುದ್ಧ ಹೋರಾಡಿದ ಮಹಾನುಭಾವರ ಮಾಹಿತಿ/ಚಿತ್ರ ಸಂಗ್ರಹಿಸಲು ಹೇಳುವುದು.

- ಪಳಶ್ಶಿರಾಜ
- ಕುಞ್ಞಾಲಿ ಮುರಕ್ಕಾತ್
- 

## 3. ಖಾನ್ ಅಬ್ದುಲ್ ಗಫಾರ್ ಖಾನ್

ಸ್ವಾತಂತ್ರ್ಯ ಹೋರಾಟದಲ್ಲಿ ಭಾಗವಹಿಸಿದ ಮಹಾ ಪುರುಷರಲ್ಲಿ ಭಾರತ ದೇಶದ ಹೊರಗಿನವರೂ ಇದ್ದಾರೆ. ಪಾಕಿಸ್ಥಾನ, ಬಾಂಗ್ಲಾಗಳು ಕೂಡಿದ ಅಖಂಡ ಭಾರತದಲ್ಲಿದ್ದ ಸರ್ವರೂ ಸ್ವಾತಂತ್ರ್ಯವನ್ನು ಬಯಸಿ ಹೋರಾಟ ಮಾಡಿದ್ದಾರೆ. ಆದರೆ ಸ್ವಾತಂತ್ರ್ಯ ದೊರೆತಾಗ ಪಾಕಿಸ್ಥಾನ, ಬಾಂಗ್ಲಾಗಳು ಬೇರೆ ದೇಶಗಳಾದುವು. ಅಬ್ದುಲ್ ಗಫಾರ್ ಖಾನರು ಪಾಕಿಸ್ಥಾನದಲ್ಲಿರುವ ಪಂಜಾಬ್ ಪ್ರಾಂತ್ಯದವರು. ಮಹಾತ್ಮಾ ಗಾಂಧೀಜಿಯ ನಿಕಟವರ್ತಿಗಳು. ಅವರ ಕುರಿತು ತಿಳಿಯೋಣ ಎಂದು ಪಾಠಪ್ರವೇಶ ಮಾಡಬಹುದು.

**ಚಟುವಟಿಕೆಗಳು**

**ಓದುವ**

ಮಕ್ಕಳು ಗುಂಪುಗಳಾಗಲಿ. ಗುಂಪಿನಿಂದ ಒಬ್ಬರಂತೆ ಅನುಕ್ರಮವಾಗಿ ಪಾಠವನ್ನು ಓದಲಿ ಯಾರು ತಪ್ಪಿಲ್ಲದೆ ಓದಿದ್ದಾರೆ ಎಂದು ಗುರುತಿಸುವುದು. ಅದೇ ರೀತಿ ಯಾರು ವೇಗವಾಗಿ, ಸ್ಪಷ್ಟವಾಗಿ ಓದಬಲ್ಲರು ಎಂದು ಓದುವ ಸ್ಪರ್ಧೆಯನ್ನು ಏರ್ಪಡಿಸಬಹುದು.

**ಘಟನೆಗಳನ್ನು ಬರೆಯುವ**

ಗಫಾರ್ ಖಾನರ ಜೀವನದ ಘಟನೆಗಳನ್ನು ಪಾಠಭಾಗದ ಆಧಾರದಲ್ಲಿ ಅನುಕ್ರಮವಾಗಿ ಬರೆಯಬೇಕಾಗಿದೆ. ಮಕ್ಕಳು ಗುಂಪಾಗಿ ಕುಳಿತು ಬರೆದು ಮಂಡಿಸಲಿ. ಬಳಿಕ ತರಗತಿಯಲ್ಲಿ ಓದಿ ಉತ್ತಮಪಡಿಸುವುದು.

**ಪ್ರಶ್ನೆ ತಯಾರಿಸುವ**

ಪ್ರಶ್ನೆ ತಯಾರಿ ಆಶಯ ಗ್ರಹಣದ ಒಂದು ತಂತ್ರವಷ್ಟೇ? ಮಕ್ಕಳು ಗುಂಪಿನಲ್ಲಿ ಕುಳಿತು ಸಾಧ್ಯವಿದ್ದಷ್ಟು ಪ್ರಶ್ನೆ ತಯಾರಿಸಲಿ ಪ್ರಶ್ನೆಗಳನ್ನು ರಚಿಸುವಾಗ ಪದದಲ್ಲಿ, ವಾಕ್ಯದಲ್ಲಿ, ವಾಕ್ಯಗಳಲ್ಲಿ ಉತ್ತರ ಲಭಿಸುವಂತೆ ವೈವಿಧ್ಯಪೂರ್ಣವಾದ ವಸ್ತುನಿಷ್ಟ (Objective), ಸರಳವಾಕ್ಯಗಳ (Short answer), ವಿವರಣಾತ್ಮಕ (Descriptive) ಪ್ರಶ್ನೆಗಳನ್ನು ಗಮನದಲ್ಲಿಟ್ಟುಕೊಳ್ಳಲು ಅಗತ್ಯವಾದ ಸೂಚನೆಗಳನ್ನು ನೀಡುವಿರಲ್ಲವೇ?

ಉದಾ :

- ಖಾನ್ ಗಫಾರ್ ಖಾನರು ಎಲ್ಲಿ ಜನಿಸಿದರು?
- ಗಫಾರ್ ಖಾನರನ್ನು ಜನರು 'ಗಡಿನಾಡಿನ ಗಾಂಧಿ' ಎಂದು ಕರೆಯಲು ಕಾರಣವೇನು?
- ಗಫಾರ್ ಖಾನರಿಗೆ ದೊರೆತ ಪ್ರಶಸ್ತಿಗಳು ಯಾವುವು?

**ಸರಿಯಾದ ಪದ ಬರೆಯುವ**

ಕೊಟ್ಟಿರುವ ಪದಗಳಿಂದ ಸರಿಯಾದ ಪದವನ್ನು ಮಕ್ಕಳು ಆಯ್ದು ಬರೆಯಿರಿ. ಇದೇ ರೀತಿಯ ಸಾಕಷ್ಟು ಉದಾಹರಣೆಗಳನ್ನು ನೀಡಿ ಸರಿಯಾದ ಪದ ಗುರುತಿಸುವ ಕೌಶಲವನ್ನು ಬೆಳೆಸಲು ಸಹಕರಿಸಿರಿ.

- ಶತಮಾನೋತ್ಸವ
- ಅಂತರಾಷ್ಟ್ರೀಯ
- ಸ್ವಾತಂತ್ರ್ಯ
- ಸರ್ವಾಧಿಕಾರ

**ಬದಲಾಯಿಸಿ ಬರೆಯುವ**

ಅಡಿಗೆರೆ ಎಳೆದ ಪದಗಳನ್ನು ಮಾದರಿಯಂತೆ ಬದಲಾಯಿಸಿ ಬರೆಯಬೇಕಾಗಿದೆ. ಇಲ್ಲಿ ಪುಲ್ಲಿಂಗದಿಂದ ಸ್ತ್ರೀಲಿಂಗ ರೂಪಕ್ಕೆ ಬದಲಾಗುವಾಗ ಆಗುವ ವ್ಯತ್ಯಾಸಗಳನ್ನು ಮಕ್ಕಳು ಗುರುತಿಸಬೇಕು. ಸಾಕಷ್ಟು ಉದಾಹರಣೆಗಳನ್ನು ಕೊಟ್ಟು ವಾಕ್ಯ ರಚನೆಯ ಕ್ರಮವನ್ನು ತಿಳಿಸುವಿರಲ್ಲವೇ?

1. ಬಾಲಕಿಯು ವೇಗವಾಗಿ ಓಡಿದಳು
2. ವಿದ್ಯಾರ್ಥಿನಿಯರು ತರಗತಿಯಲ್ಲಿ ಗಲಾಟೆ ಮಾಡಿದರು
3. ಅರಸಿಯು ಆಜ್ಞೆ ಮಾಡಿದಳು

**ವ್ಯಕ್ತಿ ಪರಿಚಯ ಬರೆಯುವ**

ಕೊಡಲಾದ ಮಾಹಿತಿಗಳ ಆಧಾರದಲ್ಲಿ ವ್ಯಕ್ತಿ ಪರಿಚಯ ಬರೆಯಿಸುವುದು. ಗುಂಪಿನಲ್ಲಿ ಬರೆದು ತರಗತಿಯಲ್ಲಿ ಮಂಡಿಸಿ ಉತ್ತಮಪಡಿಸಲಿ.

## ಸರೋಜಿನಿ ನಾಯ್ಡು

ಸರೋಜಿನಿ ನಾಯ್ಡು 1879 ಫೆಬ್ರವರಿ 13 ರಂದು ಹೈದರಾಬಾದಿನಲ್ಲಿ ಜನ್ಮವೆತ್ತಿದರು. ಅವರ ತಂದೆ ಅಘೋರನಾಥ ತಾಯಿ ವರಸುಂದರಿ ಅವರಿಗೆ ಬಾಲ್ಯದಿಂದಲೇ ಸಾಹಿತ್ಯದಲ್ಲಿ ಆಸಕ್ತಿಯಿತ್ತು.

ಸರೋಜಿನಿ ನಾಯ್ಡುರವರು ಗೋವಿಂದ ರಾಜುಲು ನಾಯ್ಡು ಅವರನ್ನು ವಿವಾಹವಾದರು. ಅನಂತರ ಅವರು ಸ್ವಾತಂತ್ರ್ಯ ಹೋರಾಟದಲ್ಲಿ ಭಾಗವಹಿಸಿದರು. ಉತ್ತಮ ಹಾಡುಗಾರ್ತಿಯು ಆಗಿದ್ದ ಸರೋಜಿನಿ 'ಭಾರತದ ಕೋಗಿಲೆ' ಎಂಬ ಬಿರುದನ್ನು ಪಡೆದರು. ಅವರು 1949 ರಲ್ಲಿ ನಿಧನರಾದರು.

### ಓದಿರಿ

ಭಾರತದ ಸ್ವಾತಂತ್ರ್ಯ ಹೋರಾಟಗಾರರ ಜೀವನ ಚರಿತ್ರೆಯನ್ನು ಮಕ್ಕಳು ಓದಿ ತಿಳಿಯಬೇಕಾಗಿದೆ. ಅದಕ್ಕಾಗಿ ಓದುವ ಮೂಲೆಯಲ್ಲಿ ಗಾಂಧೀಜಿ, ನೆಹರೂ, ಪಟೇಲ್ ಮುಂತಾದ ಮಹನೀಯರ ಜೀವನ ಚರಿತ್ರೆ ಪುಸ್ತಕಗಳನ್ನು ಒದಗಿಸಿರಿ. (ಭಾರತ ಭಾರತಿ, ವಾಸನ್ ಪಬ್ಲಿಕೇಶನ್, ನವಕರ್ನಾಟಕ ಮುಂತಾದ ಕಡೆಗಳಿಂದ ಪ್ರಕಟಿತಗೊಂಡ ಕಿರುಪುಸ್ತಕಗಳಿವೆ.)

## ಮೌಲ್ಯಮಾಪನ ಚಟುವಟಿಕೆಗಳು

# I

1. ಕೊಟ್ಟಿರುವ ಪದದ ವಿರೋಧಾರ್ಥ ಪದವನ್ನು ಪದ್ಯದಿಂದ ಆರಿಸಿ ಬರೆಯಿರಿ

   ಪಾಪ (1)

2. ‘ಎಲ್ಲಾ ಭೇದ ಮರೆತು’ ಪದ್ಯದ ಆಸ್ವಾದನ ಟಿಪ್ಪಣಿಯನ್ನು ಬರೆಯಿರಿ. (4)

# II

1. ಖಾಲಿ ಬಿಟ್ಟ ಸ್ಥಳವನ್ನು ಭರ್ತಿಗೊಳಿಸಿರಿ

   –ಬಾಲರಾಮವರ್ಮನು ನ

   ರಾಜನಾಗಿದ್ದನು.

   (ಕೊಚ್ಚಿ, ಕುಂಬಳೆ, ತಿರುವಾಂಕೂರು) (1)

2. ವೇಲುತಂಬಿಯು ಜನರವನ್ನು ಬ್ರಿಟಿಷರ ವಿರುದ್ಧ ಹೋರಾಡಲು ಹೇಗೆ ಒಗ್ಗೂಡಿಸಿದನು? (2)

3. ಕೆಳಗಿನ ವಾಕ್ಯಗಳನ್ನು ಕ್ರಮೀಕರಿಸಿ ಬರೆಯಿರಿ (2)

   –1912 ರಲ್ಲಿ ಪಠಾಣ ಹುಡುಗಿಯನ್ನು ವಿವಾಹವಾದರು.

   –1998ರಲ್ಲಿ ಗಫಾರ್ ಖಾನರು ನಿಧನ ಹೊಂದಿದರು.

   –ಅಬ್ದುಲ್ ಗಫಾರ್ ಖಾನರು 1890ರಲ್ಲಿ ಪಂಜಾಬಿನಲ್ಲಿ ಜನಿಸಿದರು.

   –1929ರಲ್ಲಿ ಅವರಿಗೆ ‘ಫಕೀರ್ ಇ ಅಫ್‌ಘಾನ್’ ಎಂಬ ಬಿರುದು ದೊರೆಯಿತು.

# 7. ಹೋಗೋಣ ಬಾರಾ

ಪ್ರವಾಸದಿಂದ ಸಿಗುವ ಅನುಭವ ಧಾರಾಳ. ಆದಿಕಾಲದಿಂದಲೂ ಮಾನವನು ಸಂಚಾರವನ್ನು ಜೀವನದ ಭಾಗವಾಗಿ ಸ್ವೀಕರಿಸಿದ್ದ. ಉದ್ದೇಶಗಳು ಹಲವಾದರೂ ಪ್ರವಾಸ ಇಂದು ದೊಡ್ಡ ಉದ್ಯಮವಾಗಿ ಬೆಳೆದಿದೆ. ಭಾಷೆ, ಸಂಸ್ಕೃತಿ, ಕಲೆ, ಜ್ಞಾನ, ಅನುಭವಗಳು ಪರಸ್ಪರ ಹಂಚಿಕೊಳ್ಳಲು ಪ್ರವಾಸದಿಂದ ಸಾಧ್ಯವಾಗುತ್ತಿದೆ. ಇಂದಿನ ಯುಗದಲ್ಲಿ ಜಗತ್ತು ಕಿರಿದಾಗಿದೆ. ಆದರೆ ಅನುಭವಗಳು ವೈವಿಧ್ಯಪೂರ್ಣ. ಈ ಪಾಠದ ಮೂಲಕ ಪ್ರವಾಸ ಆಶಯವನ್ನು ಕೇಂದ್ರೀಕರಿಸಿಕೊಂಡು, ಕಥೆ, ವಿವರಣೆ, ಪದ್ಯಗಳ ಮೂಲಕ ಹೀಗೆ ಹಲವು ಭಾಷಾ ಕಲಿಕೆಯ ಚಟುವಟಿಕೆಗಳನ್ನು ನೀಡಲಾಗಿದೆ. ಅಧ್ಯಾಪಕರು ಇಲ್ಲಿ ನೀಡಿರುವ ಸೂಚನೆಗಳ ಸಹಾಯದಿಂದ ಉತ್ತಮ ತಯಾರಿಯೊಂದಿಗೆ ಚಟುವಟಿಕೆಗಳನ್ನು ಫಲಕಾರಿಯಾಗುವಂತೆ ಮಾಡಬೇಕಾಗಿದೆ.

## ಕಲಿಕಾ ಸಾಧನೆಗಳು

- ಘಟನೆಗಳು, ದೃಶ್ಯಗಳು ಮೊದಲಾದುವುಗಳನ್ನು ವಿಶ್ಲೇಷಿಸಿ ಸೂಕ್ತವಾದ ಭಾಷೆಯಲ್ಲಿ ವಿವರಿಸುವುದು ಮತ್ತು ಬರೆಯುವುದು.
- ಕಥೆ, ಕವಿತೆ, ವಿವರಣೆ, ವರ್ಣನೆ, ಮೊದಲಾದವುಗಳನ್ನು ಆಲಿಸಿ ಮತ್ತು ಓದಿ ತನ್ನದೇ ಆದ ರೀತಿಯಲ್ಲಿ ಹೇಳುವುದು ಮತ್ತು ಬರೆಯುವುದು.
- ಕವಿತೆಯನ್ನು ಅರ್ಥೈಸಿಕೊಂಡು ರಾಗ, ತಾಳ, ಭಾವಗಳನ್ನು ಪರಿಗಣಿಸಿ ಹಾಡುವುದು.
- ಕವಿತೆಯ ಆಶಯವನ್ನು ಅರಿತು ಆಸ್ವಾದಿಸುವುದು ಮತ್ತು ಆಸ್ವಾದನ ಟಿಪ್ಪಣಿಯನ್ನು ಬರೆಯುವುದು.
- ವಿಶೇಷಣಗಳು, ವಿಶೇಷ ಪ್ರಯೋಗಗಳು ಮೊದಲಾದುವುಗಳನ್ನು ಸೂಕ್ತವಾಗಿ ಸೇರಿಸಿ ವಾಕ್ಯವನ್ನು ಬರೆಯುವುದು.
- ಪಾಠಭಾಗವನ್ನು ವ್ಯವಹಾರ ರೂಪಕ್ಕೆ ತಕ್ಕಂತೆ ನಿರರ್ಗಳವಾಗಿ ಸ್ವರಭಾರ ಮತ್ತು ಉಚ್ಚಾರಸ್ಪಷ್ಟತೆಯೊಂದಿಗೆ ಓದುವುದು.
- ಪತ್ರಿಕಾ ವರದಿ ಮತ್ತು ವಾರ್ತೆಗಳನ್ನು ವಿಶ್ಲೇಷಿಸಿ (ಯಾರು, ಯಾರಿಗೆ, ಎಲ್ಲಿ, ಏನು, ಹೇಗೆ, ಯಾಕೆ, ICT ಸಾಧ್ಯತೆ) ಪತ್ರ, ಭಿತ್ತಿಪತ್ರ, ಕರಪತ್ರ ಮೊದಲಾದವುಗಳನ್ನು ರಚಿಸುವುದು.
- ಕಥೆ, ಕವಿತೆ, ವಿವರಣೆ, ಭಿತ್ತಿಪತ್ರಿಕೆ ಮೊದಲಾದ ಸೃಜನಾತ್ಮಕ ರಚನೆಯಲ್ಲಿ ತೊಡಗುವುದು ಮತ್ತು ಅವುಗಳನ್ನು ಸಂಗ್ರಹಿಸಿ ಸಂಚಿಕೆ, ಹಸ್ತಪತ್ರಿಕೆ, ಭಿತ್ತಿಪತ್ರಿಕೆಗಳನ್ನು ತಯಾರಿಸುವುದು.
- ಕಥೆ ಮತ್ತು ಕವಿತೆಗಳ ಸಾಲುಗಳ ಅರ್ಥವನ್ನು ತಿಳಿದುಕೊಂಡು ಪದಸೌಂದರ್ಯವನ್ನು ಆಸ್ವಾದಿಸಿ ಆಶಯವನ್ನು ಹೇಳುವುದು ಮತ್ತು ಬರೆಯುವುದು.
- ಉತ್ತಮ ದಿನಚರಿಗಳನ್ನು ಓದುವುದು ಮತ್ತು ಸ್ವ ಅನುಭವಗಳನ್ನು ಅಳವಡಿಸಿ ದಿನಚರಿ ಬರೆಯುವುದು.
- ಪದಪ್ರಯೋಗ, ಭಾಷಾಪ್ರಯೋಗ, ಆಶಯ ಮೊದಲಾದವುಗಳನ್ನು ತನ್ನ ರಚನೆಯಲ್ಲಿ ಬಳಸಿಕೊಳ್ಳುವುದು.
- ಕೃತಿ ರಚನೆಯಲ್ಲಿ ಇತರರು ಬಳಸಿದ ಆಶಯ, ಪ್ರಯೋಗ, ನುಡಿಗಟ್ಟು ಮೊದಲಾದುವುಗಳನ್ನು ಹೋಲಿಸಿ ತನ್ನ ರಚನೆಗಳನ್ನು ಉತ್ತಮಪಡಿಸುವುದು.
- ಸರ್ವನಾಮ ಹಾಗೂ ಉಪಸರ್ಗಗಳನ್ನು ಉಪಯೋಗಿಸಿ ವಾಕ್ಯಗಳನ್ನು ರಚಿಸುವುದು.
- ಓದುವ ಮೂಲೆ, ವಾಚನಾಲಯ ಮತ್ತು ಇತರೆಡೆಗಳಿಂದ ಲಭಿಸುವ ಓದುವ ಸಾಮಾಗ್ರಿಗಳನ್ನು ಓದಿ ದೊರೆತ ಅನುಭವಗಳನ್ನು ವಿಭಿನ್ನ ರೀತಿಯಲ್ಲಿ ಹಂಚಿಕೊಳ್ಳುವುದು.
- ಓದಿದ, ಆಲಿಸಿದ ವ್ಯವಹಾರದ ರೂಪದ ಆಶಯವನ್ನು ತಿಳಿದುಕೊಂಡು ಇನ್ನೊಂದು ವ್ಯವಹಾರ ರೂಪವಾಗಿ ಬದಲಾಯಿಸುವುದು.
- ಮಾಹಿತಿ ತಂತ್ರಜ್ಞಾನವನ್ನು (ICT) ಉಪಯೋಗಿಸಿ, ಕೇಳಿಯೂ ನೋಡಿಯೂ ಆಶಯವನ್ನು ತಿಳಿದುಕೊಂಡು ಸ್ವಂತ ರಚನೆ ಮಾಡುವುದು ಮತ್ತು ಮಂಡಿಸುವುದು.

# ಯೂನಿಟ್ ಗ್ರಿಡ್

**ಯೂನಿಟ್ 7 : ಹೋಗೋಣ ಬಾರಾ** ಸಮಯ : 7+5+7 ಪಿಯಾಡುಗಳು

| ಪಾಠದ ಹೆಸರು | ಆಶಯ/ ಉದ್ದೇಶಗಳು | ಪ್ರಕ್ರಿಯೆ | ಪೂರಕ ಸಾಮಗ್ರಿಗಳು | ಮೌಲ್ಯನಿರ್ಣಯ |
|---|---|---|---|---|
| 1. ನಾವಿಕ ಸಿಂದಾಬಾದ್ | • ಪ್ರಯಾಣವು ಒಂದು ರಸಪೂರ್ಣವಾದ ಅನುಭವವಾಗಿದೆ.<br>• ಜನರು ಪ್ರವಾಸ ಹೋಗಲು ಇಷ್ಟಪಡುತ್ತಾರೆ.<br>• ಪ್ರವಾಸವು ಜ್ಞಾನ, ಅನುಭವಗಳನ್ನು ಹೆಚ್ಚಿಸುವುದಕ್ಕೆ ಕಾರಣವಾಗಿದೆ.<br>• ಹೊಸ ಹೊಸ ಶೋಧನೆಗಳಿಗೆ ಪ್ರವಾಸವು ಕಾರಣವಾಗಿದೆ. | • ಕಥೆ ಮುಂದುವರಿಸುವುದು<br>• ಕಥೆ ಹೇಳುವುದು<br>• ಕಥೆ ರಚಿಸುವುದು<br>• ಪತ್ರ ಬರೆಯುವುದು<br>• ಚರ್ಚಿಸುವುದು | • ದಾರಿ ದೀಪ<br>• ಪ್ರವಾಸ ಸಾಹಿತ್ಯ<br>• ಮಾದರಿ ಪತ್ರಗಳು | • ಕಥೆ<br>• ಪತ್ರ |
| 2. ಬಾನಿನಗಲ ಪಟ ಪಟ | • ಪ್ರವಾಸೀ ತಾಣಗಳು ಮನರಂಜನೆಯ ತಾಣಗಳೂ ಆಗಿರುತ್ತವೆ.<br>• ಮನರಂಜನೆಗೆ ಬೇರೆ ಬೇರೆ ಹವ್ಯಾಸಗಳೂ ಕಾರಣವಾಗುತ್ತವೆ.<br>• ಗಾಳಿಪಟದ ಹಾರಿಸುವಿಕೆ, ತಯಾರಿಯಲ್ಲಿ ಸೃಜನಾತ್ಮಕತೆಯಿದೆ. | • ವಿವರಣೆ<br>• ಚರ್ಚೆ<br>• ಪದ್ಯ ರಚನೆ<br>• ಭಾಷಾ ಆಟ<br>• ಚಿತ್ರ ರಚನೆ | • ದಾರಿದೀಪ<br>• ಗಾಳಿಪಟ ಮಾದರಿಗಳು/ ಚಿತ್ರಗಳು | • ವಿವರಣೆ<br>• ಪದ್ಯ<br>• ಚಿತ್ರ |
| 3. ಜೋಗದ ಸಿರಿ | • ಪ್ರಾಕೃತಿಕವಾದ ಪ್ರವಾಸಿ ತಾಣಗಳಿವೆ<br>• ಪ್ರವಾಸವು ಮನಸ್ಸಿಗೆ ಉಲ್ಲಾಸವನ್ನೂ ಅನುಭವಗಳನ್ನೂ ನೀಡುತ್ತದೆ.<br>• ಬಿಡುವಿನ ವೇಳೆಯನ್ನು ಸದುಪಯೋಗ ಪಡಿಸಲು ಪ್ರವಾಸವು ಉತ್ತಮ ಸಾಧನ | • ವರ್ಣನೆ ಬರೆಯುವುದು<br>• ಪದ್ಯ ರಚಿಸುವುದು | • ದಾರಿ ದೀಪ<br>• ICT | • ವರ್ಣನೆ<br>• ಪದ್ಯ |

# 1. ನಾವಿಕ ಸಿಂದಬಾದ್

ಅನಾದಿಕಾಲದಿಂದಲೂ ಜನರು ಒಂದೆಡೆಯಿಂದ ಇನ್ನೊಂದೆಡೆಗೆ ತೆರಳುತ್ತಾ ಜೀವನ ಸಾಗಿಸುತ್ತಿದ್ದರು. ಆಹಾರ, ಸಂಪತ್ತಿನ ಹುಡುಕಾಟ, ವ್ಯಾಪಾರ– ಇನ್ನಿತರ ಉದ್ದೇಶಗಳಿಂದ ನೆಲ ಜಲ ಮಾರ್ಗಗಳಿಂದ ಸಂಚರಿಸುತ್ತಿದ್ದರು. ಈ ರೀತಿಯ ಯಾನಗಳು ಸಾಹಸಮಯವೂ ಆಗಿರುತ್ತಿತ್ತು. ಸಮುದ್ರಯಾನದ ಕಥೆಗಳನ್ನೊಳಗೊಂಡ 'ನಾವಿಕ ಸಿಂದಬಾದ್'ನ ಕಥೆಗಳಲ್ಲಿ ಒಂದನ್ನು ಇಲ್ಲಿ ಕೊಡಲಾಗಿದೆ. ಇದು ಸಾಹಸಮಯ ಕಥೆಯಾಗಿದ್ದು ಇದನ್ನು ಮಕ್ಕಳು ಓದಿ ಅರ್ಥೈಸುವ ಮೂಲಕ ಹೆಚ್ಚು ಹೆಚ್ಚು ಕಥೆಗಳನ್ನು ಓದುವಂತೆ ಪ್ರೇರಣೆ ಸಿಗಬೇಕಾಗಿದೆ. ಮಕ್ಕಳಿಗೆ ಸೂಕ್ತ ಪುಸ್ತಕಗಳನ್ನು ಒದಗಿಸುವಿರಲ್ಲವೇ?

### ಚಟುವಟಿಕೆಗಳು

'ನಾವಿಕ ಸಿಂದಾಬಾದ್' ಕಥೆಯ ಬಳಿಕ ಇರುವ 5 ಚಟುವಟಿಕೆಗಳು ಈ ಪಾಠದ ಆಶಯ ಗ್ರಹಣಕ್ಕೆ ಸಹಕಾರಿಯಾಗುವುವು.

### ಅರ್ಥವನ್ನು ಬರೆಯುವ

ಮಕ್ಕಳು ಪಾಠವನ್ನು ಒಂದೆರಡು ಬಾರಿಯಾದರೂ ಓದಲಿ. ತರಗತಿಯಲ್ಲಿ ಎದ್ದು ನಿಂತು ಕಥೆಯನ್ನು ಗಟ್ಟಿಯಾಗಿ ಓದಲು ಹೇಳಬಹುದು. ಬಳಿಕ ಮೌನವಾಗಿ ಓದಲಿ. 'ಅರ್ಥವನ್ನು ಬರೆಯುವ' ಚಟುವಟಿಕೆಯಲ್ಲಿ ಕೊಟ್ಟಿರುವ ಪಾಠವನ್ನು ಓದಲು ಹೇಳುವುದು. ಅಡಿಗೆರೆಯೆಳೆದ ಪದಗಳ ಸಂದರ್ಭವನ್ನು ನೋಡಿ ಅರ್ಥೈಸುವುದು. ಬಳಿಕ ಈ ಪದಗಳ ಸಮಾನಾರ್ಥವನ್ನು ನೀಡುವ ಪದಗಳನ್ನು ಪಾಠವನ್ನು ಓದಿ, ಅಲ್ಲಿ ಗುರುತಿಸುವುದು. ಇಲ್ಲಿ ಪದಗಳ ಸಮಾನಾರ್ಥಗಳನ್ನು ಹುಡುಕುವ ಉದ್ದೇಶದಿಂದ ಮಗುವು ಹಲವು ಸಲ ಕಥೆಯನ್ನು ಓದಿ ಪದಗಳು ಪ್ರಯೋಗಿಸಲ್ಪಟ್ಟ ಸಂದರ್ಭಗಳನ್ನು ತಿಳಿದು ಅವಕಾಶ ಲಭಿಸುತ್ತದೆ. ಇದು ಮುಂದಿನ ಚಟುವಟಿಕೆಗಳಿಗೆ ಸಹಕಾರಿಯಾಗುತ್ತದೆ.

**ಉತ್ತರಗಳು :** ನಗರ – ಪಟ್ಟಣ, ಹೊತ್ತು – ವೇಳೆ, ಹೊಯ್ಗೆ ರಾಶಿ – ಮರಳ ರಾಶಿ, ಭಯವಾಯಿತು – ಹೆದರಿಕೆಯಾಯಿತು. ಬೃಹದಾಕಾರ – ಭಾರೀ, ಛಿದ್ರ ಛಿದ್ರವಾಯಿತು – ನುಚ್ಚುನೂರಾಯಿತು. ಕೊಂಡು ಹೋಯಿತು – ಒಯ್ದಿತು, ವೃಕ್ಷ – ಮರ, ಏರಿ – ಹತ್ತಿ, ಹಿಂದಿರುಗಿದನು – ಮರಳಿದನು.

### ಪದ ಬರೆಯುವ

ಪದ ಬರೆಯುವ ಚಟುವಟಿಕೆಯಲ್ಲಿ ಕೆಲವು ಪದಗಳನ್ನು ಕೊಡಲಾಗಿದೆ. ಅವುಗಳಿಗೆ ಸೂಕ್ತವಾದ ಒಂದೇ ಪದವನ್ನು ಆವರಣದ ಒಳಗೆ ಕೊಟ್ಟಿರುವ ಪದಗಳಿಂದ ಆಯ್ಕೆ ಮಾಡಲಿ. ಪದಗಳನ್ನು ಅರ್ಥೈಸಲು ಪಾಠವನ್ನು ಒಂದೆರಡು ಸಾರಿ ಓದಬೇಕು. ಅಲ್ಲಿ ಆ ಪದಗಳು ಪ್ರಯೋಗಿಸಿದ ಸಂದರ್ಭದ ಮೂಲಕ ಈ ಪದಗಳನ್ನು ಸುಲಭದಲ್ಲಿ ಅರ್ಥೈಸಬಹುದು.

(ಅ. ನಾವಿಕ, ಆ. ದ್ವೀಪ, ಇ. ಕಣಿವೆ, ಈ. ವರ್ತಕರು, ಉ. ಗುಹೆ.)

### ಗುರುತಿಸುವ

ಈ ಚಟುವಟಿಕೆಯನ್ನು ಮಗುವು ಸ್ವತಃ ಮಾಡುವುದರಿಂದ ಪಾಠವನ್ನು ಮತ್ತೆ ಮತ್ತೆ ಆಸಕ್ತಿಯಿಂದ ಓದಿ ಅರ್ಥೈಸಲು ಸಹಕಾರಿಯಾಗುವುದು.

**ಉತ್ತರಗಳು :**

(ಅ) ಅವನು ರಾಕ್ ಪಕ್ಷಿಯ ಕಾಲಿಗೆ ತನ್ನನ್ನು ಕಟ್ಟಿಕೊಂಡನು. ಮರುದಿನ ಬೆಳಿಗ್ಗೆ ಪಕ್ಷಿ ಹಾರಿತು. ಅದರೊಂದಿಗೆ ಸಿಂದಬಾದನೂ ಹಾರಿದನು. (ಪುಟ 124)

(ಆ) ಆ ದ್ವೀಪವನ್ನು ಪರೀಕ್ಷಿಸಲೆಂದು ಸಿಂದಬಾದ್ ಪಕ್ಕದಲ್ಲಿ ಬೆಳೆದು ನಿಂತಿದ್ದ ಎತ್ತರವಾದ ಮರವೊಂದನ್ನು ಹತ್ತಿ ನೋಡಿದನು, ದೂರದಲ್ಲಿ ಬೆಳ್ಳಗೆ ಗುಂಡಗಿನ ದೊಡ್ಡ ಆಕೃತಿಯನ್ನು ಕಂಡನು. (ಪುಟ 124)

(ಇ) ಸಮುದ್ರದಲ್ಲಿ ......... ಎಸೆಯಲ್ಪಟ್ಟನು. (3 ವಾಕ್ಯಗಳು ಪುಟ. 124)

(ಈ) ಆ ಕಣಿವೆಯ ತುಂಬಾ ಮುತ್ತು ರತ್ನಗಳು ಚೆಲ್ಲಿಬಿದ್ದಿದ್ದರೂ ....... ಹೊರಬರುತ್ತಿದ್ದವು. (2 ವಾಕ್ಯಗಳು ಪುಟ 125)

(ಉ) ಒಂದು ಬಟ್ಟೆಯ ತುಂಬಾ ......... ಓಡಿಸಿದರು. (4 ವಾಕ್ಯಗಳು.125)

(ಊ) ಸಿಂದಬಾದನು ಅವರಿಗೆ ತನ್ನ ........... ತನ್ನೂರಿಗೆ ಮರಳಿದನು. (2 ವಾಕ್ಯಗಳು ಪುಟ 125)

### ಪ್ರಶ್ನೆ ತಯಾರಿಸುವ

ಮಕ್ಕಳು ಪಾಠದ ಪ್ರಧಾನ ಆಶಯಗಳು ಉತ್ತರಗಳಾಗಿ ಬರುವಂತೆ ಪ್ರಶ್ನೆಗಳನ್ನು ತಯಾರಿಸಬೇಕು. ಇದಕ್ಕಾಗಿ ಪಾಠದ ಪ್ರಧಾನ ಆಶಯಗಳು ಯಾವುದೆಲ್ಲಾ ಎಂದು ಮಕ್ಕಳು ಚರ್ಚಿಸಿ ನಿರ್ಧರಿಸಲಿ. ಹಿಂದಿನ ಗುರುತಿಸುವ ಚಟುವಟಿಕೆ ಇದಕ್ಕೆ ತುಂಬಾ ಸಹಕಾರಿಯಾಗಿದೆಯಲ್ಲವೇ?

**ಪ್ರಶ್ನೆಗಳು :**

1. ಅಪರಿಚಿತ ದ್ವೀಪವನ್ನು ಸಿಂದಬಾದನು ಹೇಗೆ ಪರೀಕ್ಷಿಸಿದನು?
2. ಸಿಂದಬಾದನು ದ್ವೀಪದಿಂದ ತಪ್ಪಿಸಿಕೊಳ್ಳಲು ಏನು ಉಪಾಯ ಮಾಡಿದನು?
3. ಸಿಂದಬಾದನಿಗೆ ಕಣಿವೆಯಲ್ಲಿ ಉಳಿಯಲು ಯಾಕೆ ಹೆದರಿಕೆಯಾಯಿತು?
4. ಕಣಿವೆಯಲ್ಲಿದ್ದ ಮುತ್ತು ರತ್ನಗಳನ್ನು ವರ್ತಕರು ಹೇಗೆ ಸಂಗ್ರಹಿಸುತ್ತಿದ್ದರು?
5. ಸಿಂದಬಾದನು ಆ ಭಯಂಕರ ತಾಣದಿಂದ ತಪ್ಪಿಸಿಕೊಳ್ಳಲು ಹೂಡಿದ ಉಪಾಯವೇನು?

### ಹೊಂದಿಸುವುದು

ಪಾಠದ ಆಧಾರದಲ್ಲಿ 'ಖ' ವಿಭಾಗದಲ್ಲಿ ಕೊಟ್ಟಿರುವ ನಾಮಪದಗಳ ವಿಶೇಷಣಗಳನ್ನು 'ಕ' ವಿಭಾಗದಿಂದ ಆಯ್ದು ಮಕ್ಕಳು ಜೊತೆಗೊಳಿಸಲಿ.

ಸಣ್ಣ ಗುಹೆ, ಎತ್ತರವಾದ ಮರ, ಭಯಂಕರ ಹಾವು, ಅಪರಿಚಿತ ದ್ವೀಪ, ಭಾರೀಹದ್ದು, ಗುಂಡಗಿನ ಆಕೃತಿ.

ನಾಮಪದಗಳ ಅರ್ಥವನ್ನು ವಿಶೇಷವಾಗಿ ತಿಳಿಸುವ ಇವುಗಳು ನಾಮ ವಿಶೇಷಣಗಳು ಎಂದು ಕರೆಯಲ್ಪಡುತ್ತದೆ. ಇಂತಹ ಇನ್ನಷ್ಟು ಪದಗಳನ್ನು ಇತರೆಡೆಗಳಿಂದ ಸಂಗ್ರಹಿಸಲಿ.

### ಊಹಿಸಿ ಬರೆಯುವ

ಮಕ್ಕಳು ಪಾಠವನ್ನು ಹಲವಾರು ಬಾರಿ ಓದಿ ತಿಳಿದಿರಲ್ಲವೇ? ಈ ಮೇಲಿನ ಚಟುವಟಿಕೆಗಳು ಅದಕ್ಕೆ ಸಹಕಾರಿಯಾಗಿತ್ತು. ಈ ಚಟುವಟಿಕೆ ಇನ್ನಷ್ಟು ಮುಂದುವರಿದು ಮಗುವಿನ ಸೃಜನಾತ್ಮಕ ರಚನೆಗೆ ಅವಕಾಶ ಕಲ್ಪಿಸುತ್ತದೆ. ಲಘುವಾದ ಚರ್ಚೆ ನಡೆಸಲಿ. ಆ ಬಳಿಕ ಮೊದಲಿಗೆ ಕಥೆಯ ಬಗ್ಗೆ ಕೊಟ್ಟಿರುವ ಉದಾಹರಣೆಯನ್ನು ಓದಲಿ.

ಮರಳ ರಾಶಿಗೆ ಎಸೆಯಲ್ಪಟ್ಟ ಸಿಂದಬಾದನು ಆಡಿರಬಹುದಾದ ಮಾತುಗಳನ್ನು ಉದಾಹರಣೆಯಾಗಿ ಕೊಟ್ಟಿದೆ. ಅದೇ ರೀತಿ ಮರದ ತುದಿ ಏರಿ ನಿಂತ ಸಿಂದಬಾದನು ಸ್ವಗತವಾಗಿ ಏನು ಹೇಳಿರಬಹುದು ಎಂಬುದನ್ನು ಮುಂದುವರಿಸಿ

ಬರೆಯಲು ಹೇಳುವುದು. ಉತ್ತರ – ತುಂಬಾ ದೂರದವರೆಗೆ ಕಾಣುತ್ತಿದೆ ಓಹೋ"

ಅದೇನು? ದೂರದಲ್ಲಿ ಬೆಳ್ಳಗಿನ ವಸ್ತುವೊಂದು ಕಾಣುತ್ತಿದೆಯಲ್ಲಾ! ಗುಂಡಗಿದ್ದು ದೊಡ್ಡ ಆಕೃತಿ ಏನಾಗಿರಬಹುದು? ಇಲ್ಲಿಂದ ಸ್ಪಷ್ಟವಾಗಿ ಕಾಣಿಸುತ್ತಿಲ್ಲ. ಬಳಿಗೆ ಹೋಗಿ ನೋಡಲೇಬೇಕು.

ಇದರ ಬಳಿಕ ಈ ಕಥಾಭಾಗದಲ್ಲಿ ಬರುವ ಇತರ ಸಂದರ್ಭಗಳಲ್ಲಿ ಹೇಳುವ ಮಾತುಗಳನ್ನು ಬರೆದು ನೋಡಲಿ. ತರಗತಿಯಲ್ಲಿ ಓದಿ ಪರಸ್ಪರ ಮೌಲ್ಯಮಾಪನ ಮಾಡಲಿ.

### ಕಥೆಯನ್ನು ಹೇಳುವ

ಸಿಂದಬಾದನ ಕಥೆಯನ್ನು ಹೇಳುವ ಚಟುವಟಿಕೆಯನ್ನು ನಡೆಸುವುದು. ಮಕ್ಕಳು ಗುಂಪುಗಳಲ್ಲಿ ನಾವಿಕ ಸಿಂದಬಾದನ ಕಥೆಯನ್ನು ಹೇಗೆ ಹೇಳಿ ಮಂಡಿಸಬಹುದೆಂದು ಚರ್ಚಿಸಿ ಅಭ್ಯಾಸ ನಡೆಸಲಿ. ಗುಂಪುಗಳಲ್ಲಿ ಎಲ್ಲರೂ ಕಥೆ ಹೇಳಬೇಕು, ಗುಂಪಿನಲ್ಲಿ ಉತ್ತಮವಾಗಿ ಕಥೆಯನ್ನು ಮಂಡಿಸುವ ವಿದ್ಯಾರ್ಥಿಗೆ ತರಗತಿ ಮಟ್ಟದಲ್ಲಿ ಕಥೆ ಹೇಳುವ ಅವಕಾಶ ನೀಡುವುದು ಪ್ರತಿ ಗುಂಪುಗಳು ಮಂಡಿಸುವುದನ್ನು ಮೌಲ್ಯನಿರ್ಣಯ ಮಾಡಲಿ.

### ಕಥೆ ರಚಿಸುವ

ಮಕ್ಕಳೊಡನೆ ಸಿಂದಬಾದನಂತೆ ನೀವು ಅಪರಿಚಿತ ದ್ವೀಪಕ್ಕೆ ತಲುಪಿದ್ದರೆ ಏನು ಮಾಡುತ್ತಿದ್ದಿರಿ? ಎಂದು ಪ್ರಶ್ನಿಸಿ ಅವರು ಅಲ್ಲಿ ಕಾಣಬಹುದಾದ ವಿಚಿತ್ರಗಳು, ಅವರು ಮಾಡಿದ ಸಾಹಸಗಳನ್ನೂ ಸೇರಿಸಿ ಸುಂದರವಾದ ಕಥೆಯನ್ನು ಬರೆಯಲಿ. ಬರೆಯುವ ಮೊದಲು ತರಗತಿ ಮಟ್ಟದಲ್ಲಿ ಈ ಬಗ್ಗೆ ಚರ್ಚೆ ನಡೆಸಿ ಸಾಧ್ಯತೆಗಳನ್ನು ಗುರುತಿಸಬೇಕು. ಕಥಾರಚನೆಯ ಸಂದರ್ಭದಲ್ಲಿ ಮಗುವಿನ ಯೋಚನೆ ಅರಳಲು ಅಧ್ಯಾಪಕರು ಸೂಕ್ತ ಮಾರ್ಗದರ್ಶನವೀಯಬಹುದು. ಇಲ್ಲಿ ಸೃಜನಾತ್ಮಕ ವಿಷಯಕ್ಕೆ ಹೆಚ್ಚು ಪ್ರಾತಿನಿಧ್ಯ ಕೊಡಬೇಕು.

### ಸಮರ್ಥಿಸುವ

ಈ ಚಟುವಟಿಕೆಯಲ್ಲಿ ಮಗುವಿನ ವಿಶ್ಲೇಷಣೆಗೆ ಅವಕಾಶವೀಯಬೇಕು. ಮಗುವಿನ ಕಡೆಯಿಂದಲೇ ಸಮರ್ಥನೆ ಬರಲಿ.

### ನಿರೀಕ್ಷಿಸುವ ಸಮರ್ಥನೆ :

ವಿಂಗಡನೆ ಸರಿಯಾಗಿದೆ. 1ನೇ ಗುಂಪು–ಹೆಸರುಗಳನ್ನು ಸೂಚಿಸುವ ಪದಗಳಾಗಿವೆ. 2ನೇ ಗುಂಪು ಕ್ರಿಯೆ ಅಥವಾ ಕೆಲಸವನ್ನು ಸೂಚಿಸುವ ಪದಗಳಾಗಿವೆ–ಈ ರೀತಿ ಸಮರ್ಥನೆಯನ್ನು ಮಕ್ಕಳು ನೀಡುವಂತಾಗಬೇಕು. ಈ ಚಟುವಟಿಕೆಯ ಬಳಿಕ ಹೆಸರನ್ನು ಸೂಚಿಸುವ ಪದಗಳನ್ನು ನಾಮಪದವೆಂತಲೂ ಕರೆಯುತ್ತಾರೆ. ಎಂಬುದನ್ನು ಮಕ್ಕಳು ತಿಳಿಯುವರು.

### ಗುಂಪು ಮಾಡುವ

- ಕೊಡಲಾದ ಪದಗಳನ್ನು ಓದಲಿ.
- ಹೆಸರನ್ನು ಸೂಚಿಸುವ ಹಾಗೂ ಕ್ರಿಯೆಯನ್ನು ಸೂಚಿಸುವ ಪದಗಳು (ನಾಮಪದ, ಕ್ರಿಯಾಪದ,) ವಿಂಗಡಿಸಲಿ.

  ವೈಯುಕ್ತಿಕವಾಗಿ ಪ್ರಯತ್ನಿಸಿದ ನಂತರ ಗುಂಪುಗಳಲ್ಲಿ ಮೌಲ್ಯ ನಿರ್ಣಯಿಸಲಿ. ಚರ್ಚಿಸಿ ಸರಿಪಡಿಸಲಿ.

  ಬೇರೆ ನಾಮಪದ ಮತ್ತು ಕ್ರಿಯಾಪದಗಳನ್ನು ಪಟ್ಟಿ ಮಾಡಲಿ.

  ನಾಮಪದಗಳು : ಶಾಲೆ, ಬೆಂಚು, ದನ, ಮನೆ, ಬೇಪು, ಪುತ್ತೂರು, ತೆಂಗಿನಮರ

  ಕ್ರಿಯಾಪದಗಳು : ಬರೆಯು, ಓಡಿಸು, ತಿನ್ನು, ಕುಡಿಯು, ಮಲಗು, ಓದು.

### ಪದಬಂಧ ಪೂರ್ತಿಗೊಳಿಸುವ

ಪದಬಂಧ ಬಿಡಿಸುವ ರೀತಿಯನ್ನು ಮಕ್ಕಳಿಗೆ ತಿಳಿಸುವುದು. ಸೂಚನೆಗಳು ಬರೆಯಬೇಕಾದ ಪದದ ಬಗ್ಗೆ ರಸಭರಿತ ಸುಳಿವು ನೀಡುವುದಲ್ಲದೆ ಪದಗಳಲ್ಲಿ ಇರಬೇಕಾದ ಅಕ್ಷರಗಳ ಸಂಖ್ಯೆಯನ್ನು ಆವರಣದಲ್ಲಿ ಕೊಡಲಾಗಿದೆ. ಪದಗಳು ಸೇರುವಲ್ಲಿ ಎರಡು ಪದಗಳಲ್ಲಿ ಒಂದೇ ಅಕ್ಷರಗಳು ಬರುತ್ತವೆ ಎಂಬುದನ್ನು ಮಕ್ಕಳು ತಿಳಿಯುವುದರಿಂದ ಉತ್ತರ ಕಂಡು ಹಿಡಿಯಲು ಸಹಕಾರಿಯಾಗಿದೆ.

| **ಎಡದಿಂದ ಬಲಕ್ಕೆ** | **ಮೇಲಿನಿಂದ ಕೆಳಕ್ಕೆ** |
|---|---|
| 2. ನಾವಿಕ | 1. ಮಲ್ಲಿಗೆ |
| 4. ಲ್ಲಿಹ | 3. ವಿಶ್ವ |
| 7. ವನ | 5. ಕನಕ |
| 8. ಪಯಣ | 6. ಭಯ |

### ಈ ಪತ್ರವನ್ನು ಓದುವ

ಈ ಚಟುವಟಿಕೆಯ ಮೂಲಕ ಪತ್ರಗಳ ರೂಪವನ್ನು ಮಗು ತಿಳಿಯುವಂತಾಗಬೇಕು. ಪತ್ರದ ಬಳಿಕ ಕೊಡಲಾದ ಪ್ರಶ್ನೆಗೆ ಉತ್ತರಿಸುವುದರಿಂದ ಪತ್ರದ ರೂಪ ಸರಿಯಾಗಿ ತಿಳಿಯುವುದು.

### ಚರ್ಚಿಸುವ

ಈ ತರಗತಿ ಚರ್ಚೆಯ ಸಂದರ್ಭದಲ್ಲಿ ಹಿಂದಿನಕಾಲದ ಪತ್ರಗಳ ಸಂಗ್ರಹವನ್ನು ಪ್ರದರ್ಶಿಸಬೇಕು. ಮಕ್ಕಳು ಅದನ್ನು ಓದಿ ಅವುಗಳನ್ನು ಹೋಲಿಸಿ ಕಾಲ ಕಾಲದಲ್ಲುಂಟಾದ ಬದಲಾವಣೆಗಳನ್ನು ಗುರುತಿಸಿ ಪಟ್ಟಿಮಾಡಲಿ.

## 2. ಬಾನಿನಗಲ ಪಟ ಪಟ

ಗಾಳಿ ಪಟ ಹಾರಿಸುವುದು ಒಂದು ಮನೋರಂಜನೆ. ಇದು ಒಂದು ಸೃಜನಾತ್ಮಕ ಕಾರ್ಯವೂ ಉತ್ತಮ ಹವ್ಯಾಸವೂ ಆಗಿದೆ. ಇತ್ತೀಚೆಗೆ ಗಾಳಿಪಟ ಹಾರಿಸುವುದು ಜನಪ್ರಿಯವಾಗುತ್ತಿದೆ, ಪ್ರವಾಸಿ ತಾಣಗಳಲ್ಲಿ ಗಾಳಿಪಟ ಉತ್ಸವಗಳನ್ನು ನಡೆಸುತ್ತಾರೆ. ವೈವಿಧ್ಯಮಯ ವಿವರಣೆ ಪ್ರದಾನವಾದ ಈ ಪಾಠವು ವಿವರಣೆ, ಪದ್ಯ ರಚನೆ ಹಾಗೂ ಭಾಷಾ ಆಟಗಳ ಮೂಲಕ ಭಾಷಾಕಲಿಕೆಗೆ ಅನುವು ಮಾಡಿಕೊಡುತ್ತದೆ.

### ಚಟುವಟಿಕೆಗಳು

### ಉತ್ತರ ಬರೆಯುವ

ಬಾನಿನಗಲ ಪಟ ಪಟ ಪಾಠಭಾಗವನ್ನು ಓದಿ ಈ ಪ್ರಶ್ನೆಗಳಿಗೆ ಉತ್ತರಿಸಲಿ. ಬಾಯ್ದೆರೆಯಾಗಿ ತರಗತಿಯಲ್ಲಿ ಉತ್ತರವನ್ನು ಹೇಳಿ ಉತ್ತಮಪಡಿಸಿದ ಬಳಿಕ ಪ್ರಶ್ನೆಗಳಿಗೆ ಉತ್ತರ ಬರೆಯಲಿ.

**ಉತ್ತರಗಳು :**

1. ನ್ಯೂಝಿಲೇಂಡ್‌ನವರು ಹಾಡುಗಳನ್ನು ಹೇಳುತ್ತಾ ಧಾರ್ಮಿಕ ವಿಧಿ ವಿಧಾನಗಳೊಂದಿಗೆ ಗಾಳಿಪಟವನ್ನು ಹಾರಿಸುತ್ತಾರೆ.
2. (ಪುಟ133ರಲ್ಲಿ) ಸಾಮಾನ್ಯ ಗಾಳಿಪಟವು ವಜ್ರಾಕೃತಿಯ ರಚನೆಯಾಗಿದೆ. ......... ಬಾಲಂಗೋಚಿಯಾಗಿ ಸೇರಿಸುತ್ತಾರೆ.

## ಹಾಡುವ ನಲಿಯುವ

ಮಕ್ಕಳು ಗುಂಪಿನಲ್ಲಿ ಕುಳಿತು ಪದ್ಯವನ್ನು ಓದುತ್ತಾ ರಾಗ ಹಾಕಿ ಹಾಡಲಿ. ವಿಭಿನ್ನ ರಾಗಗಳಲ್ಲಿ ಹಾಡಲು ಪ್ರಯತ್ನಿಸಲಿ. ಮಕ್ಕಳು ಗುಂಪುಗಳಲ್ಲಿ ಹಾಡುವಿಕೆಯ ಮೌಲ್ಯನಿರ್ಣಯ ಮಾಡುವುದು. ಉತ್ತಮವಾದುದನ್ನು ಪ್ರಶಂಸಿಸಲಿ. ಉತ್ತಮವಾಗಲು ಕಾರಣವನ್ನು ಗುರುತಿಸಲಿ.

## ಪದಸಂಕೋಲೆ ರಚಿಸುವ

ಪುಸ್ತಕದಲ್ಲಿ ಕೊಡಲಾದ ಪದಗಳ ಸಂಕೋಲೆಯನ್ನು ಜೋಡಿಸಲಿ. ಇದರಿಂದ ಮಕ್ಕಳ ಪದ ಸಂಪತ್ತು ವೃದ್ದಿಯಾಗುವುದು. ಪದಸಂಕೋಲೆ ಬರೆಯಲಿ.

ವಿವಿಧ ರೀತಿಯ ಪದ ಸಂಕೋಲೆಗಳನ್ನು ರಚಿಸಬಹುದು.

1. ಎರಡಕ್ಷರದ ಪದಸಂಕೋಲೆ
2. ಮೂರಕ್ಷರದ ಪದಸಂಕೋಲೆ

ಹೀಗೆ ವೈವಿಧ್ಯಮಯವಾಗಿ ರಚಿಸುವ.

## ಪದಗಳನ್ನು ಕ್ರಮೀಕರಿಸಿ ವಾಕ್ಯ ರಚಿಸುವ

ಭಾಷಾ ಆಟವು ಭಾಷಾ ಕಲಿಕೆಯಲ್ಲಿ ಆಸಕ್ತಿ ಹುಟ್ಟಿಸುವುದು.

ಪದ ಸಂಪತ್ತು ವೃದ್ಧಿಯಾಗುವುದು, ಸೃಜನಾತ್ಮಕ ಬೆಳೆಯವುದು.

ಉತ್ತರ :

| | | | | |
|---|---|---|---|---|
| ಕ | ಪ್ಪು | ಕಂ | ಬ | (ಳಿ) |

| | | | | |
|---|---|---|---|---|
| ಎ | ತ್ತಿ | ನ | (ಗಾ) | ಡಿ |

| | | | | | |
|---|---|---|---|---|---|
| (ಬ) | ಸ | ವ | ನ | ಹು | ಳು |

| | | | | |
|---|---|---|---|---|
| ದ | ನ | (ದ) | ಬಾ | ಲ |

| | | | | |
|---|---|---|---|---|
| ಸ | (ಣ್ಣ) | ಮ | ಕ್ಕ | ಳು |

| | | | | |
|---|---|---|---|---|
| ಕಿ | ರು | ನಾ | (ಟ) | ಕ |

| | | | | | |
|---|---|---|---|---|---|
| (ಪ) | ಡು | ವ | ಲ | ಕಾ | ಯಿ |

| | | | | | | |
|---|---|---|---|---|---|---|
| ಬ | ಣ್ಣ | ದ | ಗಾ | ಳಿ | ಪ | ಟ |

**ಗಾಳಿಪಟ ತಯಾರಿಸುವ**

ಗಾಳಿಪಟ ತಯಾರಿಯಲ್ಲಿ ನಿಷ್ಣಾತರೊಬ್ಬರ ಸಹಾಯ ಪಡೆದು ತರಗತಿಯಲ್ಲಿ ಗಾಳಿಪಟ ತಯಾರಿ ಕಮ್ಮಟ ನಡೆಸುವುದು. ಸೂಕ್ತಪೂರ್ವ ಯೋಜನೆಯೊಂದಿಗೆ ಸರಿಯಾದ ಸೂಚನೆಗಳನ್ನೂ ನೀಡುತ್ತಾ ಮಕ್ಕಳು ಹಂತ ಹಂತವಾಗಿ ಗಾಳಿಪಟ ತಯಾರಿಸಲಿ ಬಳಿಕ ಹಾರಿಸಲಿ.

- ಗಾಳಿಪಟ ಹಾರಿಸುವ ಸಂಭ್ರಮದ ಚಿತ್ರ ಬಿಡಿಸಲಿ
- ತರಗತಿಯಲ್ಲಿ ಪ್ರದರ್ಶಿಸಲಿ.

**ಸಂಚಿಕೆ ತಯಾರಿಸುವ**

ಗಾಳಿಪಟ ಹಾರಿಸುವ ಚಿತ್ರ ಹಾಗೂ ರಚಿಸಿದ ಕವಿತೆಗಳನ್ನು ಉತ್ತಮಪಡಿಸಿ ತರಗತಿ ಸಂಚಿಕೆಯೊಂದನ್ನು ತಯಾರಿಸಿರಿ. IT ಯನ್ನು ಫಲಪ್ರದವಾಗಿ ಉಪಯೋಗಿಸಲು ಮರೆಯದಿರಿ.

# 3. ಜೋಗದ ಸಿರಿ

ಪ್ರವಾಸವು ಮನಸ್ಸಿಗೆ ಉಲ್ಲಾಸವನ್ನು ಅನುಭವಗಳನ್ನು ನೀಡುತ್ತದೆ. ಹೊಸತನ್ನು ಅರಸುವುದು ಮನುಷ್ಯನ ಸ್ವಭಾವ, ಹೊಸತನ್ನು ಅರಸುತ್ತಾ ನಡೆಸುವ ಪ್ರಯಾಣವಲ್ಲದೆ ಉಲ್ಲಾಸ ಯಾತ್ರೆಗಳೂ ಪ್ರವಾಸವೇ ಆಗಿದೆ. ನಾವು ಹೋದ ಪ್ರವಾಸಿ ತಾಣಗಳು ಯಾವುವು? ಅವುಗಳ ಕುರಿತು ಕಥೆ, ಪದ್ಯ, ಲೇಖನ ಇದೆಯೊ? ಎಂದು ಪ್ರಶ್ನಿಸಿ ಇದ್ದರೆ ಹೇಳಿಸಬಹುದು. ಬಳಿಕ ಜೋಗದಸಿರಿ ಪದ್ಯಕ್ಕೆ ಬರಬಹುದು.

**ಹಾಡುವ**

ಮಕ್ಕಳು ಗುಂಪುಗಳಾಗಲಿ ಬಳಿಕ ಪದ್ಯಕ್ಕೆ ರಾಗ ಹಾಕಿ ಹಾಡಲಿ ಯಾವ ಗುಂಪು ಚೆನ್ನಾಗಿ ಹಾಡಿದೆ? ಎಂದು ಮಕ್ಕಳೇ ನಿರ್ಧರಿಸಲಿ. ಸೂಚಕಗಳನ್ನು ನೆನಪಿಸುವಿರಲ್ಲವೇ? ಅಡಕ ಮುದ್ರಿಕೆಯನ್ನು ಕೇಳಿಸಬಹುದು. ಇತರ ಪ್ರವಾಸಿ ತಾಣಗಳ ಲೇಖನ, ಛಾಯಾಚಿತ್ರಗಳು ಪ್ರದರ್ಶಿಸಬಹುದು. ಓದುವ ಮೂಲೆಯಲ್ಲಿ ಪ್ರವಾಸಿ ವಿಶೇಷಾಂಕಗಳನ್ನು ಒದಗಿಸುವಿರಲ್ಲವೇ?

**ಉತ್ತರಿಸುವ**

ಆಶಯಗ್ರಹಣಕ್ಕಾಗಿ ಪ್ರಶ್ನೆಗಳನ್ನು ಕೊಡಲಾಗಿದೆ, ಗುಂಪುಗಳಾಗಿ ಪ್ರಶ್ನೆಗಳಿಗೆ ಉತ್ತರ ಕಂಡುಕೊಳ್ಳಲಿ. ಗುಂಪಿನಲ್ಲಿ ಬರೆದು ತರಗತಿಯಲ್ಲಿ ಮಂಡಿಸಿ ಅಧ್ಯಾಪಕರ ಸಹಾಯದಿಂದ ಉತ್ತಮಗೊಳಿಸಲಿ.

**ಪ್ರಾಸಪದ ಬರೆಯುವ**

ಪದ್ಯದಲ್ಲಿ ಬಂದಿರುವ ಪ್ರಾಸಪದಗಳನ್ನು ಮಕ್ಕಳು ಗುಂಪಿನಲ್ಲಿ ಕುಳಿತು ಗುರುತಿಸಿ ಬರೆಯಲಿ. ಇದೇ ರೀತಿ ಬೇರೆ ಪದ್ಯದಲ್ಲಿ ಬಂದಿರುವ ಪ್ರಾಸಪದಗಳನ್ನು ಗುರುತಿಸಲು ಅವಕಾಶ ಮಾಡಿಕೊಡುವಿರಲ್ಲವೇ?

**ಆಲ್ಬಂ ತಯಾರಿಸುವ**

ವಿವಿಧ ಪತ್ರಿಕೆಗಳಲ್ಲಿ ಬಂದಿರುವ ಅಥವಾ ಇತರೆಡೆಗಳಿಂದ ಮಕ್ಕಳು ಪ್ರವಾಸಿ ತಾಣಗಳ ಚಿತ್ರಗಳನ್ನು ಸಂಗ್ರಹಿಸಿ ಆಲ್ಬಂ ತಯಾರಿಸಲಿ. ಹೆಸರು, ಸ್ಥಳ ಸಂಚಯ ಟಿಪ್ಪಣಿ ಸೇರಿಸಿದರೆ ಒಳ್ಳೆಯದು.

**ಆಶಯ ಬರೆಯುವ**

ಜೋಗದಸಿರಿ ಪದ್ಯದ ಆಶಯವನ್ನು ಮಕ್ಕಳು ಬರೆಯುವ ಮೊದಲು ಗುಂಪಿನಲ್ಲಿ ಚರ್ಚಿಸಿ ಹೇಳಲಿ. ಬಳಿಕ ಬರೆಯಲಿ. ಅಧ್ಯಾಪಕರ ಸಹಾಯದಿಂದ ಉತ್ತಮಪಡಿಸುವುದು.

**ವಾಕ್ಯ ರಚಿಸುವ**

ಕೋಣೆಯಲ್ಲಿ ಕೊಟ್ಟಿರುವ ಪದಗಳನ್ನು ಬಳಸಿ ಮಕ್ಕಳು ಸಾಧ್ಯವಿದ್ದಷ್ಟು ವಾಕ್ಯ ರಚಿಸಲಿ. ಒಂದೇ ವಾಕ್ಯದಲ್ಲಿ ಎರಡೋ ಮೂರೋ ಪದಗಳನ್ನು ಸಾಧ್ಯವಾದರೆ ಬಳಸಬಹುದು.

ಉದಾ :

- ಮಕ್ಕಳು ಜೋಗಕ್ಕೆ ಪಯಣ ಬೆಳೆಸಿದರು.
- ನಕ್ಕು ನಕ್ಕು ಮಕ್ಕಳ ಕಣ್ಣಲ್ಲಿ ನೀರು ಬಂತು.
- ಚಾಮುಂಡಿ ಬೆಟ್ಟವನ್ನು ನೋಡಿ ಜನರು ಹಿಗ್ಗಿ ನಲಿದರು.
- ಗೆಳೆಯರು ಬಸ್ಸಿನಲ್ಲಿ ಬೆಟ್ಟದ ಸೊಬಗನ್ನು ಸವಿಯುತ್ತಾ ಪಯಣಿಸಿದರು.

**ಪದಸೂರ್ಯ**




ನದಿಗೆ ಸಂಬಂಧಿಸಿದ ಪದಗಳನ್ನು ಸೇರಿಸಿ ಪದಸೂರ್ಯ ರಚಿಸಿರಿ.

**ವರ್ಣನೆ ಬರೆಯುವ**

ವರ್ಣನೆ ಬರೆಯುವ ಚಟುವಟಿಕೆಗಳಲ್ಲಿ ಆಗಾಗಲೇ ಮಕ್ಕಳು ಭಾಗಿಯಾಗಿದ್ದಾರೆ. ವರ್ಣನೆಗೆ ಅಗತ್ಯವಾದ ಅಂಶಗಳು ಯಾವುವು? ಎಂದು ಚರ್ಚಿಸಿ ಬಳಿಕ ಬರೆಯಲು ಸೂಚಿಸುವುದು.

ಅಧ್ಯಾಪಕರ ಮಾದರಿಯನ್ನು ಪ್ರದರ್ಶಿಸಿ ರಚನೆಯನ್ನು ಉತ್ತಮ ಪಡಿಸಲು ಹೇಳುವಿರಲ್ಲವೇ? ತರಗತಿಯಲ್ಲಿ ಪ್ರದರ್ಶಿಸಿ ಪರಸ್ಪರ ಮೌಲ್ಯನಿರ್ಣಯ ನಡೆಸಲು ಸೌಕರ್ಯ ಒದಗಿಸುವುದು.

**ಪದ್ಯ ಮುಂದುವರಿಸುವ, ಶೀರ್ಷಿಕೆ ನೀಡುವ**

ಪದ್ಯದ ಸಾಲು ಮುಂದುವರಿಸುವ ಚಟುವಟಿಕೆಗಳನ್ನು ಈಗಾಗಲೇ ಮಕ್ಕಳು ಅಭ್ಯಾಸ ಮಾಡಿದ್ದಾರೆ. ಅದನ್ನು ನೆನಪಿಸಿರಿ. ಇಲ್ಲಿ ಕೊಡಲಾದ ಮೂರು ಮೂರು ಸಾಲಿನ ಪದ್ಯವನ್ನು ಮುಂದುವರಿಸಿ ಬರೆದು ತರಗತಿಯಲ್ಲಿ ಮಂಡಿಸಲಿ, ಪದಪ್ರಯೋಗ, ಪ್ರಾಸ ಇತ್ಯಾದಿಯಾಗಿ ಪದ್ಯ ರಚನಾ ಕ್ರಮವನ್ನು ಗಮನಿಸುವಿರಲ್ಲವೇ? ಮಕ್ಕಳು ರಚಿಸಿದ ಪದ್ಯಗಳನ್ನು ಉತ್ತಮಪಡಿಸಿ ಸಂಚಿಕೆ ತಯಾರಿಸಲಿ.

## ಮೌಲ್ಯಮಾಪನ ಚಟುವಟಿಕೆಗಳು

# I

1. ಕೆಳಗಿನ ಪದಗಳಲ್ಲಿ ಸರಿಯಾದ ಪದ ಯಾವುದು?
   (ಪಕ್ಸಿ, ಪಕ್ಯಿ, ಪಕ್ಷಿ) (1)
2. ಸಿಂದಬಾದನು ಮುತ್ತು ರತ್ನಗಳ ಕಣಿವೆಯಿಂದ ತಪ್ಪಿಸಿಕೊಂಡದ್ದು ಹೇಗೆ? (2)
   ಸೋತು ಹೋಯಿತಲ್ಲ ತಂಡ
3. ನಿಮ್ಮ ಶಾಲೆಯ ವಾರ್ಷಿಕೋತ್ಸವದ ಅನುಭವಗಳನ್ನು ವಿವರಿಸಿ ಗೆಳೆಯನಿಗೆ ಪತ್ರ ಬರೆಯಿರಿ. (2)
   ಬಿಟ್ಟ ಸ್ಥಳವನ್ನು ಸರಿಯಾದ ಪದದಿಂದ ತುಂಬಿಸಿರಿ

# II

1. ಗಾಳಿ ಪಟ ಮೇಲೆರುವಂತೆ ಮಾಡಲು
   ಕಟ್ಟುತ್ತಾರೆ
   (ಬಾಲಂಗೋಚಿ, ರೆಕ್ಕೆ, ನೂಲು) (1)
2. ಪದ ಸೂರ್ಯದ ಸಹಾಯದಿಂದ ಬಯಲಿನ ವರ್ಣನೆ ಬರೆಯಿರಿ. (4)
   ಪೈರುಗಳು
   ದನಕರುಗಳು
   ಬಯಲು
   ಗದ್ದೆ  ಮರ ತಂಗಾಳಿ ಪಕ್ಷಿಗಳು

# 8. ಜ್ಞಾನ – ವಿಜ್ಞಾನ

ಜ್ಞಾನ – ವಿಜ್ಞಾನಗಳು ಮನುಷ್ಯನ ಎರಡು ಕಣ್ಣುಗಳಂತೆ ಒಂದು ಪ್ರಗತಿಯ ಹಾದಿ ತೋರಿದರೆ ಇನ್ನೊಂದು ಪ್ರಗತಿಯ ಪಥದಲ್ಲಿ ಮುನ್ನಡೆಸುವುದು. ಕನಸು ಕಾಣುವುದು ಕನಸನ್ನು ನನಸಾಗಿಸುವುದು ಎರಡೂ ಜೀವನದ ಅಗತ್ಯಗಳೇ ಆಗಿವೆ. ಆದರೆ ಮೌಢ್ಯ ಮಾತ್ರ ಬೇಡ. ಮೂಢನಂಬಿಕೆ ನಮ್ಮನ್ನು ಮುಂದೆ ಸಾಗದಂತೆ ತಡೆಯುವುದು, ಅಜ್ಞಾನದ ಕೂಪಕ್ಕೆ ತಳ್ಳುವುದು. ಜ್ಞಾನದ ಬೆಳಕಲ್ಲಿ ಯಾವುದು ಸರಿ ಯಾವುದು ತಪ್ಪು ಎಂಬ ವಿವೇಚನೆಯಿಂದ ನಡೆದರೆ ಮಾತ್ರ ಗುರಿ ತಲುಪಲು ಸಾಧ್ಯ. ಈ ದೃಷ್ಟಿಕೋನದಿಂದ ಮೂಢಭಕ್ತಿ, ಮಂಗಳ ಗ್ರಹದಲ್ಲಿ ಪುಟ್ಟಿ ಮತ್ತು ವಾಲ್ಟ್ ಡಿಸ್ನಿ ಎಂಬ ಮೂರು ಪಾಠಗಳನ್ನು ಕೊಡಲಾಗಿದೆ. ಭಾಷಾ ಕಲಿಕೆಯ ನೈಪುಣ್ಯಗಳನ್ನು ಸಾಧಿಸುವುದರ ಜತೆಗೆ ಆಶಯ ಗ್ರಹಣಕ್ಕೆ ನೆರವಾಗುವುದು ಅಗತ್ಯ.

## ಕಲಿಕಾ ಸಾಧನೆಗಳು

- ಹೊಸ ಪ್ರಯೋಗಗಳು, ಪದಗಳು, ಗಾದೆಗಳು, ನುಡಿಗಟ್ಟುಗಳು ಮೊದಲಾದುವುಗಳನ್ನು ಉಪಯೋಗಿಸಿಕೊಂಡು ಸಂದರ್ಭಾನುಸಾರ ಮಾತನಾಡುವುದು.
- ಕಥೆ, ಕವಿತೆ, ವಿವರಣೆ, ವರ್ಣನೆ, ಮೊದಲಾದವುಗಳನ್ನು ಆಲಿಸಿ ಮತ್ತು ಓದಿ ತನ್ನದೇ ಆದ ರೀತಿಯಲ್ಲಿ ಹೇಳುವುದು ಮತ್ತು ಬರೆಯುವುದು.
- ಕವಿತೆಯನ್ನು ಅರ್ಥೈಸಿಕೊಂಡು ರಾಗ, ತಾಳ, ಭಾವಗಳನ್ನು ಪರಿಗಣಿಸಿ ಹಾಡುವುದು.
- ಕವಿತೆಯ ಆಶಯವನ್ನು ಅರಿತು ಆಸ್ವಾದಿಸುವುದು ಮತ್ತು ಆಸ್ವಾದನಾ ಟಿಪ್ಪಣಿಯನ್ನು ಬರೆಯುವುದು.
- ವಿಶೇಷಣಗಳು, ವಿಶೇಷ ಪ್ರಯೋಗಗಳು ಮೊದಲಾದುವುಗಳನ್ನು ಸೂಕ್ತವಾಗಿ ಸೇರಿಸಿ ವಾಕ್ಯವನ್ನು ಬರೆಯುವುದು.
- ಪತ್ರಿಕಾ ವರದಿ ಮತ್ತು ವಾರ್ತೆಗಳನ್ನು ವಿಶ್ಲೇಷಿಸಿ(ಯಾರು, ಯಾರಿಗೆ, ಎಲ್ಲಿ, ಏನು, ಹೇಗೆ, ಯಾಕೆ, ICT ಸಾಧ್ಯತೆ) ಪತ್ರ, ಭಿತ್ತಿಪತ್ರ, ಕರಪತ್ರ ಮೊದಲಾದವುಗಳನ್ನು ರಚಿಸುವುದು.
- ಕಥೆ, ಕವಿತೆ, ವಿವರಣೆ, ಭಿತ್ತಿಪತ್ರಿಕೆ ಮೊದಲಾದ ಸೃಜನಾತ್ಮಕ ರಚನೆಗಳಲ್ಲಿ ತೊಡಗುವುದು ಮತ್ತು ಅವುಗಳನ್ನು ಸಂಗ್ರಹಿಸಿ ಸಂಚಿಕೆ, ಹಸ್ತಪತ್ರಿಕೆ, ಭಿತ್ತಿಪತ್ರಿಕೆಗಳನ್ನು ತಯಾರಿಸುವುದು.
- ಕಥೆ ಮತ್ತು ಕವಿತೆಗಳ ಸಾಲುಗಳ ಅರ್ಥವನ್ನು ತಿಳಿದುಕೊಂಡು ಅಲ್ಲಿನ ಸೌಂದರ್ಯವನ್ನು ಆಸ್ವಾದಿಸಿ ಆಶಯವನ್ನು ಹೇಳುವುದು ಮತ್ತು ಬರೆಯುವುದು.
- ಓದಿ ಆಸ್ವಾದಿಸಿದ ಕಥೆ, ಕವಿತೆ ಮೊದಲಾದುವುಗಳನ್ನು ಪಾತ್ರಾಭಿನಯ, ಮೂಕಾಭಿನಯ ಸಂಭಾಷಣೆಗಳ ಮೂಲಕ ಮಂಡಿಸುವುದು.
- ಕೃತಿ ರಚನೆಯಲ್ಲಿ ಇತರರು ಬಳಸಿದ ಆಶಯ, ಪ್ರಯೋಗ, ನುಡಿಗಟ್ಟು ಮೊದಲಾದುವುಗಳನ್ನು ಹೋಲಿಸಿ ತನ್ನ ರಚನೆಗಳನ್ನು ಉತ್ತಮಪಡಿಸುವುದು.
- ಬರವಣಿಗೆಯಲ್ಲಿ ಬಳಕೆಯಾಗುವ ಲೇಖನ ಚಿಹ್ನೆಗಳನ್ನು ಗುರುತಿಸಿಕೊಂಡು ಅವುಗಳನ್ನು ತನ್ನ ರಚನೆಯಲ್ಲಿ ಬಳಸುವುದು.
- ಪಾಠಭಾಗದಲ್ಲಿ ಬಳಕೆಯಾದ ಪದಗಳನ್ನು ವಿಂಗಡಿಸಿ ಬರೆಯುವುದು ಮತ್ತು ಸೇರಿಸಿ ಬರೆಯುವುದು.
- ಓದಿದ, ಆಲಿಸಿದ ವ್ಯವಹಾರದ ರೂಪದ ಆಶಯವನ್ನು ತಿಳಿದುಕೊಂಡು ಇನ್ನೊಂದು ವ್ಯವಹಾರ ರೂಪವಾಗಿ ಬದಲಾಯಿಸುವುದು.
- ಮಾಹಿತಿ ತಂತ್ರಜ್ಞಾನವನ್ನು (ICT) ಉಪಯೋಗಿಸಿ, ಕೇಳಿಯೂ ನೋಡಿಯೂ ಆಶಯವನ್ನು ತಿಳಿದುಕೊಂಡು ಸ್ವಂತ ರಚನೆ ಮಾಡುವುದು ಮತ್ತು ಮಂಡಿಸುವುದು.

# ಯೂನಿಟ್ ಗ್ರಿಡ್

**ಯೂನಿಟ್ 8 : ಜ್ಞಾನ – ವಿಜ್ಞಾನ**

ಸಮಯ : 6+6+5 ಪೀರಿಯಡ್‌ಗಳು

| ಪಾಠದ ಹೆಸರು | ಆಶಯ/ ಉದ್ದೇಶಗಳು | ಪ್ರಕ್ರಿಯೆ | ಪೂರಕ ಸಾಮಗ್ರಿಗಳು | ಮೌಲ್ಯನಿರ್ಣಯ |
|---|---|---|---|---|
| 1. ಮೂಢ ಭಕ್ತಿ | • ಮೂಢ ನಂಬಿಕೆಗಳು ನಮ್ಮನ್ನು ತಪ್ಪು ದಾರಿಗೆಳೆಯುತ್ತದೆ.<br>• ಪ್ರತಿಯೊಂದು ವಿಚಾರಗಳನ್ನು ವೈಜ್ಞಾನಿಕ ದೃಷ್ಟಿಕೋನದಿಂದ ನೋಡಬೇಕು.<br>• ಯಾವುದೇ ಕೆಲಸವನ್ನಾದರೂ ಔಚಿತ್ಯಪೂರ್ಣವಾಗಿ ಮಾಡಬೇಕು. | • ಚರ್ಚಿಸುವುದು<br>• ಶೀರ್ಷಿಕೆ ಬರೆಯುವುದು<br>• ಸಂಭಾಷಣೆ ಬರೆಯುವುದು | • ದಾರಿದೀಪ<br>• ಮಕ್ಕಳ ಕಥೆಗಳು | • ಶೀರ್ಷಿಕೆ<br>• ಸಂಭಾಷಣೆ |
| 2. ಮಂಗಳ ಗ್ರಹದಲ್ಲಿ ಪುಟ್ಟಿ | • ನಾವು ಕನಸು ಕಾಣಬೇಕು. ಕನಸು ನನಸಾಗಲು ಸತತ ಪ್ರಯತ್ನ ಅಗತ್ಯ.<br>• ವೈಜ್ಞಾನಿಕ ಸಾಧನೆಗಳು ದೇಶವನ್ನು ಪ್ರಗತಿಯತ್ತ ಕೊಂಡೊಯ್ಯುತ್ತವೆ.<br>• ಪರಿಸರ ನಾಶವು ನಮ್ಮ ನಾಶಕ್ಕೆ ಕಾರಣವಾಗಿದೆ. | • ಘೋಷಣ ವಾಕ್ಯ ಬರೆಯುವುದು<br>• ಪದ್ಯಕ್ಕೆ ಸಾಲು ಸೇರಿಸುವುದು<br>• ಪದ್ಯದ ಸಾರಾಂಶ ಬರೆಯುವುದು<br>• ಟಿಪ್ಪಣಿ ಬರೆಯುವುದು<br>• ಒಗಟು ಬಿಡಿಸುವುದು | • ದಾರಿದೀಪ<br>• ವೈಜ್ಞಾನಿಕ ಲೇಖನಗಳು<br>• ಒಗಟುಗಳು | • ಘೋಷಣ ವಾಕ್ಯ<br>• ಪದ್ಯ<br>• ಸಾರಾಂಶ<br>• ಟಿಪ್ಪಣಿ |
| 3. ವಾಲ್ಟ್ ಡಿಸ್ನಿ | • ವ್ಯಂಗ್ಯ ಚಿತ್ರಗಳು ಮಕ್ಕಳ ಮನಸ್ಸನ್ನು ಮುದಗೊಳಿಸುತ್ತವೆ.<br>• ವ್ಯಂಗ್ಯಚಿತ್ರ ಸಿನೆಮಾಗಳು ವೈಜ್ಞಾನಿಕ ಆವಿಷ್ಕಾರದ ಪ್ರತಿಫಲವಾಗಿದೆ.<br>• ಪ್ರಾಣಿಗಳ ವ್ಯಂಗಚಿತ್ರಗಳನ್ನು ಬಳಸುವುದರಿಂದ ಸಿನೆಮಾಗಳ ಆಕರ್ಷಣೆ ಹೆಚ್ಚಾಗುತ್ತದೆ. | • ಕಥೆ ಹೇಳುವುದು<br>• ಭಿತ್ತಿಪತ್ರ ತಯಾರಿಸುವುದು<br>• ವ್ಯಂಗ್ಯ ಚಿತ್ರ ರಚಿಸುವುದು<br>• ದಾರಿದೀಪ<br>• ಐ.ಸಿ.ಟಿ. | • ದಾರಿ ದೀಪ<br>• ICT | • ಕಥೆ<br>• ಭಿತ್ತಿಪತ್ರ<br>• ವ್ಯಂಗ್ಯಚಿತ್ರ |

# 1. ಮೂಢ ಭಕ್ತಿ

## ಪಾಠದೆಡೆಗೆ

ಸರಿ ತಪ್ಪುಗಳ ವಿವೇಚನೆಯಿಲ್ಲದ ಅಂಧಾನುಕರಣೆಯಿಂದ ಯಾವುದೇ ಪ್ರಯೋಜನವಿಲ್ಲ ಇನ್ನೊಬ್ಬರ ಮಾತನ್ನು ನಾವು ಸರಿಯಾಗಿ ತಿಳಿದುಕೊಳ್ಳದಿದ್ದರೆ ಆಡಿದ್ದೊಂದು, ಮಾಡಿದ್ದೊಂದು ಎಂಬಂತೆ ಆಗುವುದು.

ಗುರು ಶಿಷ್ಯ ಮೂಢ ಭಕ್ತಿ ಕಥೆಯನ್ನು ಈ ನಿಟ್ಟಿನಲ್ಲಿ ನೀಡಲಾಗಿದೆ ಓದಿ ತಿಳಿಯೋಣ ಎನ್ನುತ್ತಾ ಪಾಠಭಾಗವನ್ನು ಪ್ರವೇಶಿಸಬಹುದು ಅಥವಾ ಇತರ ಮೂಢನಂಬಿಕೆಗೆ ಸಂಬಂಧಿಸಿದ ಕತೆಗಳನ್ನು ಹೇಳುವುದರ ಮೂಲಕವೂ ಆಗಬಹುದು.

## ಚಟುವಟಿಕೆಗಳು

ಅಧ್ಯಾಪಕರು 'ಓರ್ವ ಗುರುಗಳ.... ಹನ್ನೆರಡನೇ ವರ್ಷದಲ್ಲಿ ಗುರುಗಳು ಪ್ರತ್ಯಕ್ಷರಾದರು' ಎಂಬಲ್ಲಿಯವರೆಗೆ ಗದ್ಯವನ್ನು ಓದುವುದು. ಬಳಿಕ ವಿದ್ಯಾರ್ಥಿಗಳಲ್ಲಿ, 'ಮುಂದೇನಾಗಿರಬಹುದು?' ಎಂಬ ಪ್ರಶ್ನೆಯನ್ನು ಕೇಳಿ ಅವರಿಂದ ಪ್ರತಿಕ್ರಿಯೆಗಳನ್ನು ತಿಳಿದು, ಮುಂದಿನ ಭಾಗವನ್ನು ಓದಲು ತಿಳಿಸುವುದು ಹೀಗೆ ಪಾಠಭಾಗವನ್ನು ಓದಿ ಆಶಯಗ್ರಹಣಕ್ಕೆ ನೆರವಾಗಬಹುದು.

## ಉತ್ತರ ಬರೆಯುವ

ಆಶಯಗ್ರಹಣಕ್ಕಿರುವ ಪ್ರಶ್ನೆಗಳನ್ನು ಓದಿ ವೈಯುಕ್ತಿಕವಾಗಿ ಉತ್ತರವನ್ನು ಕಂಡು ಹಿಡಿದು ಬರೆಯಲು ತಿಳಿಸುವುದು. ಕೆಲವರಿಂದ ಓದಿಸುವುದು. ಉಳಿದ ವಿದ್ಯಾರ್ಥಿಗಳು ತಮ್ಮ ಉತ್ತರಕ್ಕೆ ಹೋಲಿಸಿ ಚರ್ಚಿಸಿ ಸರಿಯಾಗಿ ಬರೆಯಲಿ.

## ಚರ್ಚಿಸುವ

ಗದ್ಯದಿಂದ ಆಯ್ದು ಕೊಟ್ಟ ಮಾತಿನ ಹಿನ್ನೆಲೆಯನ್ನು ತಿಳಿಯುವುದಕ್ಕೋಸ್ಕರ ಪಾಠಬಾಗವನ್ನು ಮತ್ತೊಮ್ಮೆ ಮೌನವಾಗಿ ಓದಲು ತಿಳಿಸುವುದು. ಬಳಿಕ ಗುರುಗಳ ಮಾತಿನ ಒಳಾರ್ಥವನ್ನು ತಿಳಿದುಕೊಂಡು, ವಿವರಿಸಲಿ.

## ಮಾದರಿಯಂತೆ ಬರೆಯುವ

ಏಕವಚನ ಪದಗಳನ್ನು ಬಹುವಚನ ಪದಗಳಾಗಿ ಬದಲಾಯಿಸುವಾಗ 'ಗಳು' ಮತ್ತು 'ರು' ಎಂಬವುಗಳನ್ನು ಯಾವ ಪದಗಳಿಗೆ ಸೇರಿಸಬೇಕು ಎಂಬುದನ್ನು ತಿಳಿಯುವುದು. ಈ ಚಟುವಟಿಕೆಯ ಉದ್ದೇಶವಾಗಿದೆ. ಮಕ್ಕಳು ಈ ಚಟುವಟಿಕೆಯನ್ನು ವೈಯುಕ್ತಿಕವಾಗಿ ಬರೆಯಲಿ.

| | |
|---|---|
| ತಿಂಗಳು–ತಿಂಗಳುಗಳು | ಹುಡುಗ–ಹುಡುಗರು |
| ದಿನ–ದಿನಗಳು | ತಿರುಕ–ತಿರುಕರು |
| ಮರ–ಮರಗಳು | ಶಿಕ್ಷಕ–ಶಿಕ್ಷಕರು |
| ಮೃಗ–ಮೃಗಗಳು | ವರ್ತಕ–ವರ್ತಕರು |
| ಗುರು–ಗುರುಗಳು | ಬೆಸ್ತ–ಬೆಸ್ತರು |

ಇದೇ ರೀತಿಯಲ್ಲಿರುವ ಇತರ ಪದಗಳನ್ನು ಸಂಗ್ರಹಿಸಿ ಬರೆಯಲು ವಿದ್ಯಾರ್ಥಿಗಳಿಗೆ ತಿಳಿಸಬಹುದು.

| | | | | | |
|---|---|---|---|---|---|
| ಮನೆ | – | ............ | ಜನ | – | ............ |
| ಬಸ್ಸು | – | ............ | ಮನುಷ್ಯ | – | ............ |
| ಸಿಂಹ | – | ............ | ನೆಂಟ | – | ............ |
| ಕಂಬ | – | ............ | ವಕೀಲ | – | ............ |
| ಚೀಲ | – | ............ | ನೌಕರ | – | ............ |
| ಹಣ್ಣು | – | ............ | ಕೆಲಸಗಾರ | – | ............ |
| ಚಿತ್ರ | – | ............ | ಕೃಷಿಕ | – | ............ |

### ವಿಂಗಡಿಸಿ ಬರೆಯುವ

ಕೊಟ್ಟಿರುವ ಪದಗಳನ್ನು ಮಾದರಿಯಂತೆ ಎರಡು ಪದಗಳಾಗಿ ವಿಂಗಡಿಸಿ ಬರೆಯಲು ಹೇಳುವುದು. ವಿದ್ಯಾರ್ಥಿಗಳು ಈ ಚಟುವಟಿಕೆಯನ್ನು ವೈಯಕ್ತಿಕವಾಗಿ ಮಾಡಲಿ.

ಪ್ರಾಪ್ತವಾಯಿತು – ಪ್ರಾಪ್ತ + ಆಯಿತು

ಕಡಲೆಯಾಯಿತು – ಕಡಲೆ + ಆಯಿತು

ಪೂಜಿಸುತ್ತಿದ್ದೇನೆ – ಪೂಜಿಸುತ್ತಾ + ಇದ್ದೇನೆ

ಪುಡಿಯಾಗಿತ್ತು – ಪುಡಿ + ಆಗಿತ್ತು

ಧೂಳಾಯಿತು – ಧೂಳು + ಆಯಿತು

ದಿನಗಳುರುಳಿದವು – ದಿನಗಳು + ಉರುಳಿದವು

- ಇದೇ ರೀತಿ, ಪಾಠಭಾಗದಲ್ಲಿರುವ ಇತರ ಪದಗಳನ್ನು ಆರಿಸಿ ಬರೆಯಲು ತಿಳಿಸಬಹುದು.

ಶಿಷ್ಯರಿದ್ದರು – ಶಿಷ್ಯರು + ಇದ್ದರು

ವರ್ಷಗಳಾಗಬಹುದು – ವರ್ಷಗಳು + ಆಗಬಹುದು

ಚೀಲಗಳಾದವು – ಚೀಲಗಳು + ಆದವು

ಅಕ್ಷಯವಾಗುತ್ತಿತ್ತು – ಅಕ್ಷಯ + ಆಗುತ್ತಿತ್ತು

ವಿಂಗಡಿಸಿ ಬರೆದ ಪದಗಳನ್ನು ಕೆಲವರಿಂದ ಓದಿಸುವುದು, ತಪ್ಪಾಗಿದ್ದರೆ ಸರಿಪಡಿಸಿ ಬರೆಯಲು ಸಹಾಯ ಮಾಡಬೇಕು.

### ಸರಿ – ತಪ್ಪು ಬರೆಯುವ

ಇದು ಪಾಠಭಾಗದ ಆಶಯವನ್ನು ದೃಢಗೊಳಿಸಲಿರುವ ಚಟುವಟಿಕೆಯಾಗಿದೆ. ಕೊಟ್ಟಿರುವ ವಾಕ್ಯಗಳನ್ನು ವಿದ್ಯಾರ್ಥಿಗಳು ವೈಯುಕ್ತಿಕವಾಗಿ ಓದಲಿ ಪಾಠಭಾಗದಲ್ಲಿ ನೀಡಿರುವ ವಿಷಯಕ್ಕೆ ಹೋಲಿಸಿ ಸರಿಯಾದ/ತಪ್ಪಾದ ವಾಕ್ಯಗಳನ್ನು ಸರಿಪಡಿಸಿ ಬರೆಯಲಿ.

ತಮ್ಮ ನೋಟುಪುಸ್ತಕಗಳನ್ನು ಕೈ ಬದಲಿಸಿ ಪರಸ್ಪರ ಮೌಲ್ಯಮಾಪನ ಮಾಡಲಿ. ಅಧ್ಯಾಪಕರು ಅಗತ್ಯ ಸಹಾಯ ಮಾಡಬೇಕು.

**ವಾಕ್ಯ ರಚಿಸುವ**

ಈಗಾಗಲೇ ತಿಳಿದಿರುವ ಪದಗಳನ್ನು ಹೊಸತೊಂದು ಸಂದರ್ಭದಲ್ಲಿ ಉಪಯೋಗಿಸಲು ವಿದ್ಯಾರ್ಥಿಗಳನ್ನು ಸಮರ್ಥರನ್ನಾಗಿಸುವುದು ಈ ಚಟುವಟಿಕೆಯ ಉದ್ದೇಶವಾಗಿದೆ. ಕೊಟ್ಟಿರುವ ವಾಕ್ಯಗಳಲ್ಲಿ ಅಡಿಗೆರೆ ಹಾಕಿದ ಪದಗಳನ್ನು ಉಪಯೋಗಿಸಿ ಬೇರೊಂದು ಸ್ವಂತ ವಾಕ್ಯವನ್ನು ರಚಿಸಲು ತಿಳಿಸುವುದು ವಿದ್ಯಾರ್ಥಿಗಳು ವೈಯಕ್ತಿಕವಾಗಿ ಬರೆಯಲಿ.

**ಬರೆಯುವ**

ಕೊಟ್ಟಿರುವ ಮಾತುಗಳನ್ನು ಯಾರು ಯಾರಿಗೆ ಹೇಳಿದರು ಎಂಬುದನ್ನು ಗದ್ಯದ ಆಧಾರದಲ್ಲಿ ಬರೆಯಲು ತಿಳಿಸುವುದು ಆಗತ್ಯವಿದ್ದಲ್ಲಿ ಪಾಠವನ್ನು ಓದಲು ಸಮಯಾವಾಕಾಶವನ್ನು ನೀಡಬೇಕು.

1. ಹನ್ನೆರಡು ವರ್ಷಗಳ ನಂತರ ಮರಳಿದ ಗುರುಗಳಲ್ಲಿ, ತಾನು ಬೆಳೆಸಿದ ಬೆಳೆಯನ್ನು ತೋರಿಸುತ್ತಾ, ಮೊದಲನೇ ಶಿಷ್ಯನು, ಈ ಮಾತನ್ನು ಹೇಳಿದನು.
2. ಗುರುಗಳ ಎರಡನೇ ಶಿಷ್ಯನು, ತಾನು ಭದ್ರವಾಗಿರಿಸಿದ್ದ ಕಡಲೆಯ ಡಬ್ಬವನ್ನು ತೋರಿಸುತ್ತಾ ಈ ಮಾತನ್ನು ಹೇಳಿದನು.
3. ಮೊದಲನೇ ಶಿಷ್ಯನು ಗುರುಗಳಿಗೆ ತಾನು ಮಾಡಿದ ಕಾರ್ಯದ ಬಗ್ಗೆ ತಿಳಿಸುತ್ತಾ, ಈ ಮಾತನ್ನು ಹೇಳಿದನು.

**ಲೇಖನ ಚಿಹ್ನೆ ಸೇರಿಸಿ ಬರೆಯುವ**

ಅರ್ಥಪೂರ್ಣವಾದ ಓದುವಿಕೆಯಲ್ಲಿ ಲೇಖನ ಚಿಹ್ನೆಗಳು ಪ್ರಧಾನ ಪಾತ್ರ ವಹಿಸುತ್ತವೆ. ಯಾವ ಚಿಹ್ನೆಗಳನ್ನು ಎಲ್ಲಿ ಬಳಸಬೇಕು ಎಂಬುದನ್ನು ವಿಧ್ಯಾರ್ಥಿಗಳು ಚೆನ್ನಾಗಿ ತಿಳಿದುಕೊಂಡಿರಬೇಕು. ಈ ನಿಟ್ಟಿನಲ್ಲಿ ಈ ಚಟುವಟಿಕೆಯನ್ನು ನೀಡಲಾಗಿದೆ.

ಕೊಟ್ಟಿರುವ ಗದ್ಯದ ಸೂಕ್ತ ಸ್ಥಳಗಳಲ್ಲಿ ಯೋಗ್ಯ ಲೇಖನ ಚಿಹ್ನೆಗಳನ್ನು ಬಳಸಿಕೊಂಡು ಬರೆಯಲು ತಿಳಿಸುವುದು.

ನಾಳೆ ನನ್ನ ಹುಟ್ಟು ಹಬ್ಬ. ಬರಲೇಬೇಕು. ಊಟಕ್ಕೆ ಪಾಯಸ, ಹೋಳಿಗೆ ಎಲ್ಲ ಇರುತ್ತದೆ. ಊಟದ ಹೆಸರು ಹೇಳಿದ್ದೇ ತಡ ರವಿಗೆ ಬಾಯಲ್ಲಿ ನೀರೂರಿತು."ಗೆಳೆಯ, ನನಗೆ ಬರಬೇಕೆಂಬ ಆಸೆ ಇದೆ. ಆದರೆ ಏನು ಮಾಡೋಣ? ನನ್ನೊಂದಿಗೆ ತಂಗಿಯೂ ಬರಬಹುದೇ? " ಎಂದು ಕೇಳಿದನು.

ಅಧ್ಯಾಪಕರ ಆವೃತ್ತಿ (Teacher Version) ಯನ್ನು ಪ್ರದರ್ಶಿಸುವುದು. ವಿದ್ಯಾರ್ಥಿಗಳು ಇದರ ಆಧಾರದಲ್ಲಿ ಸ್ವತಃ ಸರಿಪಡಿಸಿ ಬರೆಯಲಿ.

**ಶೀರ್ಷಿಕೆ ಬರೆಯುವ**

'ಮೂಢಭಕ್ತಿ' ಪಾಠಭಾಗವನ್ನು ವಿದ್ಯಾರ್ಥಿಗಳು ಮೌನವಾಗಿ ಓದಲಿ. ಬಳಿಕ ಈ ಕಥೆಗೆ ಸೂಕ್ತವಾದ ಇತರ ಎರಡು ಶೀರ್ಷಿಕೆಗಳನ್ನು ಕೊಡಲು ತಿಳಿಸುವುದು. ಆ ಶೀರ್ಷಿಕೆಯನ್ನು ನೀಡಲಿರುವ ಕಾರಣವನ್ನು ಬರೆಯಲು ತಿಳಿಸುವುದು. ಬಳಿಕ ಪ್ರತಿಯೊಬ್ಬರಿಂದಲೂ ಮಂಡಿಸಲು ತಿಳಿಸುವುದು.

**ಸಂಭಾಷಣೆ ಬರೆಯುವ**

ವಿದ್ಯಾರ್ಥಿಗಳು ಪಾಠವನ್ನು ವೈಯಕ್ತಿಕವಾಗಿ ಓದಲಿ. ಕೆಲವು ವಿದ್ಯಾರ್ಥಿಗಳಲ್ಲಿ ಕಥೆಯನ್ನು ಸ್ವಂತ ವಾಕ್ಯಗಳಲ್ಲಿ ಹೇಳಿಸಬೇಕು. ಬಳಿಕ ಸಂಭಾಷಣೆ ಬರೆಯಲು ತಿಳಿಸುವುದು.

ವೈಯುಕ್ತಿಕ ಬರವಣಿಗೆ – ಗುಂಪು ಮಾಡುವುದು – ಗುಂಪಿನಲ್ಲಿ ಮಂಡನೆ – ಉತ್ತಮ ಪಡಿಸುವುದು – ಗುಂಪಿನ ಮಂಡನೆ – ಅಧ್ಯಾಪಕರ ಆವೃತ್ತಿಯ ಪ್ರದರ್ಶನ – ಉತ್ತಮ ಪಡಿಸಲು ಅವಕಾಶ ನೀಡುವುದು.

ಉತ್ತಮಪಡಿಸಿ ಬರೆದ ಗುಂಪನ್ನು ಅಭಿನಂದಿಸುವುದು.

ಗುರುಗಳು : ಶಿಷ್ಯರೇ, ನಾನು ಹನ್ನೆರಡು ವರ್ಷಗಳ ಕಾಲ ತೀರ್ಥಯಾತ್ರೆಗೆ ಹೋಗುತ್ತಿದ್ದೇನೆ. ಇದೋ, ನನ್ನಲ್ಲಿರುವ ಒಂದು ಸೇರು ಕಡಲೆಯನ್ನು ಸಮಪಾಲು ಮಾಡಿ ನಿಮ್ಮಿಬ್ಬರಿಗೆ ನೀಡುತ್ತೇನೆ. ಇದನ್ನು ನೀವು ಹೇಗೆ ಉಪಯೋಗಿಸಿದ್ದೀರಿ? ಎಂಬುದನ್ನು ಮರಳಿ ಬಂದ ಮೇಲೆ ನೋಡುತ್ತೇನೆ.

ಶಿಷ್ಯರು : ಹಾಗೆಯೇ ಆಗಲಿ ಗುರುದೇವ

(ಹನ್ನೆರಡು ವರ್ಷಗಳ ಬಳಿಕ)

1ನೇ ಶಿಷ್ಯ : ಪ್ರಣಾಮಗಳು ಗುರುದೇವಾ..

ಗುರುಗಳು : ಶುಭವಾಗಲಿ..ಎದ್ದೇಳು.. ಅಂದು ನಾನು ಕೊಟ್ಟ ಕಡಲೆಯನ್ನು ಹೇಗೆ ಉಪಯೋಗಿಸಿದ್ದೀಯಾ?

1ನೇ ಶಿಷ್ಯ : ಹೊಲದಲ್ಲಿ ಬಿತ್ತಿ ಕೃಷಿ ಮಾಡಿ, ಧನ ಸಂಪಾದಿಸಿದೆ. ಅದರಿಂದ ಗೋವುಗಳನ್ನು ಖರೀದಿಸಿ ಸಾಕಿದೆ. ಅಡಕೆ ತೋಟವನ್ನು ಬೆಳೆಸಿದೆ. ಭವ್ಯವಾದ ಬಂಗಲೆಯನ್ನು ಕಟ್ಟಿಸಿದೆ. ಇದೆಲ್ಲವೂ ತಮ್ಮ ಪ್ರಸಾದ...

ಗುರುಗಳು : (ಸಂತೋಷದಿಂದ) ಭಲೇ... ನೀನು ಬುದ್ಧಿವಂತನೇ ಸರಿ... ದೇವರು ನಿನಗೆ ಒಳ್ಳೆಯದನ್ನೇ ಮಾಡಲಿ.

(2ನೇ ಶಿಷ್ಯನ ಬಳಿಯಲ್ಲಿ)

2ನೇ ಶಿಷ್ಯ : ಆಶೀರ್ವದಿಸಿ ಗುರುದೇವಾ......

ಗುರುಗಳು : ನಿನಗೆ ಒಳ್ಳೆಯದಾಗಲಿ.. ಅಂದ ಹಾಗೇ ನಾನು ಕೊಟ್ಟ ಕಡಲೆಯನ್ನು ನೀನು ಹೇಗೆ ಉಪಯೋಗಿಸಿಕೊಂಡೆ?

2ನೇ ಶಿಷ್ಯ : (ಕೈಯಲ್ಲಿರುವ ಡಬ್ಬಿಯನ್ನು ತೋರಿಸುತ್ತಾ) ಇದೋ, ಇಲ್ಲಿದೆ ಗುರುಗಳೇ..

ಗುರುಗಳು : ಇದೇನು?

2ನೇ ಶಿಷ್ಯ : ಇದು ತಾವು ಕೊಟ್ಟ ಕಡಲೆ. ಅದನ್ನು ಈ ಡಬ್ಬದಲ್ಲಿ ಹಾಕಿ, ಬೀಗಮುದ್ರೆ ಮಾಡಿ ಪ್ರತಿದಿನವೂ ಪೂಜಿಸುತ್ತಿದ್ದೇನೆ ಗುರುಗಳೇ....

ಗುರುಗಳು : ಎಲ್ಲಿ ಡಬ್ಬಿಯ ಮುಚ್ಚಳಮನ್ನು ತೆಗೆ. ಕಡಲೆ ಏನಾಗಿದೆಯೆಂದು ನೋಡೋಣ...

2ನೇ ಶಿಷ್ಯ : (ಡಬ್ಬಿಯ ಮುಚ್ಚಳವನ್ನು ತೆಗೆಯುತ್ತಾ) ಇದೋ ಮುಚ್ಚಳವನ್ನು ತೆಗೆದೆ.

ಗುರುಗಳು : ನೋಡು... ನಿನಗೆ ಕೊಟ್ಟ ಕಡಲೆಯೆಲ್ಲಾ ಧೂಳಾಗಿ ಹೋಗಿದೆ. ನೀನು ನನ್ನ ಬುದ್ಧಿಯನ್ನುಪಯೋಗಿಸಿ, ಕಡಲೆಯನ್ನು ಬಳಸುತ್ತಿದಿದ್ದಾರೆ. ಬೇಕಾದಷ್ಟು ಹಣ ಸಂಪಾದಿಸಿ, ಶ್ರೀಮಂತನಾಗುತ್ತಿದ್ದಿ. ನೀನು ಮೂಢ ಭಕ್ತಿಗೆ ಒಳಗಾಗಿ ಕಡಲೆಯನ್ನು ಕಳೆದುಕೊಂಡುದಲ್ಲದೇ, ಹನ್ನೆರಡು ವರ್ಷಗಳನ್ನು ವ್ಯರ್ಥ ಮಾಡಿ ಬಿಟ್ಟೆ. ಬರಿಯ ಪೂಜೆ ಮಾಡಿದರೆ ಹೊಟ್ಟೆ ತುಂಬುವುದಿಲ್ಲ. ಫಲವೂ ಸಿಗುವುದಿಲ್ಲ.

2ನೇ ಶಿಷ್ಯ : ನಾನು ತಿಳಿಯದೇ ತಪ್ಪು ಮಾಡಿ ಬಿಟ್ಟೆ ಕ್ಷಮಿಸಿ ಗುರುಗಳೇ. ಇನ್ನು ಮುಂದೆ ನನ್ನ ಸ್ನೇಹಿತನಂತೆ ನಾನು ಕೂಡ ಮುಂದುವರಿಯುತ್ತೇನೆ.

# 2. ಮಂಗಳ ಗ್ರಹದಲ್ಲಿ ಪುಟ್ಟಿ

## ಪಾಠದೆಡೆಗೆ

ಈ ಪಾಠವನ್ನು ಆರಂಭಿಸುವ ಸಂದರ್ಭದಲ್ಲಿ ವಿದ್ಯಾರ್ಥಿಗಳಲ್ಲಿ ಅವರು ನಿದ್ದೆಯಲ್ಲಿ ಕಂಡ ರಸವತ್ತಾದ ಕನಸುಗಳ ಬಗ್ಗೆ ಕೇಳಬಹುದು. ವಿದ್ಯಾರ್ಥಿಗಳು ತಾವು ಕಂಡ ಕನಸುಗಳನ್ನು ವಿವರಿಸಲು ಅವಕಾಶ ನೀಡಬೇಕು.

## ಚಟುವಟಿಕೆಗಳು

### ಹಾಡುವ

'ಮಂಗಳ ಗ್ರಹದಲ್ಲಿ ಪುಟ್ಟಿ' ಎಂಬ ಹಾಡನ್ನು ವೈಯಕ್ತಿಕವಾಗಿ ಹಾಡಲು ಆಸಕ್ತಿಯಿರುವವರಲ್ಲಿ ಹಾಡಲು ಹೇಳುವುದು. ಬಳಿಕ ಗುಂಪುಗಳಾಗಿ ಮಾಡಿ, ರಾಗ ಹಾಕಲು ತಿಳಿಸುವುದು. ಎಲ್ಲ ಗುಂಪಿನವರಿಗೂ ಹಾಡಲು ಅವಕಾಶ ನೀಡುವುದು. ಉಳಿದ ಗುಂಪಿನವರು ತಮಗೆ ಈಗಾಗಲೇ ತಿಳಿದಿರುವ ಮಾನದಂಡಗಳ ಆಧಾರದಲ್ಲಿ ಮೌಲ್ಯಮಾಪನ ಮಾಡಲಿ. ಉತ್ತಮವಾಗಿ ಹಾಡಿದ ಗುಂಪಿನವರನ್ನು ಅಭಿನಂದಿಸಬೇಕು.

### ಉತ್ತರಿಸುವ

ಪದ್ಯಕ್ಕೆ ಸಂಬಂಧಿಸಿ ನೀಡಿರುವ ಪ್ರಶ್ನೆಗಳಿಗೆ ಉತ್ತರಿಸುವಂತೆ ವಿದ್ಯಾರ್ಥಿಗಳಿಗೆ ಸೂಚನೆ ನೀಡುವುದು ಅಗತ್ಯವಿರುವ ಮಕ್ಕಳು ಹಾಡನ್ನು ಆಶಯಗ್ರಹಣದೊಂದಿಗೆ ಮೌನವಾಗಿ ಓದಲಿ.

ಕೆಲವು ವಿದ್ಯಾರ್ಥಿಗಳಲ್ಲಿ ಅವರು ಬರೆದ ಉತ್ತರವನ್ನು ಮಂಡಿಸಲು ತಿಳಿಸುವುದು. ಉತ್ತರಗಳನ್ನು ಪರಸ್ಪರ ಹೋಲಿಸಿ, ಚರ್ಚಿಸಿ, ಉತ್ತಮಪಡಿಸಿ ಬರೆಯಲು ಅವಕಾಶ ನೀಡಬೇಕು.

### ಪ್ರಾಸಪದ ಬರೆಯುವ

ಈ ಪದ್ಯದಲ್ಲಿರುವ ಪ್ರಾಸಪದಗಳನ್ನು ವೈಯಕ್ತಿಕವಾಗಿ ಕಂಡುಹಿಡಿದು ಬರೆಯಲಿ. ಒಂದಿಬ್ಬರು ವಿದ್ಯಾರ್ಥಿಗಳಿಂದ ಓದಿಸುವುದು. ಬಿಟ್ಟು ಹೋದ ಪ್ರಾಸಪದಗಳನ್ನು ಹುಡುಕಿ ಬರೆಯಲು ಅಧ್ಯಾಪಕರು ಅಗತ್ಯ ಸಹಾಯವನ್ನು ಮಾಡಬೇಕು.

| | | |
|---|---|---|
| ಹಾರುವುದೆಂದರೆ | – | ಹಾರಲು ಹೋದರೆ |
| ಇಷ್ಟ | – | ಕಷ್ಟ |
| ಬಂದಿತ್ತು | – | ತಂದಿತ್ತು |
| ಹಾರಿದಳು | – | ಸೇರಿದಳು |
| ನೋಡಿದರೆ | – | ನಮ್ಮಧರೆ |
| ನೋವಿನಲಿ | – | ಕೇಳಿ ತಿಳಿ |
| ಮರ | – | ಬರ |
| ಮಳೆ | – | ಬೆಳೆ |
| ಸ್ಥಿತಿ | – | ಗತಿ |
| ಹೃದಯ | – | ಧರೆಯ |

### ಸಾಲು ಹುಡುಕುವ

ಕೊಟ್ಟಿರುವ ಸಾಲುಗಳಲ್ಲಿರುವ ಅಡಿಗೆರೆ ಎಳೆದ ಪದಗಳಿಗೆ ಸಮಾನಾರ್ಥ ಪದಗಳಿರುವ ಸಾಲುಗಳನ್ನು ಪದ್ಯದಿಂದ ಹುಡುಕಿ ಬರೆಯಲು ವಿದ್ಯಾರ್ಥಿಗಳಿಗೆ ಸೂಚಿಸಬೇಕು. ಈ ಚಟುವಟಿಕೆಯನ್ನು ಗುಂಪಿನಲ್ಲಿ ನಡೆಸಬಹುದು. ವಿದ್ಯಾರ್ಥಿಗಳು ಪರಸ್ಪರ ಚರ್ಚಿಸಿ, ಸರಿಯಾದ ಸಾಲುಗಳನ್ನು ಬರೆದು ಮಂಡಿಸಲಿ. ಅಗತ್ಯವಿದ್ದಲ್ಲಿ ಅಧ್ಯಾಪಕರು ಸಹಾಯ ಮಾಡಬೇಕು.

1. ಆಕಾಶದ ಒಳಗೆ ಹಾರಿದಳು – ಆಗಸದೊಡಲಿಗೆ ಹಾರಿದಳು
2. ಕಂಡಿತು ಅವಳಿಗೆ ನಮ್ಮ ಭೂಮಿ – ಕಂಡಿತು ಅವಳಿಗೆ ನಮ್ಮ ಧರೆ
3. 'ಯೋಗಿ' ಹೆಸರಿನ ದೊಡ್ಡ ಬಂಡೆ – ಯೋಗಿ ಹೆಸರಿನ ಹೆಬ್ಬಂಡೆ
4. ದುಃಖದ ಕತೆಯನ್ನು ಕೇಳಿ ತಿಳಿ – ದುರಂತ ಕಥೆಯನ್ನು ಕೇಳಿ ತಿಳಿ
5. ಇತ್ತು ನೀರು ಹಸಿರ ಮರ – ಇತ್ತು ಜೀವಜಲ ಹಸಿರು ಮರ

### ಊಹಿಸಿ ಹೇಳುವ

ಊಹಿಸುವುದು ಸೃಜನಶೀಲತೆಯನ್ನು ಪುಷ್ಠೀಕರಿಸುವ ಚಟುವಟಿಕೆಯಾಗಿದೆ. ಈ ಚಟುವಟಿಕೆಯಲ್ಲಿ ವಿದ್ಯಾರ್ಥಿಗಳು, ಅವರಿಗೆ ಹಾರಾಡಲು ಸಾಮರ್ಥ್ಯವಿರುತ್ತಿದ್ದರೆ, ಏನೇನು ಮಾಡಬಹುದಿತ್ತು? ಎಲ್ಲೆಲ್ಲಿ ಸಂಚರಿಸಬಹುದಿತ್ತು? ಇತ್ಯಾದಿ ವಿಚಾರಗಳನ್ನು ಯೋಚಿಸುವಂತೆ ಸೂಕ್ತ ಪ್ರಶ್ನೆಗಳನ್ನು ಅಧ್ಯಾಪಕರು ಕೇಳಬಹುದು. ಪ್ರತಿಯೊಬ್ಬ ವಿದ್ಯಾರ್ಥಿಯನ್ನು ತರಗತಿಯ ಮುಂದೆ ಕರೆದು ತಮ್ಮ ಭಾವನೆಗಳನ್ನು ಬಾಯ್ದೆರೆಯಾಗಿ ತಿಳಿಸಲು ಅವಕಾಶ ಮಾಡಿಕೊಡಬೇಕು.

### ಗದ್ಯ ರೂಪದಲ್ಲಿ ಬರೆಯುವ

ಪದ್ಯದಿಂದ ಆಯ್ದು ಕೊಡಲಾದ ಸಾಲುಗಳನ್ನು ವಿದ್ಯಾರ್ಥಿಗಳು ವೈಯಕ್ತಿಕವಾಗಿ ಓದಿ, ಅವುಗಳನ್ನು ಗದ್ಯ ರೂಪದಲ್ಲಿ ಬರೆಯಲಿ. ಗುಂಪು ಚಟುವಟಿಕೆಯ ಹಂತಗಳನ್ನು ಪಾಲಿಸಿಕೊಂಡು ಚಟುವಟುಕೆಯನ್ನು ಮುಂದುವರಿಸಬೇಕು. ಅಧ್ಯಾಪಕರ ಆವೃತಿ (Teachers Version) ಯ ಆಧಾರದಲ್ಲಿ ಉತ್ತಮಪಡಿಸಲಿ.

1. ಹಸುರಿಲ್ಲದೆ ಒಣಗಿರುವ ಬಯಲುಗಳನ್ನು ಕಂಡು, ಅವಳ ಎಳೆಯ ಹೃದಯವು ಢವಢವ ಎಂದು ಬಡಿಯಲಾರಂಭಿಸಿತು.
2. ಮಳೆ ಬರದೆ, ಬೆಳೆಯನ್ನು ಬೆಳೆಸಲಾಗದೆ ಜೀವಿಗಳು ನಾಶವಾಗಿ, ನಮಗೆ ಈ ಪರಿಸ್ಥಿತಿಯು ಉಂಟಾಯಿತು.
3. ಅವಳಿಗೆ ಈ ಭೂಮಿಯು, ನೇರಳೆ ಬಣ್ಣದ ಬೆಂಚಿನಂತೆ ಕಂಡಿತು.
4. ತಕ್ಷಣ ಅವಳು ಕೆಂಪು ಬಂಡೆಯಲ್ಲಿ, ನೀನು ಹೇಗೆ ಇಲ್ಲಿಗೆ ಬಂದೆ ಎಂದು ಕೇಳಿದಳು.

### ಪದ ಹುಡುಕುವ

ಉದಾಹರಣೆಯಾಗಿ ನೀಡಿದ ಪದಗಳಂತೆ, ಪದ್ಯದಲ್ಲಿರುವ ಇತರ ಒತ್ತಕ್ಷರದ ಪದಗಳನ್ನೂ ವೈಯಕ್ತಿಕವಾಗಿ ಹುಡುಕಿ ಬರೆಯಲಿ. ಅಧ್ಯಾಪಕರ ಸಹಾಯ ಅಗತ್ಯವಿದ್ದಲ್ಲಿ ನೀಡಬೇಕು.

### ಗಟ್ಟಿಯಾಗಿ ಓದುವ

ಒತ್ತಕ್ಷರದ ಪದಗಳ ಉಚ್ಛಾರ ರೀತಿಯನ್ನು ತಿಳಿಯಲು ಈ ಚಟುವಟಿಕೆಯನ್ನು ನೀಡಲಾಗಿದೆ. ಕೆಲವು ವಿದ್ಯಾರ್ಥಿಗಳಲ್ಲಿ

ಒತ್ತಕ್ಷರದ ಪದಗಳಿರುವ ಸಾಲುಗಳನ್ನು ಗಟ್ಟಿಯಾಗಿ ಓದಲು ಹೇಳಬೇಕು. ಉಳಿದ ವಿದ್ಯಾರ್ಥಿಗಳು ಅವರು ಹೇಳಿದಂತೆ ಪುನಃ ಹೇಳಲಿ. ಅಗತ್ಯವಿದ್ದಲ್ಲಿ ಅಧ್ಯಾಪಕರು ಸಹಾಯ ಮಾಡಬೇಕು.

**ಘೋಷಣಾ ವಾಕ್ಯ ಬರೆಯುವ**

ಪರಿಸರ ಸಂರಕ್ಷಣೆಗೆ ಸಂಬಂಧಿಸಿದಂತೆ ಎರಡು ಘೋಷಣಾ ವಾಕ್ಯಗಳನ್ನು ಪಠ್ಯದಲ್ಲಿ ನೀಡಲಾಗಿದೆ. ಇದೇ ರೀತಿಯ ಬೇರೆ ಘೋಷಣಾವಾಕ್ಯಗಳನ್ನು ರಚಿಸಲು ತಿಳಿಸುವುದು. ಗುಂಪು ಚಟುವಟಿಕೆಯ ಹಂತಗಳನ್ನು ಪಾಲಿಸಬೇಕು.

| | | |
|---|---|---|
| **ಊರಿಗೊಂದು ಕಾನನ**<br>**ತಣಿಸುವುದು ಕಣ್ಮನ** | **ಗಿಡಮರಗಳ ಬಳಿ**<br>**ಸಿಗುವುದು ಹಿತಗಾಳಿ** | **ನದಿ, ತೋಡು, ತೊರೆಗಳ ನೀರು**<br>**ಜೀವಜಾಲಗಳ ತಾಯಿ ಬೇರು** |

**ಸಾಲು ಮುಂದುವರಿಸುವ**

ಕೊಟ್ಟಿರುವ ಪದ್ಯದ ಸಾಲುಗಳ ಆಶಯವನ್ನು ಓದಿ ತಿಳಿಯಲಿ, ಅದೇ ಆಶಯವು ಮುಂದುವರಿಯುವಂತೆ ಪದ್ಯದ ಸಾಲುಗಳನ್ನು ಸೇರಿಸಿ ಬರೆಯಲಿ. ವಿದ್ಯಾರ್ಥಿಗಳು ತಮ್ಮ ಭಾವನೆಗಳನ್ನು ವೈಯಕ್ತಿಕವಾಗಿ ಬರೆಯಲಿ. ವಿದ್ಯಾರ್ಥಿಗಳು ತಾವು ಬರೆದ ಪದ್ಯವನ್ನು ಮಂಡಿಸಲಿ. ಅಧ್ಯಾಪಕರ ಸಹಾಯದೊಂದಿಗೆ ಉತ್ತಮಪಡಿಸಲಿ.

ಅಂಗಳದಲ್ಲಿ ಆಡುವುದೆಂದರೆ
ಪುಟಾಣಿ ಕಿಟ್ಟಿಗೆ ಬಲು ಇಷ್ಟ
ಕೈಗೋ, ಕಾಲಿಗೋ, ತಲೆಗೋ, ಕಣ್ಣಿಗೋ
ಗಾಯಗಳಾದರೆ? ಅದು ಕಷ್ಟ

ಮಣ್ಣನು ಕಲಸಿ ಮನೆಯನು ಮಾಡುವ
ಮಣ್ಣಿನ ಆಟವು ಬಲು ಇಷ್ಟ
ಅಪ್ಪನ ಕೈಯಲಿ ಬೆತ್ತವು ಕಂಡರೆ
ಏಟದು ಬಿದ್ದರೆ? ಬಲು ಕಷ್ಟ

ಇದೇ ರೀತಿಯಲ್ಲಿ ಇತರ ಆಟಗಳ ಬಗ್ಗೆ ಸಾಲುಗಳನ್ನು ರಚಿಸಿ, ರಸವತ್ತಾದ ಹಾಡನ್ನು ಬರೆಯಲು ಅವಕಾಶ ನೀಡಬೇಕು.

**ಸಾರಂಶ ಬರೆಯುವ**

ವಿದ್ಯಾರ್ಥಿಗಳು ಪದ್ಯವನ್ನು ವೈಯಕ್ತಿಕವಾಗಿ ಓದಲಿ. ಬಳಿಕ ಗುಂಪು ಚಟುವಟಿಕೆಯ ಹಂತಗಳಲ್ಲಿ ಚಟುವಟಿಕೆಯನ್ನು ಮುಂದುವರಿಸಬೇಕು.

'ಮಂಗಳ ಗ್ರಹದಲ್ಲಿ ಪುಟ್ಟಿ' ಎಂಬ ಹಾಡನ್ನು ಶ್ರೀ ಸಿ.ಎಂ. ಗೋವಿಂದ ರೆಡ್ಡಿಯವರು ಬಹಳ ರಸವತ್ತಾಗಿ ಬರೆದಿದ್ದಾರೆ. ಈಕವಿತೆಯಲ್ಲಿ ಅವರು ಒಬ್ಬಳು ಹುಡುಗಿಯು ಕಾಣುವ ಕನಸಿನ ಬಗ್ಗೆ ತಿಳಿಸಿದ್ದಾರೆ. ರೆಕ್ಕೆಗಳನ್ನು ಪಡೆದ ಪುಟ್ಟಿ ಎಂಬ ಹುಡುಗಿಯು ಖುಷಿಯಿಂದ ಆಕಾಶದಲ್ಲಿ ಹಾರುತ್ತಾ ಹಾರುತ್ತಾ ಚಂದ್ರನಲ್ಲಿಗೆ ತಲುಪಿದಳು. ಅಲ್ಲಿಂದ ಭೂಮಿಯ ಕಡೆಗೆ ನೋಡಿದಾಗ, ಭೂಮಿಯು ನೇರಳೆ ಬಣ್ಣದ ಚೆಂಡಿನ ಹಾಗೆ ಕಂಡಿತು. ಚಂದ್ರನಿಂದ ಮಂಗಳನಲ್ಲಿಗೆ ಹೋಗಲು, ಪುಟ್ಟಿಯು ಮತ್ತೆ ಹಾರಿದಳು

ಅಲ್ಲಿ, ಅವಳು ಯಾವುದೇ ಜೀವಿಗಳಿಲ್ಲದ, ಕಾದು ಕೆಂಡವಾಗಿದ್ದ ಮಂಗಳನನ್ನು ಕಂಡಳು. ದೂರದಲ್ಲಿ ಕಾಣುತ್ತಿದ್ದ ಒಂದು ಹೆಬ್ಬಂಡೆಯಲ್ಲಿ 'ನೀನು ಹೇಗೆ ಇಲ್ಲಿಗೆ ಬಂದೆ' ಎಂದು ಕೇಳಿದಳು. ಆಗ ಬಂಡೆಯು ಕಣ್ಣೀರು ಸುರಿಸುತ್ತಾ ಮಂಗಲ ಗ್ರಹದ ನೋವಿನ ಕಥೆಯನ್ನು ಹೇಳತೊಡಗಿತು. 'ಹಿಂದೆ ಈ ಗ್ರಹದಲ್ಲಿ ಗಿಡಮರಗಳು, ಜೀವಿಗಳು ಎಲ್ಲವೂ ಇದ್ದುವು. ಜನರು ಗಿಡಮರಗಳನ್ನು ನಾಶ ಮಾಡಿದಾಗ ಇಲ್ಲಿ ಬರಗಾಲ ಬಂತು. ಹೀಗೆ ಮಳೆ–ಬೆಳೆ ನಾಶವಾಗಿ ನಮಗೆ ಈ ಸ್ಥಿತಿ ಉಂಟಾಯಿತು. ನಿಮ್ಮ ಭೂಮಿಯಲ್ಲಿಯ ಕಾಡು ನಾಶವಾದರೆ ನಿಮಗೂ ಇದೇ ಗತಿ ಕಾಣಬಹುದು' ಎಂದಿತು. ಆ ಹೆಬ್ಬಂಡೆ ಮಂಗಳನ ಅವಸ್ಥೆಯನ್ನು ಕಂಡು ಹೆದರಿದ ಪುಟ್ಟಿಯು ಭೂಮಿಯಲ್ಲಿ ಹಸಿರನ್ನು ಉಳಿಸಿ ಬೆಳೆಸುತ್ತೇನೆಂದು ಹೇಳಿ ಭೂಮಿಗೆ ಬಂದಳು. ಎಲ್ಲರನ್ನೂ ಕರೆದು ಕಾಡನ್ನು ಉಳಿಸಲು ಗಿಡ ನೆಟ್ಟು ಬೆಳೆಸಲು ಹೇಳಿ, ತಾನೂ ಕೂಡ ಅವರ ಜೊತೆ ಸೇರಿ ಹರುಷದಿಂದ ಕುಣಿದಾಡಿದಳು.

ಈ ರೀತಿಯಲ್ಲಿ ನಾವು ಪರಿಸರ ಸಂರಕ್ಷಣೆ ಮಾಡಬೇಕೆಂದು ಕವಿಗಳು ಈ ಸಂಚಿಕೆಯಲ್ಲಿ ತಿಳಿಸಿದ್ದಾರೆ.

### ಟಿಪ್ಪಣಿ ಬರೆಯುವ

ಕೊಟ್ಟಿರುವ ಪ್ರಶ್ನೆಯ ಬಗ್ಗೆ ತಮ್ಮ ಅಭಿಪ್ರಾಯಗಳನ್ನು ತಿಳಿಸಲು ವಿಧ್ಯಾರ್ಥಿಗಳಿಗೆ ಅವಕಾಶ ನೀಡಬೇಕು.ಬಳಿಕ ವಿದ್ಯಾರ್ಥಿಗಳು ಗುಂಪು ಚಟುವಟಿಕೆಯ ಹಂತಗಳಲ್ಲಿ ಹಾದು ಟಿಪ್ಪಣಿಯನ್ನು ಬರೆದು ಉತ್ತಮಪಡಿಸಲಿ. ಅಗತ್ಯ ಸಹಾಯವನ್ನು ಅಧ್ಯಾಪಕರು ನೀಡಬೇಕು.

### ಟಿಪ್ಪಣಿ

ಭೂಮಿಯಲ್ಲಿ ಪ್ರಾಣಿಗಳಂತೆ ಸಸ್ಯಗಳಿಗೂ ಬದುಕುವ ಹಕ್ಕಿದೆ. ಸಸ್ಯಗಳಿಗೂ ಪ್ರಾಣಿಗಳಿಗೂ ಪರಸ್ಪರ ಸಂಬಂಧವಿದೆ ಪ್ರಾಣಿ – ಪಕ್ಷಿಗಳಿಗೆ ಅಗತ್ಯವಾದ ಗಾಳಿ, ಆಹಾರ, ಹಣ್ಣುಗಳು ಸಸ್ಯಗಳಿಂದ ಸಿಗುತ್ತವೆ. ಒಂದು ವೇಳೆ ಗಿಡಮರಗಳು ನಾಶವಾದರೆ, ಪ್ರಾಣಿ ಪಕ್ಷಿಗಳಿಗೆ ಉಸಿರಾಡಲು ಅಗತ್ಯವಾದ ಗಾಳಿ ಸಿಗಲಿಕ್ಕಿಲ್ಲ ಹಣ್ಣುಗಳು,ಧಾನ್ಯಗಳು, ಸಿಗದೇ ನಾವೆಲ್ಲರೂ ಸಾಯಬಹುದು. (ಮನೆ ಕಟ್ಟಲು, ಮೇಜು ಕುರ್ಚಿ, ಬೆಂಚುಗಳನ್ನು ಮಾಡಲು ಮರಮಟ್ಟುಗಳು ಸಿಗಲಿಕ್ಕಿಲ್ಲ.)

### ಸಂಗ್ರಹಿಸಿ ಬರೆಯುವ

ಉದಾಹರಣೆಯಾಗಿ ನೀಡಿರುವ ಪದಗಳ ಆಧಾರದಲ್ಲಿ ಅದೇ ರೀತಿಯ ಇತರ ಪದಗಳನ್ನು ಸಂಗ್ರಹಿಸಿ ವೈಯಕ್ತಿಕವಾಗಿ ಬರೆಯಲು ತಿಳಿಸುವುದು. ಅಧ್ಯಾಪಕರು ಅಗತ್ಯ ಸಹಾಯವನ್ನು ಮಾಡಬೇಕು.

ಒಣಒಣ ಗುಟ್ಟು

ಢವಢವ ಗುಟ್ಟು

ಕಿರಿಕಿರಿ ಸದ್ದು

ಹಿರಿಹಿರಿ ಹಿಗ್ಗು

### ಪೂರ್ತಿಗೊಳಿಸುವ

ಪದ್ಯದ ಆಧಾರದಲ್ಲಿ ಖಾಲಿ ಬಿಟ್ಟ ಸ್ಥಳಗಳನ್ನು ಸೂಕ್ತ ಪದಗಳಿಂದ ಪೂರ್ತಿಗೊಳಿಸಲು ತಿಳಿಸಬೇಕು. ವಿದ್ಯಾರ್ಥಿಗಳು ವೈಯಕ್ತಿಕವಾಗಿ ಈ ಚಟುವಟಿಕೆಯನ್ನು ನಡೆಸಲಿ.

1. ಕಣ್ಣೀರನು 2. ಗಿಡಮರ 3. ಸಸಿಗಳ 4. ಚೆಂಡಿನ 5. ಯೋಗಿ

ಅಧ್ಯಾಪಕರು ವಿದ್ಯಾರ್ಥಿಗಳೊಂದಿಗೆ ಚರ್ಚಿಸಿ ಉತ್ತರಗಳನ್ನು ತಿಳಿಸಬೇಕು.

## ವಾಕ್ಯವನ್ನು ರಚಿಸಿ

ಮಾದರಿಯಾಗಿ ನೀಡಿರುವ ವಾಕ್ಯವನ್ನು ವಿಧ್ಯಾರ್ಥಿಗಳು ಓದಲಿ. ಬಳಿಕ ಕೊಟ್ಟಿರುವ ಪದಗಳನ್ನು ಬದಲಾಯಿಸಿ ಬರೆಯಲಿ. ನಂತರ ಗುಂಪಿನಲ್ಲಿ ವಾಕ್ಯರಚನೆ ಮಾಡಲು ಅವಕಾಶ ನೀಡಬೇಕು. ಪ್ರತಿ ಗುಂಪಿನವರಿಂದ ಮಂಡಿಸಲು ತಿಳಿಸಬೇಕು, ಮಂಡನೆಯ ಸಂದರ್ಭದಲ್ಲಿ (ಉಳಿದ ಗುಂಪಿನವರು ಚರ್ಚಿಸಿ) ವಾಕ್ಯರಚನೆಯಲ್ಲಿ ದೋಷಗಳಿದ್ದರೆ, ಗುಂಪಿನವರು ಸರಿಪಡಿಸಬೇಕು.

1. ಹಗೆ–ಹಾಗೆ
   - ಜ್ಞಾನವಂತರು ಯಾರಲ್ಲಿಯೂ ಹಗೆ ಸಾಧಿಸುವುದಿಲ್ಲ.
   - ನಾವು ಕೂಡಾ ಅವರ ಹಾಗೆ ನಡೆದುಕೊಳ್ಳಬೇಕು.
2. ದರ–ದಾರ
   - ಉತ್ಪಾದನೆ ಕಡಿಮೆಯಾದಾಗ, ವಸ್ತುಗಳ ದರ ಹೆಚ್ಚಾಗುತ್ತದೆ.
   - ರೇಶ್ಮೆ ಹುಳದ ಗೂಡನ್ನು ಸಂಸ್ಕರಿಸಿ, ರೇಶ್ಮೆ ದಾರವನ್ನು ತಯಾರಿಸುತ್ತಾರೆ.
3. ಜಲ–ಜಾಲ
   - ಜಲವು ಜೀವಿಗಳ ಉಳಿವಿಗೆ ಅಗತ್ಯವಾಗಿದೆ.
   - ಪೋಲಿಸರು ಕಳ್ಳರ ಜಾಲವನ್ನು ಹಿಡಿಯಲು ಬಲೆ ಬೀಸಿದರು.
4. ಪದ–ಪಾದ
   - ನಾವು ಮಾತನಾಡುವಾಗ ಒಳ್ಳೆಯ ಪದಗಳನ್ನು ಬಳಸಬೇಕು.
   - ನಾನು ಅಮ್ಮನ ಪಾದವನ್ನು ಮುಟ್ಟಿ ನಮಸ್ಕರಿಸಿದೆನು.

## ಒಗಟು ಬಿಡಿಸುವ

ಪದ್ಯದಲ್ಲಿ ನೀಡಿರುವ ಒಗಟಿಗೆ ವಿಧ್ಯಾರ್ಥಿಗಳು ವೈಯುಕ್ತಿಕವಾಗಿ ಉತ್ತರವನ್ನು ಕಂಡುಹಿಡಿಯಲಿ ಪರಸ್ಪರ ಚರ್ಚಿಸಿ, ಉತ್ತರವು ಸರಿಯಾಗಿದೆಯೋ? ಎಂದು ಖಚಿತಪಡಿಸಲು ಸಂದರ್ಭವನ್ನು ಒದಿಸಬೇಕು

| | |
|---|---|
| 1. | 5. |
| 2. | 6. |
| 3. | 7. |
| 4. | 8. |

# 3. ವಾಲ್ಟ್ ಡಿಸ್ನಿ

## ಚಟುವಟಿಕೆಗಳು

### ಚರ್ಚಿಸುವ

ಪಠ್ಯದ ವಿಷಯದ ಬಗ್ಗೆ ಪ್ರಶ್ನಿಸುತ್ತಾ, ದೂರದರ್ಶನದಲ್ಲಿ ಬಿತ್ತರಗೊಳ್ಳುವ ಕಾರ್ಟೂನ್ ಚಿತ್ರಗಳ ಬಗ್ಗೆ ಚರ್ಚಿಸಬೇಕು. ಇಲ್ಲಿ ಕೆಲವು ಪ್ರಶ್ನೆಗಳನ್ನು ಕೇಳಬಹುದು.

- ನೀವು ದೂರದರ್ಶನದಲ್ಲಿ ಯಾವ ಯಾವ ಕಾರ್ಯಕ್ರಮಗಳನ್ನು ವೀಕ್ಷಿಸುತ್ತೀರಿ?
- ಕಾರ್ಟೂನ್ ಚಿತ್ರಗಳನ್ನು ವೀಕ್ಷಿಸುತ್ತೀರೋ? ಯಾಕೆ?
- ನಿರಂತರವಾಗಿ ಕಾರ್ಟೂನ್ ಚಿತ್ರಗಳನ್ನು (ದೂರದರ್ಶನ) ನೋಡುವುದರಿಂದ ಏನಾದರೂ ತೊಂದರೆಗಳಿವೆಯೇ?

ಈ ಚರ್ಚೆಯ ಮೂಲಕ ನಿರಂತರ ದೂರದರ್ಶನ ವೀಕ್ಷಣೆಯು ಕಣ್ಣಿಗೆ ಆರೋಗ್ಯಕ್ಕೆ ಹಾನಿ, ಸಮಯ ಕಸಿಯುತ್ತದೆ. ಕಲಿಕೆಗೆ ತೊಂದರೆಯನ್ನುಂಟುಮಾಡುತ್ತದೆ. ಇತ್ಯಾದಿ ವಿಷಯಗಳನ್ನು ತಿಳಿಸುವಂತಿರಬೇಕು.

### ಉತ್ತರಿಸುವ

ಗದ್ಯದ ಆಶಯಗ್ರಹಣಕ್ಕಿರುವ ಪ್ರಶ್ನೆಗಳಿಗೆ ವಿದ್ಯಾರ್ಥಿಗಳು ಸ್ವತಃ ಉತ್ತರಿಸಲಿ. ವಿದ್ಯಾರ್ಥಿಗಳು ನೋಟುಪುಸ್ತಕಗಳನ್ನು ಪರಸ್ಪರ ಕೈ ಬದಲಾಯಿಸಿ, ಮೌಲ್ಯಮಾಪನ ಮಾಡಲಿ. ಅಧ್ಯಾಪಕರು ಅಗತ್ಯ ಸಂದರ್ಭದಲ್ಲಿ ಸಹಾಯ ಮಾಡುವುದು.

### ಚಿತ್ರ ಬಿಡಿಸುವ

ಕಲಾ ಶಿಕ್ಷಣದ ಭಾಗವಾಗಿ ಈ ಚಟುವಟಿಕೆಯನ್ನು ನಡೆಸಬೇಕು. ವಿದ್ಯಾರ್ಥಿಗಳಿಗೆ ಇಷ್ಟವಿರುವ ಒಂದು ಕಾರ್ಟೂನ್ ಚಿತ್ರವನ್ನು ಬಿಡಿಸಲು ಹೇಳುವುದು. ಬಣ್ಣ ಕೊಡಲು ಹೇಳುವುದು. ಪೋರ್ಟ್‌ಪೋಲಿಯೋ ಸಂಗ್ರಹವಾಗಿಡಲು ತಿಳಿಸಬೇಕು.

### ಚಿತ್ರ ನೋಡುವ, ಕಥೆ ಹೇಳುವ

ICT ಯ ಮೂಲಕ ವಾಲ್ಟ್ ಡಿಸ್ನಿ ಯ ಕಾರ್ಟೂನ್ ಚಿತ್ರವನ್ನು ಪ್ರದರ್ಶಿಸುವುದು. ಬಳಿಕ ವಿದ್ಯಾರ್ಥಿಗಳು ವೈಯಕ್ತಿಕವಾಗಿ ಕಥೆಯನ್ನು ಬರೆಯಲಿ. ಗುಂಪು ಚಟುವಟಿಕೆಯ ಹಂತಗಳನ್ನು ಪಾಲಿಸಿಕೊಂಡು ಉತ್ತಮವಾಗಿ ಬರೆಯಲಿ.

### ಜಾಹೀರಾತು ಸಂಗ್ರಹಿಸುವ

ದಿನಪತ್ರಿಕೆ, ವಾರಪತ್ರಿಕೆ ಇತ್ಯಾದಿಗಳಲ್ಲಿ ಬರುವ ವಿವಿಧ ರೀತಿಯ ಜಾಹೀರಾತುಗಳನ್ನು ವಿದ್ಯಾರ್ಥಿಗಳು ಸಂಗ್ರಹಿಸಿ ತರಲಿ. ತರಗತಿಯಲ್ಲಿ ವಿದ್ಯಾರ್ಥಿಗಳನ್ನು ಗುಂಪುಗಳಾಗಿ ಮಾಡಿ, ಜಾಹೀರಾತುಗಳನ್ನು ಅವುಗಳ ವಿಷಯದ (ಆಶಯ) ಆಧಾರದಲ್ಲಿ ವರ್ಗೀಕರಿಸಲಿ.

ವಿವಿಧ ರೀತಿಯ ಜಾಹೀರಾತುಗಳ ಬಗ್ಗೆ ಚರ್ಚಿಸಿ ತಿಳಿಯಲಿ.

**ಭಿತ್ತಿಪತ್ರ ತಯಾರಿಸುವ**

ವಿದ್ಯಾರ್ಥಿಗಳಿಗೆ ಈಗಾಗಲೇ ಭಿತ್ತಿಪತ್ರದ ಪರಿಚಯವಿದೆ. ವಾಲ್ಟ್ ಡಿಸ್ನಿಯ ಚಲನಚಿತ್ರ ಪ್ರದರ್ಶನದ ಬಗ್ಗೆ ಮಾಹಿತಿ ನೀಡುವ ಭಿತ್ತಿಪತ್ರವನ್ನು ತಯಾರಿಸಲು ತಿಳಿಸುವುದು. ಚಟುವಟಿಕೆಯನ್ನು ವಿದ್ಯಾರ್ಥಿಗಳು ವೈಯಕ್ತಿಕವಾಗಿ ಮಾಡಲಿ. ಅಧ್ಯಾಪಕರ ಆವೃತ್ತಿ (Teahers version) ಯನ್ನು ಪ್ರದರ್ಶನ, ಉತ್ತಮಪಡಿಸಲಿ. ಅವಕಾಶ ನೀಡುವುದು.

**ಸರಕಾರಿ ಹಿರಿಯ ಪ್ರಾಥಮಿಕ ಶಾಲೆ, ಕಜೆಪಾಡಿ**

**ವಾಲ್ಟ್ ಡಿಸ್ನಿಯ**

ಚಲನಚಿತ್ರ ಪ್ರದರ್ಶನ

ನಡೆಯಲಿದೆ.

**ದಿನಾಂಕ : 20.2.2016 ಅಪರಾಹ್ನ 2 ಗಂಟೆಗೆ**

**ಸ್ಥಳ : ಶಾಲಾ ಸಭಾಂಗಣ**

***ಸರ್ವರಿಗೂ ಆದರದ ಸ್ವಾಗತ***

**ಸಂದರ್ಶನ ನಡೆಸುವ**

ಈಗಾಗಲೇ ತಿಳಿದಿರುವಂತೆ, ಸಂದರ್ಶನವು, ಒಂದು ವಿಷಯದ ಮಾಹಿತಿ ಸಂಗ್ರಹಕ್ಕಿರುವ ಒಂದು ವಿಧಾನವಾಗಿದೆ. ವಿಷಯಕ್ಕೆ ಸಂಬಂಧಿಸಿರುವ ಪ್ರಶ್ನೆಗಳನ್ನು ಕೇಳುವುದರ ಮೂಲಕ ಮಾಹಿತಿಯನ್ನು ಸಂಗ್ರಹಿಸುವ ಸಾಮರ್ಥ್ಯವನ್ನು ಮಕ್ಕಳು ಗಳಿಸಬೇಕು.

ಈ ಚಟುವಟಿಕೆಯಲ್ಲಿ ಚಿತ್ರ ಕಲೆಗೆ ಸಂಬಂಧಿಸಿದ ಸಂದರ್ಶನಕ್ಕೆ ಅಗತ್ಯವಿರುವ ಪ್ರಶ್ನಾವಳಿಯನ್ನು ತಯಾರಿಸಲು ವಿದ್ಯಾರ್ಥಿಗಳಿಗೆ ಸೂಚಿಸಬೇಕು.

ವಿದ್ಯಾರ್ಥಿಗಳು ವೈಯಕ್ತಿಕವಾಗಿ ಪ್ರಶ್ನೆಗಳನ್ನು ತಯಾರಿಸಲಿ.

- ಗುಂಪು ಮಾಡುವುದು.
- ಗುಂಪಿನಲ್ಲಿ ಪ್ರಶ್ನೆಗಳನ್ನು ಓದಿ ಮಂಡಿಸಲಿ.
- ಉತ್ತಮಪಡಿಸುವುದು.
- ಗುಂಪಿನ ಮಂಡನೆ

ಹೀಗೆ ತರಗತಿ ಮಟ್ಟದಲ್ಲಿ ಯೋಗ್ಯ ಪ್ರಶ್ನಾವಳಿಯನ್ನು ತಯಾರಿಬೇಕು.

ಊರಿನ ಚಿತ್ರ ಕಲಾವಿದರನ್ನು ತರಗತಿಗೆ ಆಮಂತ್ರಿಸಿಯೋ ಅಥವಾ ಅವಕಾಶವಿದ್ದರೆ ಅವರ ಮನೆಗೆ ತೆರಳಿಯೋ, ಅವರ ಸಂದರ್ಶನವನ್ನು ನಡೆಸಬೇಕು. ಕೇಳಿ ತಿಳಿದ ವಿಚಾರಗಳನ್ನು, ವಿದ್ಯಾರ್ಥಿಗಳಲ್ಲಿ ಟಿಪ್ಪಣಿಯಾಗಿ ಬರೆದಿಡಲು ಸೂಚಿಸಬೇಕು.

**ಪ್ರಶ್ನಾವಳಿ**

- ನಿಮಗೆ ಚಿತ್ರಕತೆಯಲ್ಲಿ ಆಸಕ್ತಿ ಮೂಡಲು ಕಾರಣವೇನು?
- ನಿಮ್ಮ ಮನೆಯಲ್ಲಿ ಬೇರೆ ಯಾರಿಗಾದರೂ ಚಿತ್ರಕಲೆಯಲ್ಲಿ ಆಸಕ್ತಿಯಿದೆಯೇ?
- ನಿಮ್ಮ ಎಷ್ಟನೇ ವಯಸ್ಸಿನಲ್ಲಿ ಚಿತ್ರಕಲೆಯತ್ತ ಆಕರ್ಷಿತರಾದಿರಿ?
- ಚಿತ್ರಕಲೆಯನ್ನು ಹೇಗೆ ಅಭ್ಯಾಸ ಮಾಡಿದಿರಿ?
- ಚಿತ್ರಕಲೆಯಲ್ಲಿ ತೊಡಗಿಸಿಕೊಂಡ ಮೇಲೆ ನಿಮ್ಮ ಬದುಕಿನಲ್ಲಿ ಆದ ಬದಲಾವಣೆಗಳೇನು?
- ಈ ವಿಚಾರದಲ್ಲಿ ನಿಮಗೆ ಯಾರೆಲ್ಲಾ ಪ್ರೋತ್ಸಾಹಿಸುತ್ತಿದ್ದಾರೆ?
- ಚಿತ್ರಕಲೆಗೆ ಸಂಬಂಧಪಟ್ಟು ನಿಮ್ಮ ಮುಂದಿನ ಯೋಜನೆಗಳೇನು?
- ನೀವು ಬಿಡಿಸಿದ ಚಿತ್ರಗಳಲ್ಲಿ ನಿಮಗೆ ಅತ್ಯಂತ ಹೆಚ್ಚು ಇಷ್ಟವಾದ ಚಿತ್ರ ಯಾವುದು?

**ಊಹಿಸಿ ಬರೆಯುವ**

ಪಠ್ಯದಲ್ಲಿ ನೀಡಿರುವ ಮಿಕ್ಕಿ ಮೌಸ್ ಚಿತ್ರವನ್ನು ನೋಡಿ. ಆಶಯಗ್ರಹಣ, ಮಿಕ್ಕಿಮೌಸ್ ಏನು ಹೇಳಿರಬಹುದು? ಎಂಬುದನ್ನು ಊಹಿಸಿ ಬರೆಯಲಿ. ಇದು ವೈಯಕ್ತಿಕವಾಗಿ ನಡೆಸಬೇಕಾದ ಚಟುವಟಿಕೆಯಾಗಿದೆ. ತಾವು ಊಹಿಸಿ ಬರೆದ ವಿಷಯವನ್ನು ಪ್ರತಿಯೊಬ್ಬರೂ ಮಂಡಿಸಲಿ. ಉತ್ತಮಪಡಿಸಲಿ. ಅಧ್ಯಾಪಕರು ಸಹಾಯ ಮಾಡಲಿ.

> ಅದೋ, ಅಲ್ಲಿ ನೋಡಿರಿ. ಎಷ್ಟು ಸುಂದರವಾಗಿದೆ! ಎಷ್ಟು ಎತ್ತರವಾಗಿದೆ? ಅದರ ತುತ್ತತುಡಿಯ ವರೆಗೆ ನಾನು ಏರಬಲ್ಲೆ. ನೀವು ಏರಬಲ್ಲಿರಾ?

**ವ್ಯಂಗ್ಯ ಚಿತ್ರ ಸಂಗ್ರಹಿಸುವ**

ಪೋರ್ಟ್‌ಪೋಲಿಯೋ ಸಂಗ್ರಹಕ್ಕೆ ಬೇಕಾಗಿ ವಿವಿಧ ಪತ್ರಿಕೆಗಳಲ್ಲಿ ಬರುವ ವ್ಯಂಗ್ಯ ಚಿತ್ರಗಳನ್ನು ವಿದ್ಯಾರ್ಥಿಗಳು ಸಂಗ್ರಹಿಸಿ ತರಲಿ. ತರಗತಿಯ ಭಿತ್ತಿಪತ್ರಿಕೆಯಲ್ಲಿ ಪ್ರದರ್ಶಿಸಲು ತಿಳಿಸುವುದು.

## ಮೌಲ್ಯಮಾಪನ ಚಟುವಟಿಕೆಗಳು

I ಒಂದೇ ಪದದಲ್ಲಿ ಉತ್ತರಿಸಿರಿ.

1. ಪವಿತ್ರ ಸ್ಥಳಗಳ ದರ್ಶನಕ್ಕಾಗಿ ಮಾಡುವ ಯಾತ್ರೆ (1)

2. ಲೇಖನ ಚಿಹ್ನೆ ಸೇರಿಸಿ ಬರೆಯಿರಿ.

ಓರ್ವ ಗುರುಗಳ ಬಳಿ ಇಬ್ಬರು ಶಿಷ್ಯರಿದ್ದರು ಗುರುಗಳು ಒಂದು ದಿನ ನಾನು ತೀರ್ಥ ಯಾತ್ರೆಗೆ ಹೋಗಿ ಬರುತ್ತೇನೆ ಹಿಂತಿರುಗಲು ಹನ್ನೆರಡು ವರ್ಷಗಳಾಗಬಹುದು ನನ್ನಲ್ಲಿ ಒಂದು ಸೇರು ಕಡಲೆಯಿದೆ ಅದನ್ನು ನಿಮ್ಮಿಬ್ಬರಿಗೆ ಸಮ ಪಾಲು ಮಾಡಿ ಕೊಡುತ್ತೇನೆ. ಅದನ್ನು ಹೇಗೆ ಉಪಯೋಗಿಸಿದ್ದೀರಿ ಎಂಬುದನ್ನು ತೀರ್ಥ ಯಾತ್ರೆ ಮುಗಿಸಿಕೊಂಡು ಬಂದ ನಂತರ ನೋಡುತ್ತೇನೆ ಎಂದು ಹೇಳಿ ತೀರ್ಥಯಾತ್ರೆಗೆ ಹೊರಟರು. (2)

3. ಗುರುಗಳು ಅರ್ಧ ಸೇರು ಕಡಲೆಯನ್ನು ನಿಮಗೆ ಕೊಟ್ಟಿದ್ದರೆ ನೀವೇನು ಮಾಡುವಿರಿ? ಊಹಿಸಿ ಬರೆಯಿರಿ. (2)

II

1. ಪದವನ್ನು ಕಂಡುಹುಡುಕಿರಿ. (1)

ಮಸಿಹರುರ

2. ಬಂಡೆಯು ಕಣ್ಣೀರು ಸುರಿಸುತ್ತಾ ಪುಟ್ಟಿಯೊಡನೆ ಹೇಳಿದ್ದು ಏನು? (2)

3. ಕೆಳಗಿನ ಪದವು ಉತ್ತರವಾಗಿ ಸಿಗುವಂತೆ ಒಗಟು ರಚಿಸಿರಿ – 'ಚಂದ್ರ' (2)

III ಸರಿಯಾದ ಉತ್ತರವನ್ನು ಆರಿಸಿ ಬರೆಯಿರಿ.

1. ವಾಲ್ಟ್‌ಡಿಸ್ನಿಗೆ ಗ್ಯಾರೇಜಿನಲ್ಲಿ ಯಾರ ಸ್ನೇಹ ಲಭಿಸಿತು? (1)

(ಇಲಿ, ಬೆಕ್ಕು, ನಾಯಿ)

2. ಸಿನಿಮಾ ನಟರೊಬ್ಬರ ಸಂದರ್ಶನವನ್ನು ನಡೆಸಲು ಬೇಕಾಗಿ ಎರಡು ಪ್ರಶ್ನೆಗಳನ್ನು ತಯಾರಿಸಿರಿ (2)

3. ನಿಮ್ಮ ಶಾಲಾ ವಾರ್ಷಿಕೋತ್ಸವದ ಪ್ರಚಾರಕ್ಕಾಗಿ ಒಂದು ಭಿತ್ತಿಪತ್ರವನ್ನು ತಯಾರಿಸಿರಿ. (2)